ಅಧ್ಯಕ್ಷರು : ತಮ್ಮಲ್ಲಿರತಕ್ಕ ಎಲ್ಲಾ ವಿವರಗಳನ್ನು ಅವರಿಗೆ ಕೊಡಿ. ಎಲ್ಲವನ್ನೂ ಇಲ್ಲೇ ಪ್ರಸ್ತಾಪ ಮಾಡುವುದಾದರೆ ಆಪಾದಿತರು ಹುಷಾರಾಗುತ್ತಾರೆ. ವಿಚಾರಣೆ ಮಾಡುವ ಅಧಿಕಾರಿಗಳ ಮುಂದೆ ಆ ಎಲ್ಲ ವಿವರಗಳನ್ನು ಕೊಡಿ.

ಶ್ರೀ ಟಿ.ಬಿ. ಜಯಚಂದ್ರ : ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ತಕ್ಷಣ ಸಂಬಂಧಪಟ್ಟ ಎಲ್ಲ ರೆಕಾರ್ಡುಗಳನ್ನು ಮೊದಲು ತರಿಸಬೇಕು. ಇಲ್ಲದಿದ್ದರೆ ನಾನು ಈ ಮೊದಲೇ ಹೇಳಿದ ಹಾಗೆ ಎಲ್ಲವನ್ನು ತಿದ್ದತಕ್ಕ ಕೆಲಸ ಆಗಿ ಹೋಗುತ್ತದೆ.

ಅಧ್ಯಕ್ಷರು : ಮಾಡುತ್ತಾರೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ಪಂಚಾಯಿತಿ ರಾಜ್ ಅಧಿನಿಯಮದ 262(3)ನೇ ಕಲಮಿನ ಮೇರೆಗೆ ;

1992-93ನೇ ಸಾಲಿನ ಬಿಜಾಪುರ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಅಧ್ಯಕ್ಷರು : "1995ನೇ ಮಾರ್ಚ್ 20ರಂದು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ಶ್ರೀ ಕೆ.ಎನ್.ನಾಗೇಗೌಡರು ಅವರು ದಿನಾಂಕ 22-3-95ರಂದು ಸೂಚಿಸಿದ ಪ್ರಸ್ತಾವದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯವರಿಂದ ಉತ್ತರ ಈಗ ಸಭಾ ನಾಯಕರು ಉತ್ತರ ನೀಡಬೇಕು.

* ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಈ ಸದನದಲ್ಲಿ ಸರ್ಕಾರದ ಪರವಾಗಿ ಉತ್ತರವನ್ನು ಹೇಳತಕ್ಕ ಸಂದರ್ಭದಲ್ಲಿ ಗೌರವಾನ್ವಿತ ವಿರೋಧಿ ಪಕ್ಷದ ಮುಖಂಡರುಗಳು ಸರ್ಕಾರ ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವುದಕ್ಕೆ ಮುಂಚೆ ಅವರಿಗೆ ಯಾವ ಜವಾಬ್ದಾರಿಯನ್ನು ನೀವು ನಿರ್ವಹಣೆ ಮಾಡಲಿಕ್ಕೆ ಅವಕಾಶ ಕೊಡುತ್ತೀರಿ ಅದನ್ನು ಮೊದಲು ತಿಳಿಸಿ, ಆಮೇಲೆ ಉತ್ತರ ಹೇಳಬೇಕೆಂದು ಹೇಳಿ ಒಂದು ರೀತಿ ದಿಗ್ಬಂಧನ ಹಾಕಿದ್ದರಿಂದ ಸ್ವಲ್ಪಮಟ್ಟಿಗೆ ಕಸಿವಿಸಿಯಾಯಿತು. ಇವತ್ತು ತಮ್ಮ ಮಧ್ಯಪ್ರವೇಶದಿಂದ ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಸನ್ಮಾನ್ಯ ವಿರೋಧಿಪಕ್ಷಗಳ ಎಲ್ಲಾ ಮುಖಂಡರು ಸುಗಮವಾದ ಒಂದು ವರದಿಯನ್ನು ತಾವು ಕೊಟ್ಟಂತಹ ಒಂದು ಸೂಚನೆಯ ಮೇಲೆ ಆ ಹಾದಿಯನ್ನು ಹಿಡಿದು ಕೇವಲ ಕೆಲವು ನಿಮಿಷಗಳು ಸಭಾತ್ಯಾಗ ಮಾಡಿ ಪುನಃ ನಾವು ಸದನಕ್ಕೆ ಬಂದು ಕಾರ್ಯಕಲಾಪದಲ್ಲಿ

ಭಾಗವಹಿಸುತ್ತೇವೆಂದು ಏನು ಹೇಳಿದರು ಅದಕ್ಕೆ ಮೊದಲು ತಮಗೆ ಆಮೇಲೆ ಎಲ್ಲಾ ವಿರೋಧ ಪಕ್ಷದ ಮುಖಂಡರಿಗೆ ನಾನು ತುಂಬಾ ಅಭಾರಿಯಾಗಿದ್ದೇನೆ. ಆಳುವ ಪಕ್ಷ ಮತ್ತು ವಿರೋಧಿಪಕ್ಷ ಈವೊಂದು ಜನತಂತ್ರದ ವ್ಯವಸ್ಥೆಯ ವ್ಯಾಪ್ತಿಯಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಜನತೆಯ ಪ್ರತಿನಿಧಿಗಳಾಗಿ ಬಂದಿರತಕ್ಕ ಈ ಸಂಸ್ಥೆಯಲ್ಲಿ ಈ ವೇದಿಕೆಯಲ್ಲಿ ಕೆಲಸ ಮಾಡುವಾಗ ಇಂತಹ ಸನ್ನಿವೇಶಗಳು ಉದ್ಭವವಾಗುತ್ತವೆ.ಅದನ್ನು ನಾವೇ ಕುಳಿತು ಬಗೆಹರಿಸಿಕೊಳ್ಳತಕ್ಕ ಒಂದು ಔದಾರ್ಯ ಏನಿದೆ, ನಾವೇ ಕುಳಿತು ಬಗೆಹರಿಸಿಕೊಳ್ಳತಕ್ಕ ಸಜ್ಜನಿಕೆ ಏನಿದೆ, ಅದು ನಿಜಕ್ಕೂ ಮೆಚ್ಚಿಕೊಳ್ಳತಕ್ಕದ್ದು. ಮೊನ್ನೆ ತಮ್ಮ ಮಧ್ಯಪ್ರದೇಶದಿಂದ ಏನು ಎಲ್ಲಾ ವಿರೋಧಿಪಕ್ಷಗಳ ಮುಖಂಡರುಗಳು ಇವತ್ತು ಸದನದಲ್ಲಿ ಕಾರ್ಯಕಲಾಪಗಳು ನಡೆಯುವುದಕ್ಕೆ ಅನುವು ಮಾಡಿಕೊಡುತ್ತೇವೆ. ನಾವು ಯಾವುದೇ ಕಾರಣದಿಂದ ಅದಕ್ಕೆ ಅಡ್ಡಿ ಬರುವುದಿಲ್ಲ, ಕೇವಲ ಸಾಂಕೇತಿಕ ಪ್ರತಿಭಟನೆಯನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿ, ಇವತ್ತು ಸಹಕರಿಸಿದ್ದಾರೆ ಅವರು ಪುನಃ ಈ ಸಭೆಗೆ ವಾಪಸ್ಸು ಬಂದಿರುವುದಕ್ಕೆ ನನ್ನ ಪರವಾಗಿ ಮತ್ತು ಸರ್ಕಾರದ ಪರವಾಗಿ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದು ಕೇವಲ 4 ತಿಂಗಳು ಆಯಿತು. ಈ ನಾಲ್ಕು ತಿಂಗಳಿನಲ್ಲಿ ನಾವು ಏನೋ ದೊಡ್ಡ ಸಾಧನೆಯನ್ನು ಮಾಡಿದ್ದೇವೆಂದು ಹೇಳಿಕೊಳ್ಳುವ ಶಕ್ತಿ ನನಗಿಲ್ಲ. ಅಥವಾ ಆ ಗರ್ವ ಕೂಡ ನನಗಿಲ್ಲ ಹಾಗೆ ನಾನು ಎಲ್ಲೂ ಕೂಡ ಹೇಳಿಲ್ಲ. ಹೊರಗಡೆ ಕೂಡ ಹೇಳಿಲ್ಲ. ಸದನದಲ್ಲೂ ಕೂಡ ಹೇಳಿಲ್ಲ. ನಮ್ಮ ಕೈಯಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡುವುದಕ್ಕೆ ಸಾಧ್ಯವೋ ಅಷ್ಟರಮಟ್ಟಿಗೆ ದಿನನಿತ್ಯದ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣ ಒಂದು ನೀತಿಯ ಮೇಲೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಒಂದು ನೀತಿಯ ಮೇಲೆ ಸರ್ಕಾರ ತನ್ನ ಮುಂದಿನ ಗುರಿಯೇನು ಕಾರ್ಯಕ್ರಮಗಳೇನು ಎಂಬುದನ್ನು ತಿಳಿಸಬೇಕಾಗುತ್ತದೆ. ಯಾರೇ ಅಧಿಕಾರ ನಡೆಸಿದರೂ ರಾಜ್ಯಪಾಲರ ಭಾಷಣವನ್ನು ಸರ್ಕಾರವೇ ತಮ್ಮ ಸಚಿವಸಂಪುಟದಲ್ಲಿ ನಿರ್ಣಯಮಾಡಿ ಅದರ ಒಪ್ಪಿಗೆಯನ್ನು ಪಡೆದು ಆಮೇಲೆ ಈ ಸದನದ ಮುಂದೆ ರಾಜ್ಯಪಾಲರು ರಾಜ್ಯಂಗದ ಚೌಕಟ್ಟಿನಲ್ಲಿ ಅವರೇನು ಕರ್ತವ್ಯವನ್ನು ನಿರ್ವಹಣೆ ಮಾಡಬೇಕಾಗುತ್ತದೆ ಆ ಕೆಲಸವನ್ನು ಅವರು ಮಾಡುತ್ತಾರೆ. ಎರಡೂ ಜಂಟಿ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡತಕ್ಕದ್ದು ನಮ್ಮ ರಾಜ್ಯಂಗದ ಚೌಕಟ್ಟಿನಲ್ಲಿ ನಡೆದುಕೊಂಡು ಬಂದಿರತಕ್ಕ ನಡವಳಿಕೆ. ಎರಡು ಪ್ರಾಮುಖ್ಯವಾದಂತಹ ವಿಷಯಗಳ ಬಗ್ಗೆ ನಾನು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಬೇಕಾಗುತ್ತದೆ. ಒಂದನೆಯದು 1995-96ರ ಬಜೆಟ್. ಮತ್ತೊಂದು ಇದೇ ಸದನದಲ್ಲಿ ಕಳೆದ ತಿಂಗಳು 20ನೇ ತಾರೀಖು ಗೌರವಾನ್ವಿತ ರಾಜ್ಯಪಾಲರು ಏನು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ್ದರು ಅದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗುತ್ತದೆ. ನಾನು ಸಾಮಾನ್ಯವಾಗಿ ಈ ಸದನದಲ್ಲಿ ಗೈರುಹಾಜರಾಗಲಿಕ್ಕೆ ಯಾವಾಗಲೂ ಇಷ್ಟಪಡುವುದಿಲ್ಲ. ಯಾವುದೇ ಕಾರಣದಿಂದ, ನಾನು ಸಭೆಗೆ ಗೈರುಹಾಜರಾಗಲಿಕ್ಕೆ ಪ್ರಾಮಾಣಿಕವಾಗಿ ನನಗೆ ಮನಸ್ಸು ಬರುವುದಿಲ್ಲ. ತಮಗೆ ಗೊತ್ತಿದೆ. ನನ್ನ ಜಿಲ್ಲೆಯ

ಹಿರಿಯ ಮುಖಂಡರು ತೀರಿಹೋದ ಪ್ರಯುಕ್ತ ಆ ದಿನ ನಾನು ಈ ಸದನದಲ್ಲಿ ಇರಲಿಲ್ಲ. ಈ ಸದನದ ಅನೇಕ ಜನ ಹಿರಿಯ ಮುಖಂಡರುಗಳು ವಿರೋಧಿಪಕ್ಷದ ನಾಯಕರೂ ಸೇರಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗದಿದ್ದರೂ, 1995-96ನೇ ಸಾಲಿನ ಬಜೆಟ್ ಮೇಲೆ ಸಾಕಷ್ಟು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಸುಮಾರು 3 ಗಂಟೆಗಳ ಕಾಲ ಮಾಜಿ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಭಾಷಣ ಮಾಡಿದ್ದಾರೆ. ಮತ್ತೊಬ್ಬರು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ವೀರಪಮೊಯಿಲಿವರು 160 ನಿಮಿಷಗಳ ಕಾಲ ಭಾಷಣ ಮಾಡಿದ್ದಾರೆ. ಗೌರವಾನ್ವಿತ ವಿರೋದಿ ಪಕ್ಷದ ನಾಯಕರು 90 ನಿಮಿಷ ಭಾಷಣ ಮಾಡಿದ್ದಾರೆ. ಹಿರಿಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು 80-85 ನಿಮಿಷ ಭಾಷಣ ಮಾಡಿದ್ದಾರೆ. ನಾನು ನೋಡಿದ್ದೇನೆ. ಹಿರಿಯರು ತಮ್ಮ ಅನುಭವದಿಂದ ಏನು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡುತ್ತಾರೆ ಅವುಗಳನ್ನು ಸ್ವೀಕಾರ ಮಾಡಬೇಕೆನ್ನುವ ಸದುದ್ದೇಶದಿಂದ ಆ ಭಾಷಣಗಳನ್ನು ತರಿಸಿ ಓದಿದೆ. ಈ ಸದನದಲ್ಲಿ ಸುಮಾರು 22ಜನ ಗೌರವಾನ್ವಿತ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ್ದಾರೆ. ಸುಮಾರು 30 ಜನಕ್ಕೂ ಹೆಚ್ಚು ಜನ ಸದಸ್ಯರು ಬಜೆಟ್‌ಮೇಲೆ ಭಾಷಣ ಮಾಡಿದ್ದಾರೆ. ಅವರು ಕೊಟ್ಟಿರತಕ್ಕ ಅಮೂಲ್ಯವಾದ ಸಲಹೆಗಳಿಗೆ ನಾನು ಋಣಿಯಾಗಿದ್ದೇನೆ. ನಾನು ಯಾರನ್ನು ನಿಂದನೆ ಮಾಡಬೇಕೆಂದು ಈ ಮಾತನ್ನು ಹೇಳುತ್ತಿಲ್ಲ. ಅದರ ಅವಶ್ಯಕತೆ ನನಗೆ ಇಲ್ಲ. ನಾನೂ ಎಲ್ಲಾ ಭಾಷಣಗಳನ್ನು ತರಿಸಿನೋಡಿದೆ. ನಮ್ಮ ಅರ್ಥ ಮಂತ್ರಿಗಳು ಭಾಷಣಮಾಡತಕ್ಕ ಕಾಲದಲ್ಲಿ ಕೇಂದ್ರಸರ್ಕಾರದ ಅರ್ಥ ನೀತಿಯ ಬಗ್ಗೆ ಸ್ವಲ್ಪ ಮಟ್ಟಿಗೆ ವಿಶ್ಲೇಷಣೆ ಮಾಡಿರತಕ್ಕ ಬಗ್ಗೆ ಸ್ವಾಭಾವಿಕವಾಗಿ ವಿರೋಧ ಪಕ್ಷಗಳ ವತಿಯಿಂದ ಕಠಿನವಾದ ಪ್ರತಿಕ್ರಿಯೆ ಬರತಕ್ಕದ್ದು ಸಹಜ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಅದೇ 1990 ರಲ್ಲಿ ನಾವು ಅಧಿಕಾರ ಕಳೆದುಕೊಂಡ ಮೇಲೆ ಸನ್ಮಾನ್ಯ ಅಂದಿನ ಹಣಕಾಸಿನ ಸಚಿವರಾದ ರಾಜಶೇಖರಮೂರ್ತಿಯವರು ಈ ಸಭೆಯಲ್ಲಿ ಬಜೆಟ್ ಮಂಡನೆ ಮಾಡಿದ್ದಾರೆ. ಅವರು ಏನು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆನ್ನುವ ಬಗ್ಗೆ ನಾನು ಈ ಸದನದ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಎಲ್ಲಾ ಸದಸ್ಯರೂ ಬಹುಶಃ ಈಗ ಹಾಲಿ ಮುಖಂಡರು ಏನಿಸಿದ್ದಾರೆ. ಅವರು ಆವತ್ತು ಈ ಸದನದಲ್ಲಿದ್ದರು.

12.10 ಪಿ.ಎಂ.

ಇನ್ನು ಕೆಲವರು ಹೊಸಬರು ಈ ಸದನಕ್ಕೆ ಏನು ಆಯ್ಕೆಯಾಗಿ ಬಂದಿದ್ದಾರೆ. ಅವರು ಕೂಡ ನೋಡಬಹುದು, ಹೇಗೆ ಜನತಾದಳದ ಕಾಲದಲ್ಲಿ ಈ ರಾಜ್ಯದ ಆರ್ಥಿಕವ್ಯವಸ್ಥೆ ಎಷ್ಟು ಹದಗೆಟ್ಟಿತ್ತು ಎಂದು. ಈ ಎಲ್ಲಾ ವಿಷಯಗಳನ್ನು ಅವರು ಉಲ್ಲೇಖ ಮಾಡಿದ್ದಾರೆ. ಇದರಿಂದ ನಾನು ಆಕ್ಷೇಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಹೋಗಬೇಕಾದ ಅವಶ್ಯಕತೆ ಇಲ್ಲ. ಇಲ್ಲಿರತಕ್ಕಂಥ ಕಡತವನ್ನು

ನೋಡಿದರೆ ಗೊತ್ತಾಗುತ್ತದೆ. " We may be witnessing the birth of a new world in this, the last decade of the 20th Century. Though qualitatively different we have had our own changes. There as been a change of god both at the centre and in a majority of the states. The political scene in Karnataka has also change, following six years Janatha and Janathadal rule. The Congress party has been voted back to power with an un precedented, massive mandate from the people". ನಾವು ಎಷ್ಟರಮಟ್ಟಿಗೆ ಹಣಕಾಸಿನ ಮಿಸ್‌ಮ್ಯಾನೇಜ್‌ಮೆಂಟ್ ಮಾಡಿದ್ದೇವೆ ಎಂದು ಎಲ್ಲವನ್ನೂ ಉಲ್ಲೇಖ ಮಾಡಿದ್ದಾರೆ. ಆದ್ದರಿಂದ ಸಹದ್ಯೋಗಿ ಶ್ರೀಮಾನ್ ಸಿದ್ದರಾಮಯ್ಯನವರದ ಕೇಂದ್ರಸರ್ಕಾರದ ಅರ್ಥ ನೀತಿಯಿಂದ ಏನು ಕೆಲವು ತೊಡಕುಗಳು ಆಗುತ್ತಿದೆ ಎಂದು ಹೇಳಿದಾಗ ಸ್ವಾಬಾವಿಕವಾಗಿ ಅದರ ಬಗ್ಗೆ ಸ್ವಲ್ಪ ಮಟ್ಟಿಗೆ ಅಸಮದಾನ ವಿರೋಧ ಪಕ್ಷದ ವತಿಯಿಂದ ಆಗತಕ್ಕಂಥದ್ದು ಸಹಜ. ಅದರ ಬಗ್ಗೆ ನನ್ನ ವೈಯಕ್ತಿಕ ಆಕ್ಷೇಪಣೆ ಇಲ್ಲ. ನಾನು ವಸ್ತು ಸ್ಥಿತಿಯನ್ನು ಸಭೆಯ ಮುಂದೆ ಇಡುತ್ತಿದ್ದೇನೆ ಅಷ್ಟೇ. ಸ್ವಾಮಿ, 47ವರ್ಷಗಳಿಂದ, ನಮಗೆ ಸ್ವಾಂತಂತ್ರ್ಯ ಬಂದಮೇಲೆ ಸುದೈವ, ಅತ್ಯಂತ ಹಿರಿಯ ಮುಖಂಡರಾಗಿರತಕ್ಕಂಥ ಶ್ರೀಮಾನ್ ಜಾಫರ್ ಷರೀಫ್ ಅವರು ಈ ಸದನಕ್ಕೆ ಬಂದಿದ್ದಾರೆ. ಅವರನ್ನು ನಾನು ಸ್ವಾಗತ ಮಾಡುತ್ತೇನೆ. ಯಾವ ರಾಷ್ಟ್ರೀಯ ನೀತಿಯನ್ನು ಈ ದೇಶದಲ್ಲಿ ಇವತ್ತು ಜನತೆಯ ಮುಂದೆ ನಾವು ಅಂತಿಮವಾಗಿ ಇಟ್ಟಿದ್ದೇವೆ ಎಂಬುದರ ಬಗ್ಗೆ ನನಗೂ ಅನುಭವ ಇಲ್ಲ. ಶ್ರೀಮಾನ್ ಮೊಯಿಲಿಯವರು ಹೇಳಿದರು , ತುಂಬ ಸಂತೋಷ. ಯಾವುದನ್ನೇ ತೆಗೆದುಕೊಳ್ಳಿ ಎಕನಾಮಿಕ್ ಪಾಲಿಸಿ ಎಷ್ಟು ಬದಲಾವಣೆಯಾಗಿದೆ? ಒಂದು ಕಾಲದಲ್ಲಿ ಮಿಕ್ಸಡ್ ಎಕನಾಮಿಕ್ ಪಾಲಿಸಿ ಬಗ್ಗೆ ದೊಡ್ಡ ಚರ್ಚೆ ಈ ದೇಶದಲ್ಲಿ ಆಯಿತು. ಅದಾದ ಮೇಲೆ ಈಗ ಪಬ್ಲಿಕ್ ಸೆಕ್ಟರ್ ಇನ್ವೆಸ್ಟ್‌ಮೆಂಟ್ ಬಗ್ಗೆ ದೊಡ್ಡ ಚರ್ಚೆ ಆಯಿತು. ಸುಮಾರು 2ಲಕ್ಷ ಕೋಟಿ ಹಣವನ್ನು ಪಬ್ಲಿಕ್ ಸೆಕ್ಟರ್‌ನಲ್ಲಿ ತೊಡಗಿಸಿದ್ದೇವೆ. ಮಿಕ್ಸಡ್ ಎಕನಾಮಿಯಿಂದ ಪಬ್ಲಿಕ್ ಸೆಕ್ಟರ್ ಇನ್‌ವೆಸ್ಟ್‌ಮೆಂಟ್‌ಗೆ ಹೋದೆವು. ಅದಾದ ಮೇಲೆ the era of disinvestment has started. ಅಂದರೆ ಯಾವುದು ಈ ದೇಶದಲ್ಲಿ ಸ್ಥಿರವಾಗಿ, ಈ ದೇಶದ ಜನಸಂಖ್ಯೆಯ ಬಾಹುಳ್ಯಕ್ಕೆ ಸ್ಪಂದಿಸತಕ್ಕಂಥ ನಮ್ಮ ಅಭಿವೃದ್ಧಿಯ ವೇಗವನ್ನು ಆ ವೇಗಕ್ಕೆ ಅನುಗುಣವಾದಂಥ ನೀತಿಯನ್ನು ರೂಪಿಸಿದ್ದೇವೆ, ಎಂದರೆ ಎಜ್ಯುಕೇಶನ್ ಪಾಲಿಸಿ ಬಗ್ಗೆ ಏನಾದರೂ ಈ ದೇಶದಲ್ಲಿ ಸ್ಪಷ್ಟವಾದ ಚಿತ್ರ ಇದೆಯಾ? ನಾನು ತಪ್ಪು ಎಂದು ವಾದ ಮಾಡುವುದಕ್ಕೆ ಆಗುವುದಿಲ್ಲ. ಯಾರಾದರೂ, ವಿದ್ಯೆ ನೀತಿಯ ಬಗ್ಗೆ

ದೇಶದಲ್ಲಿ ಸ್ಪಷ್ಟವಾದ ಚಿತ್ರ ಇದೆ ಎಂದರೆ ನಾನು ತಿದ್ದಿಕೊಳ್ಳುತ್ತೇನೆ. ನ್ಯಾಷನಲ್ ವೇಜ್ ಪಾಲಿಸಿ ಬಗ್ಗೆ ಒಂದು ಸ್ಪಷ್ಟ ನೀತಿ ಇದೆಯೋ? ಯಾವುದೇ ಭಾಷಣವನ್ನು ತೆಗೆದುಕೊಳ್ಳೋಣ. 47 ವರ್ಷಗಳಲ್ಲಿ ಎರಡೂ ಸದನಗಳಲ್ಲಿ ಮಾಡಿರುವ ಭಾಷಣಗಳನ್ನು ತೆಗೆದುಕೊಳ್ಳೋಣ. ಎರಡೂ ಸದನಗಳು ಇವತ್ತು ದೇಶಕ್ಕೆ ತನ್ನದೇ ಆದಂಥ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕಾಗುತ್ತದೆ. ಲೋಕಸಭೆಯಲ್ಲಿ ಅದರದ್ದೇ ಆದ ವ್ಯಾಪ್ತಿ ಇದೆ. ಈ ಸದನದಲ್ಲಿ ನಮ್ಮದೇ ಆದ ವ್ಯಾಪ್ತಿ ಇದೆ. ಸನ್ಮಾನ್ಯ ಅಧ್ಯಕ್ಷರೇ, agricultural policy ಬಗ್ಗೆ ಚರ್ಚೆ ಮಾಡುತ್ತೇವೆ. ಅದಕ್ಕೆ ಒಂದು ಅಂತಿಮ ಸ್ವರೂಪವನ್ನು ಇವತ್ತಿಗೂ ಕೊಡುವುದಕ್ಕೆ ಸಾಧ್ಯ ಆಗಿಲ್ಲ. ರಿಸರ್ವೇಶನ್ ಪಾಲಿಸಿ ಬಗ್ಗೆ ಇನ್ನು ಚರ್ಚೆ ನಡೆಯುತ್ತಲೇ ಇದೆ. ಅದು ಸುಪ್ರೀಂ ಕೋರ್ಟ್ ಮುಂದೆ ನಿಂತಿದೆ. ಯಾವುದೇ ಪಾಲಿಸಿಯ ಬಗ್ಗೆ ನಾವು ಇನ್ನು ಈ ದೇಶದಲ್ಲಿ ಜನತೆಗೆ ಅಂತಿಮವಾದಂಥ ಒಂದು ನೀತಿ ಏನೆಂದು ಮಾಡುವುದಕ್ಕೆ ಸಾಧ್ಯ ಆಗಿದೆಯೋ? ಎಕ್ಸ್‌ಪೋರ್ಟ್ ಇಂಪೋರ್ಟ್ ಪಾಲಿಸಿ ಬಗ್ಗೆ ಚರ್ಚೆ ಮಾಡೋಣ ಎಂದರೆ ಅದು ಕೂಡ ಸಾಧ್ಯವಿಲ್ಲ. ಈ ದೇಶದಲ್ಲಿ ಹೇಗೆ ನಡೆದಿದೆ ಎಂದು ಹೇಳಿ ಮುಂದೆ ನಾನು ಬರುತ್ತೇನೆ. ಈ ಪಾಪ್ಯುಲೇಷನ್ ಕಂಟ್ರೋಲ್ ಬಗ್ಗೆ ಏನಾದರೂ ಈ ದೇಶದಲ್ಲಿ .ಅದರಿಂದ ಧಕ್ಕೆಯಾಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಿದೆಯೆ? ಅಭಿವೃದ್ಧಿ ವೇಗ ಎಷ್ಟು ಇದೆ, ಅದಕ್ಕಿಂತ ಉಲ್ಬಣವಾಗಿ ಜನಸಂಖ್ಯೆ ಬೆಳೆದಿದೆ, ಅದನ್ನು ತಡೆಗಟ್ಟುವುದಕ್ಕೆ ಏನಾದರೂ ನಾವು ಎಲ್ಲಾ ಪಕ್ಷದವರು ಕುಳಿತು ಇದರ ಬಗ್ಗೆ ಯೋಚನೆ ಮಾಡೋಣ ಎಂದರೆ ಯಾರಾದರೂ ಇವತ್ತು ಸಿದ್ಧರಾಗಿದ್ದಾರಾ? ಅದು ಕೂಡ ಇಲ್ಲ. ಇರತಕ್ಕಂಥ ನೀತಿಯ ಬಗ್ಗೆ ಹೇಳಲು ನಾನು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಈ ಮಾತನ್ನು ಹೇಳತಕ್ಕಂಥ ಕಾಲದಲ್ಲಿ ಮಾನ್ಯ ನಂಜೇಗೌಡರು ನ್ಯಾಷನಲ್ ವಾಟರ್ ಪಾಲಿಸಿ ಬಗ್ಗೆ ಚರ್ಚೆ ಮಾಡಬಹುದು ಎಂದು ಕಾಣುತ್ತದೆ. ನ್ಯಾಷನಲ್ ವಾಟರ್ ಪಾಲಿಸಿ ಈ ದೇಶದಲ್ಲಿ ಇದೆಯೆ? ನಾವು ಹೇಳುತ್ತೇವೆ, ನೀವು ಹೇಳುತ್ತೀರಿ, ಮೊಯಿಲಿಯವರು ಹೇಳಿದ್ದಾರೆ, ಎಲ್ಲರೂ ಹೇಳಿಕೊಂಡು ಬಂದಿದ್ದೇವೆ. ಯಾವ ಪಾಲಿಸಿ ಬಗ್ಗೆ ಈ ದೇಶದಲ್ಲಿ ನಾವು ಒಂದು ಅಂತಿಮವಾದ ನಿರ್ಣಯಕ್ಕೆ ಬಂದಿದ್ದೇವೆ. ಎಂದು ಹೇಳಿದರೆ, ಈ 47 ವರ್ಷಗಳ ರಾಜಕೀಯದ ಇತಿಹಾಸದಲ್ಲಿ ಯಾರೇ ಸರ್ಕಾರ ನಡೆಸಲಿ. ನಾನು ಕಾಂಗ್ರೆಸ್ ಕಮ್ಯುನಿಸ್ಟ್, ಸೋಷ್ಯಲಿಸ್ಟ್, ಅಥವಾ ಜನತಾದಳ, ಜನತಾಪಾರ್ಟಿ ಎಂದು ಅದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಈ ದೇಶದ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥ ಒಂದು ನೀತಿಯನ್ನು, ಇಂಥ ಪ್ರಾಮುಖ್ಯವಾದಂಥಹ ವಿಷಯಗಳು ಇವತ್ತಿನವರೆಗೆ ನಿಖರವಾದಂಥ ನೀತಿಯನ್ನು ನಿರೂಪಣೆ ಮಾಡುವುದಕ್ಕೆ ಈ ದೇಶದಲ್ಲಿ ಸಾಧ್ಯವಾಗಿಲ್ಲವೆಂದು ಹೇಳುವುದಕ್ಕೆ ನಾನಂತೂ ಸಿದ್ದನಾಗಿದ್ದೇನೆ. ಬಹುಶಃ ಮಾಡಿದ್ದೇವೆ

ಎಂದು ಯಾರಾದರೂ ಹೇಳಿದ್ದರೆ ಅದಕ್ಕೆ ನನ್ನ ಅಡ್ಡಿ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ, ಅಷ್ಟೇ ಏಕೆ, ಬರೀ ಲ್ಯಾಂಗ್ವೇಜ್ ಪಾಲಿಸಿಯನ್ನೇ ತೆಗೆದುಕೊಳ್ಳೋಣ. ತ್ರಿಭಾಷಸೂತ್ರವಾಯಿತು. ಅದು ಯಾವುದೋ ಉರ್ದುವಿನಲ್ಲಿ 15ರಿಂದ 10 ನಿಮಿಷ ದೂರದರ್ಶನದಲ್ಲಿ ರಿಲೆ ಆಯಿತು. ಎಂದಾಕ್ಷಣ ಇಲ್ಲಿ ಎಷ್ಟೊಂದು ಸ್ಫೋಟವಾಯಿತು. ಈ ದೇಶ ಎಷ್ಟರ ಮಟ್ಟಿಗೆ 47 ವರ್ಷಗಳ ಸ್ವಾತಂತ್ರ್ಯಾನಂತರ ನಾವು ಎಲ್ಲಿದ್ದೇವೆ, ಏನಾಗಿದ್ದೇವೆ ನನಗೆ ಗೊತ್ತಿಲ್ಲ. ನಾನು ಈವತ್ತೇನು 4 ತಿಂಗಳ ಈ ಸರ್ಕಾರದಲ್ಲಿ ಇಂತಹ ಜ್ವಲಂತ ಸಮಸ್ಯೆಗಳ ಬಗ್ಗೆ ನಿಖರವಾಗಿ ಎಲ್ಲಾ ಸಮಸ್ಯೆಗಳ ಬಗ್ಗೆ ಒಂದು ನೀತಿಯನ್ನು ಇವತ್ತು ಸರ್ಕಾರ ಸಾರತಕ್ಕಂಥ ರಾಜ್ಯಪಾಲರ ಭಾಷಣವನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆ ಶಕ್ತಿ ನನಗೆ ಇಲ್ಲ. ಅದು ಇದೆ ಎಂದು ಒಪ್ಪಿಕೊಳ್ಳುವುದಕ್ಕೂ ನಾನು ತಯಾರಿಲ್ಲ. ಆದರೆ ನನ್ನ ಇತಿ ಮಿತಿಯೊಳಗೆ ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಸರ್ಕಾರ ಹೇಳಿದೆ. ಇದು ಅಂತಿಮವಾದಂಥ ನಿರ್ಣಯ ಎಂದು ಹೇಳುವುದಕ್ಕೆ ನನಗೆ ಶಕ್ತಿ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ, ಒಂದೊಂದು ವಿಷಯವನ್ನು ತೆಗೆದುಕೊಳ್ಳುವುದಾದರೂ ಅದರ ಬಗ್ಗೆ ಗಂಟೆಗಟ್ಟಲೆ ಚರ್ಚೆಮಾಡಬಹುದು. 180 ನಿಮಿಷಗಳಿಂದ 480 ನಿಮಿಷ ಬೇಕಾದರೂ ಮಾತನಾಡಬಹುದು, ಇಡೀ ಸದನದಲ್ಲಿ ಒಂದಲ್ಲ, ಒಂದೂವರೆ, ಎರಡು ದಿನ ಬೇಕಾದರೂ ಇಂತಹ ವಿಷಯದ ಬಗ್ಗೆ ಒಬ್ಬ ವ್ಯಕ್ತಿ ಮಾತನಾಡುವುದಕ್ಕೆ ಸಾಧ್ಯವಿದೆ. ಅದೇನೂ ದೊಡ್ಡ ವ್ಯಾಖ್ಯಾನ ಮಾಡಬೇಕಾದದ್ದು ಇಲ್ಲ. ಆದರೆ ನಾವು ಹೊಸ ಸರ್ಕಾರ ಅಧಿಕಾರ ವಹಿಸಿಕೊಂಡ ತಕ್ಷಣ ಪ್ರಧಾನಮಂತ್ರಿಗಳು ದೂರವಾಣಿ ಮೂಲಕ ನಿಮ್ಮ ಸರ್ಕಾರದ ನಿಲುವು ಏನು? ಹೊರದೇಶಗಳಿಂದ ಬರತಕ್ಕ ಉದ್ದಿಮೆದಾರರ ಬಗ್ಗೆಯಾಗಲೀ, ಅಥವಾ ಹೊರದೇಶಗಳಿಂದ ಬಂಡವಾಳ ಈ ದೇಶಕ್ಕೆ ಬರುವುದರ ಬಗ್ಗೆಯಾಗಲೀ, ಈ ಲಿಬರಲೈಸೇಶನ್ ಉದಾರೀಕರಣದ ಅರ್ಥ ನೀತಿ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ಸ್ಪಷ್ಟೀಕರಣ ಮಾಡುವುದು ಒಳ್ಳೆಯದು, ರಾಷ್ಟ್ರದ ತುಂಬಾ, ರಾಯಭಾರಿಗಳು, ಈ ಗೊಂದಲ ಏನಿದೆ ಇದನ್ನು ಸ್ವಲ್ಪಮಟ್ಟಿಗೆ ನಿವಾರಣೆ ಮಾಡಬೇಕೆಂಬ ಮಾತನ್ನು ಹೇಳುತ್ತಿದ್ದಾರೆ, ಸಂಶಯ ಮಾಡಿ ಬರುತ್ತಾ ಇದೆ ಈ ಮಾತನ್ನು ಹೇಳಿದರು. ನಾನು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಹೇಳಿದೆ. ಇದರೊಳಗೆ ನಮ್ಮದು ವ್ಯತ್ಯಾಸ ಇಲ್ಲ. ಹಿಂದಿನ ಸರ್ಕಾರ ಏನೇನು ನಿರ್ಣಯ ಮಾಡಿದ್ದಾರೆ, ಅದರಲ್ಲಿ ಯಾವುದೂ ನಾನು ಬದಲಾವಣೆ ಮಾಡುವುದಕ್ಕೆ ಹೋಗುವುದಿಲ್ಲವೆಂದು ಹೇಳಿದೆ. 1991ರಿಂದ ಎಷ್ಟು MOUs ನೀವು ಸಹಿ ಮಾಡಿದಿರಿ ಎಂಬುದು ನನ್ನ ಮುಂದೆ ಇದೆ. ಅದನ್ನು ಆಮೇಲೆ ಹೇಳುತ್ತೇನೆ. ನಾನು ಅದಕ್ಕೆ ಬೆಂಬಲ ಕೊಡುತ್ತೇನೆ. ಆದರೆ ಒಂದು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಮನಸ್ಸಿನಲ್ಲಿರತಕ್ಕ ಏನೊಂದು ವಿಷಯ ಅಥವಾ ನಾನು ಯಾವ ವಿಷಯದ ಬಗ್ಗೆ ಕಟಿಬದ್ಧನಾಗಿದ್ದೇನೆಯೋ ಆ ವಿಷಯದಲ್ಲಿ ಮಾತ್ರ ಬದಲಾವಣೆಯಾಗುವುದಿಲ್ಲ.

ಈ ದೇಶದಲ್ಲಿರತಕ್ಕ ನೂರಕ್ಕೆ ಎಪ್ಪತ್ತು ಜನ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರು ಯಾರಿದ್ದಾರೋ, ಅವರಿಗೆ ಕೊಡತಕ್ಕ ಗೊಬ್ಬರದ ಸಬ್ಸಿಡಿ ಮತ್ತು ಯಾರು ಕುಡಿದು ದೈಹಿಕ ಶ್ರಮದಲ್ಲಿ ಜೀವನ ಮಾಡುತ್ತಿದ್ದಾರೆಯೋ ಅಂತಹವರಿಗೆ ರಿಯಾಯಿತಿ ದರದಲ್ಲಿ ತಿನ್ನುವ ಆಹಾರ ಪದಾರ್ಥಗಳನ್ನು ಒದಗಿಸತಕ್ಕಂಥಾದ್ದುದು ಒಂದು ವ್ಯವಸ್ಥೆ ಏನಿದೆ,ಈ ಎರಡರಲ್ಲಿ ನನ್ನ ನಿಲುವನ್ನು ಬದಲಾವಣೆ ಮಾಡಿಕೊಳ್ಳುವುದಿಲ್ಲ. ಇವೆರಡನ್ನು ಬಿಟ್ಟರೆ, ಬಾಕಿ ಎಲ್ಲಾ ವಿಷಯದಲ್ಲಿಯೂ ನಿಮ್ಮ ನೀತಿ ಬಗ್ಗೆ ನನ್ನದೂ ಸಹಕಾರ ಇದೆ, ಈ ಮಾತನ್ನು ಹೇಳಿದೆ. ಇದು ಸತ್ಯ. ಅಷ್ಟೇ ಅಲ್ಲ. ಅದಕ್ಕನುಗುಣವಾಗಿ ಪತ್ರವನ್ನು ಕೂಡ ಬರೆದಿದ್ದೇನೆ. ನಾನೇ ಸ್ವತಃ ಅವರನ್ನು ಭೇಟಿ ಮಾಡಿದ್ದೇನೆ. ಇವತ್ತು ರಾಷ್ಟ್ರದಲ್ಲಿ ಎರಡು ಸಮುದಾಯಕ್ಕೆ ಆಗತಕ್ಕ ಅಪಾಯ ಏನು ಎನ್ನುವುದನ್ನು ಅವರಲ್ಲಿ ಚರ್ಚೆ ಮಾಡಿದ್ದೇನೆ. ಅವರು ಒಂದು ಹಂತದಲ್ಲಿ ಹೇಳಿದರು. 5 ರಾಜ್ಯಗಳ ಚುನಾವಣೆ ಮುಗಿದ ಮೇಲೆ, ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಯಿಸಿ, ಇದರ ಬಗ್ಗೆ ಅಂತಿಮ ತೀರ್ಮಾನ ಮಾಡಬೇಕಾಗುತ್ತದೆ, ಒಂದು consious ತೀರ್ಮಾನಕ್ಕೆ ಬರಬೇಕಾಗಿದೆ ಈ ಮಾತನ್ನು ಪ್ರಧಾನ ಮಂತ್ರಿಯವರು ಹೇಳಿದರು. ಅದನ್ನೇ ನಾನು ಪತ್ರಿಕೆಗಳಿಗೂ ಕೂಡ ಹೇಳಿದ್ದೇನೆ. ಅವರು ಒಂದು ಸಂದರ್ಭದಲ್ಲಿ ಹೇಳಿದರು, "I will try to give a package deal to the poorer sections of the society after the election is over". " Package deal to the poorer sections of the society" ಈ ಮಾತನ್ನು ಪ್ರಧಾನ ಮಂತ್ರಿಯವರೇ ಹೇಳಿದ್ದಾರೆ.ಈ ದಿನ ನಾನೇನು ದೇವೇಗೌಡರನ್ನು ಮಣ್ಣಿನ ಮಗ ಎಂದು ಕರೆಯಿರಿ ಎಂದು ಯಾರಿಗೂ ಅರ್ಜಿ ಹಾಕಿಲ್ಲ. ಅದು ಹೇಗೆ ಬಂತೋ, ಯಾರು ಕರೆದರೋ ನನಗೆ ಗೊತ್ತಿಲ್ಲ. ಒಂದೊಂದು ಸಾರಿ, '' ರಾಜು '' ಎಂಬುವವರನ್ನು ''ರಾಜೇಶ್ವರ್‌ರಾವ್'' ಎಂದು ಕರೆದರೆ ಏನು ಮಾಡುವುದಕ್ಕಾಗುತ್ತದೆ? ಅಥವಾ ಇದನ್ನು ಯಾರು ಸೃಷ್ಟಿ ಮಾಡಿದೆಯೋ ನನಗೆ ಗೊತ್ತಿಲ್ಲ. ಇಲ್ಲಿ ಕುಳಿತರುವವರೆಲ್ಲರೂ ಭೂಮಿಯಿಂದ ಬಂದಿಲ್ಲವೇ ಅಥವಾ ವ್ಯವಸಾಯ ಮಾಡುವವರಲ್ಲವೇ? ಇದು ನನ್ನ ಬಾಯಿಂದ ಯಾವತ್ತೂ ಬಂದಿಲ್ಲ. ಆದರೆ ಸದನದಲ್ಲಿ ಈ ವ್ಯಾಖಾನ ನಡೆದಿದೆ. ಏಕೆಂದರೆ, ನಾನು ಇಡೀ ದಿನ ಸದನದಲ್ಲಿ ಇರಲಿಲ್ಲ.

(ಉಪಾಧ್ಯಕ್ಷರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

ನನಗೆ ಇವತ್ತು ರೈತರ ಬಗ್ಗೆ ಗಮನವಿಲ್ಲ, ಬಡವರ ಬಗ್ಗೆ ಗಮನವಿಲ್ಲ, ಇದು ಶ್ರೀಮಂತರ ವರವಾಗಿರತಕ್ಕಂಥದ್ದು- ಇದನ್ನು ನೋಡಿದ್ದೇನೆ. ಪ್ರೆಸ್ ಕಟಿಂಗ್ ಕೂಡ ತರಿಸಿದೆ. ಏಕೆಂದರೆ, ಸ್ವಾಭಾವಿಕವಾಗಿ ರಾಜ್ಯಪಾಲರ ಭಾಷಣ ಆದ ಮೇಲೆ, ವಿರೋಧಪಕ್ಷದವರು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದು ಸಹಜ. ಇದರಲ್ಲಿ ದೋಷವಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದೇ ರೀತಿಯಾಗಿ

ಬಜೆಟ್ ಭಾಷಣ ಮಂಡನೆ ಮಾಡಿದ ಮೇಲೆ ಕೂಡ, ವಿರೋಧಪಕ್ಷದವರು ಸ್ವಾಭಾವಿಕವಾಗಿ ಎಲ್ಲಿ ದೋಷವಿದೆ, ಅದನ್ನು ಹುಡಕಬೇಕು, ಇದು ಅವರ ಜವಾಬ್ದಾರಿ ಅದನ್ನು ಸಮರ್ಥನೆ ಮಾಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ಇದರಲ್ಲಿ ಅಂತಿಮ ತೀರ್ಪು ಕೊಡತಕ್ಕಂಥಾದ್ದು ಮಹಾಜನತೆ. ತಮ್ಮ. ಹಕ್ಕನ್ನು ನಾವು ಕಸಿದುಕೊಳ್ಳುವುದಕ್ಕಾಗುವುದಿಲ್ಲ ಮತ್ತು ಹೇಳಿದ್ದುದು ತಪ್ಪು ಎಂದೂ ಹೇಳುವುದಕ್ಕಾಗುವುದಿಲ್ಲ. ನಮ್ಮ ನಿಲುವು ಏನು ಎನ್ನುವುದನ್ನು ಪ್ರತಿಪಾದನೆ ಮಾಡುವುದು ನಮಗೆ ಸೇರಿದ್ದುದು. ಅಂತಿಮವಾಗಿ ಹೊರಗಡೆ ಇರತಕ್ಕಂಥಾವರು, ಎರಡು ಕಡೆ ಈ ವಾದವನ್ನು ಕೇಳಿದಮೇಲೆ ಒಂದು ತೀರ್ಮಾನಕ್ಕೆ ಬರುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಹೇಳಿದೆ, ಈ ದೇಶದಲ್ಲಿ ನಿರುದ್ಯೋಗ ನಿವಾರಣೆ ಮಾಡತಕ್ಕ ಒಂದೇ ಒಂದು ಉದ್ಯಮ, ಅದು ವ್ಯವಸಾಯ. ಎರಡು ಲಕ್ಷ ಕೋಟಿ ರೂಪಾಯಿಗಳನ್ನು ಪಬ್ಲಿಕ್ ಸೆಕ್ಟಾರ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದರೂ, the work-force never exceeded more than 18%. ಇವತ್ತು ನೂರದಲ್ಲಿ ಅರವತ್ತೈದು ಜನಕ್ಕೆ ಏನಾದರೂ ಜೀವನ ಮಾಡುವುದಕ್ಕೆ, ಸಾಧ್ಯವಿದ್ದರೆ, that is agriculture. 29% of the land less agricultural laborures. ಇವತ್ತು ಈ ದೇಶದಲ್ಲಿ ಏನಾದರೂ ಹಳ್ಳಿಗಳಲ್ಲಿ ಎರಡು ಹೊತ್ತು ಊಟ ಕಾಣಬೇಕೆಂದಿದ್ದರೆ, ಅದು ಈ ಒಂದು ಉದ್ಯಮದ ವ್ಯಾಪ್ತಿಯಲ್ಲಿ ಹಿಂದೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಮಾಡಿರುವ ಭಾಷಣವನ್ನೂ ನೋಡಿದ್ದೇನೆ. "Fertiliser subsidy must be retained". ಇದನ್ನು ಯಾವ ಕಾರಣಕ್ಕಾಗಿ ಹೇಳಿದ್ದಾರೋ, ಅದನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಒಂದು ನಿಲುವು ತೆಗೆದುಕೊಂಡಿದ್ದೀರಿ. ಈ ದೇಶದಲ್ಲಿ ಹೇಗೆ ಅಸಂಘಟಿತ ವರ್ಗಕ್ಕೆ ನೋಡುತ್ತೇವೆ, ಮತ್ತು ನಾವು ಅವರನ್ನು ಉಪೇಕ್ಷೆಯಿಂದ ಕಂಡುಕೊಂಡು ಬಂದಿದ್ದೇವೆಯೋ, ನಿರ್ಲಕ್ಷ್ಯ ಮನೋಭಾವನೆಯಿಂದ ಕಂಡುಕೊಂಡು ಬಂದಿದ್ದೇವೆಯೊ, ಅದರ ಬಗ್ಗೆ ಸಾಕಷ್ಟು ಅಂಕಿಅಂಶಗಳ ಆಧಾರದ ಮೇಲೆ ಇವತ್ತು ನಾನು ಸಮರ್ಥನೆ ಮಾಡಬಹುದು. ಇದರೊಳಗೆ ಒಂದು ಜಾತಿಯ ಪ್ರಶ್ನೆ ಅಲ್ಲ. ಇದು ಒಂದು ವರ್ಗದ ಪ್ರಶ್ನೆ. ನಾನು ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಪಾಲಿಸಿ ಹೇಳಿದೆ. ಇದನ್ನು ರೂಪಿಸುವವರು ಯಾರು? ಇದನ್ನು ರೂಪಿಸುವವರು ಸರ್ಕಾರವನ್ನು ನಡೆಸುವವರಲ್ಲ. ಸರ್ಕಾರ ನಡೆಸುವವರ ಮೇಲೆ ಸಂಘಟಿತ ಶಕ್ತಿ ಏನಿದೆ, ಅವರು ಎಷ್ಟರಮಟ್ಟಿಗೆ ಒತ್ತಡ ತರುತ್ತಾರೆ ಎಂಬುದು ನಮಗೆ ಗೊತ್ತಿದೆ. ಇಲ್ಲಿ ಸ್ವಲ್ಪ ಹತ್ತಿ ಬೆಲೆ ಜಾಸ್ತಿಯಾದರೆ ಹೊರಗಡೆಯಿಂದ ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಮತ್ತೆ ಈರುಳ್ಳಿ ವಿಷಯದಲ್ಲಿ ಒಂದು ರಾಜಕೀಯವೇ ಆಯಿತು. 8 ರೂಪಾಯಿಗೆ ಒಂದು ಕೆ.ಜಿ. ಈರುಳ್ಳಿ ಹೋಯಿತು ಎಂದರೆ, ಜನತಾದಳ ಸರ್ಕಾರ ಹೋಗುವುದಕ್ಕೆ

ಕಾರಣವಾಯಿತು. ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಸ್ವಲ್ಪ ದಯಮಾಡಿ ಕುಳಿತುಕೊಳ್ಳಿ. Export -Import policy is going to be dictated by vested interests in this country. ಇದಕ್ಕೆ ಈ ಪಕ್ಷ ಆ ಪಕ್ಷ ಎಂದು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. How the vested interests are going to control the Government? ಆ ಒಂದು ದೃಷ್ಟಿಕೋನದಿಂದ ಈ ಮಾತನ್ನು ಹೇಳಿದ್ದೇನೆ ಅಷ್ಟೆ. ಇವತ್ತು ಚೈನಾ ಸಿಲ್ಕ್ ತರುತ್ತಿದ್ದಾರೆ. ಯಾರಿಗೋಸ್ಕರ ತರುತ್ತಿದ್ದಾರೆ, ಎಷ್ಟು ಬರುತ್ತಾ ಇದೆ. ಎಕ್ಸ್‌ಪೋರ್ಟ್ ಮಾಡತಕ್ಕ ಗಾರ್ಮೆಂಟ್ಸ್‌ಗೆ ಅದನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಎಂದು ಹೇಳುತ್ತಿದ್ದಾರೆ. ಅಗ್ರಿಕಲ್ಚರ್ ಕನ್‌ಸಲ್ಟೆಟೀವ್ ಕಮಿಟಿಯ ಪ್ರೊಸೀಡಿಂಗ್ಸ್ ಇಟ್ಟುಕೊಂಡಿದ್ದೇನೆ. ಎಷ್ಟು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದೀರಿ ಎಂದು ಕೇಳಿದರೆ, ಅದಕ್ಕೆ ತತ್ಸಮವಾಗಿ ಎಷ್ಟು ಇವತ್ತು ಎಕ್ಸ್‌ಪೋರ್ಟ್ ಆಗುತ್ತದೆ, ಅವರು ಹೇಳುವುದು, ಎಕ್ಸ್‌ಪೋರ್ಟ್ ಮಾಡುವುಧಕ್ಕೆ ಬೇಕಾದ ಗಾರ್ಮೆಂಟ್ಸ್‌ನ್ನು ತಯಾರು ಮಾಡುವುದಕ್ಕೆ ಮಾತ್ರ ಅದನ್ನು ಬಳಕೆ ಮಾಡುತ್ತೇವೆ. ಎನ್ನುವ ಮಾತನ್ನು ಹೇಳಿದ್ದಾರೆ. ಅದೇ Commerce Ministry ಒಳಗೆ, ಯಾರು ಎವಿಡೆನ್ಸ್ ಕೊಡುವುದಕ್ಕೆ ಕಮಿಟಿ ಮುಂದೆ ಬರುತ್ತಾರೆ, ಅವರು, ನಿಮ್ಮ ಹತ್ತಿರ ಏನಾದರೂ ದಾಖಲಾತಿ ಇಟ್ಟುಕೊಂಡಿದ್ದೀರಾ ಎಷ್ಟು ವ್ಯವಹಾರ ಮಾಡಿ, ಎಷ್ಟು ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ, ಫಿನಿಷ್ಡ್‌ಗೂಡ್ಸ್ ಇಂಪೋರ್ಟ್ ಮಾಡುತ್ತಿದ್ದೀರಿ ಚೈನಾ ಸಿಲ್ಕ್ ಬಗ್ಗೆ ಕರೆಸ್ಪಾಂಡಿಗ್ ಆಗಿ ನೀವು ಎಕ್ಸ್‌ಪೋರ್ಟ್ ಮಾಡತಕ್ಕ ಫಿನಿಷ್ಡ್‌ಗೂಡ್ಸ್‌ನ ಲೆಕ್ಕ ನಿಮ್ಮ ಹತ್ತಿರ ಇದೆಯೇ ಎಂದು ಹೇಳಿದರೆ, "We are unable to give the information to the commitee" ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೇ, ಸ್ವಲ್ಪ ಎಣ್ಣೆ ಬೆಲೆ ಎಡಿಯಬಲ್ ಆಯಿಲ್ ಜಾಸ್ತಿ ಆಯಿತು ಅಂದರೆ ಹೊರದೇಶದಿಂದ ತರಿಸಬೇಕು ನಿಜ. ರೈತರಿಗೆ ನಾಲ್ಕು ಕಾಸು ಸಿಕ್ಕಿದರೆ ಸಂತೋಷ ಅಲ್ಲವೇ. ಮಾನ್ಯ ಅಧ್ಯಕ್ಷರೇ ಸಕ್ಕರೆಯಲ್ಲಿ ಏನಾದರೂ 4 ಕಾಸು ರೈತನಿಗೆ ಸಿಗುತ್ತದೆ ಅಂದರೆ ಶುರು ಆಯಿತು. ಮೊನ್ನೆ ಏನು ದೊಡ್ಡ ಹೋರಾಟ ಆಯಿತು ಪಾರ್ಲಿಮೆಂಟ್‌ನಲ್ಲಿ. ಶುಗರ್ ಸ್ಕ್ಯಾಂಡಲ್ ಎಷ್ಟು ದೂರ ಹೋಗುತ್ತೇವೆ ಅಂದರೆ, ರೈತ ತನ್ನ ಟ್ರಾಕ್ಟ್‌ರ್‌ಗೆ ಉಪಯೋಗ ಮಾಡತಕ್ಕಂಥ ಟೈರ್‌ಗಳನ್ನು ಯಾವುದೇ ಕಾರಣಕ್ಕೂ ಇಂಪೋರ್ಟ್ ಮಾಡಿಕೊಳ್ಳಬಾರದು ಎಂದು ಕೇಂದ್ರ ಸರ್ಕಾರ ತನ್ನ ನೀತಿಯನ್ನು ನಿರೂಪಣೆ ಮಾಡುತ್ತದೆ. ಹಾಗಾದರೆ ನಾನು ಈ ರಾಜ್ಯದ 5 ಕೋಟಿ ಜನತೆಯ ಪರವಾಗಿ ರೈತರ ಪರವಾಗಿ ಇದು ತಪ್ಪು ಎಂದು ಹೇಳುವಂತಹ ಅಧಿಕಾರ ನನಗೆ ಇಲ್ಲವೇ? ಬಸ್ಸು ಮಾಲೀಕರು ಉಪಯೋಗ ಮಾಡುವಂತಹ ಬಸ್ಸುಗಳ ಟೈರ್ ಬೆಲೆ ಜಾಸ್ತಿಯಾದರೆ ಇಂಪೋರ್ಟ್ ಮಾಡಿಕೊಳ್ಳಬಹುದು. ಕಾರಿನ

ಟೈರ್‌ಗಳ ಬೆಲೆ ಜಾಸ್ತಿಯಾದರೆ ಅವುಗಳನ್ನು ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ಮೊನ್ನೆ ಬಜೆಟ್‌ನಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ ಆದರೆ ರೈತ ತನ್ನ ಟ್ರ್ಯಾಕ್ಟರ್ ಉಪಯೋಗ ಮಾಡತಕ್ಕಂಥ ಟೈರ್‌ಗಳ ಬೆಲೆ ಜಾಸ್ತಿಯಾದರೆ ಅದನ್ನು to keep it under check ಇವತ್ತು ಇಂಪೋರ್ಟ್ ಮಾಡಿಕೊಳ್ಳುವುದು ಅವಕಾಶ ಇಲ್ಲ, ಬ್ಯಾನ್ ಮಾಡಿದ್ದೀರಿ. ಇದನ್ನು ಕೇಳುವ ಅಧಿಕಾರ ಕೇಂದ್ರದ ಬಜೆಟ್ ಬಗ್ಗೆ ರಿಯಾಕ್ಷನ್, ಈ ಸದನಕ್ಕೂ ಇದೇ ಮಾಡಲಿಕ್ಕೆ ಸದನದ ಹೊರಗಡೆ ಇರತಕ್ಕಂಥವರು ರೀಯಾಕ್ಷನ್ ಮಾಡುವುದಕ್ಕೂ ಆಧಿಕಾರ ಇದೆ ಮಾನ್ಯ ಅಧ್ಯಕ್ಷರೇ, ನಾನು ಏನಾದರೂ ಹೇಳಿದರೆ ದೇವೇಗೌಡರು ಮನಸ್ಸಿಗೆ ಬಂದ ಹಾಗೆ ಮಾತಾನಾಡುತ್ತಾರೆ ಎಂದು ಹೇಳುತ್ತಾರೆ. ಡಾಕ್ಟರ್ ಸ್ವಾಮಿನಾಥನ್ one of the renowned scientists in this country - ಏನು ಹೇಳಿದ್ದಾರೆಂದರೆ -

ನೀವು ಅಗ್ರಿಕಲ್ಚರ್‌ಗೆ ಸರಿಯಾದಂತಹ ಬ್ಯಾಂಕಿಂಗ್ ಕೊಟ್ಟರೆ, ಸಪೋರ್ಟ್‌ಕೊಟ್ಟರೆ, 60 ಸಾವಿರ ಕೋಟಿ ಪ್ರತಿ ವರ್ಷ ಫಾರಿನ್ ಎಕ್ಸ್‌ಚೇಂಜ್ ಅರನ್ ಮಾಡುವುದಕ್ಕೆ ಅವಕಾಶ ಇದೆ ಎಂದು ಹೇಳಿದರು. He came before the Consultative Committee attatched to the Ministry of Commerce and deposed before it, where I was also a Member. ಪ್ರೈವೈಟ್ ಸೆಕ್ಟಾರ್‌ನಲ್ಲಿ ಎನು ಲೋನ್ ಕೊಡುತ್ತೀರಿ ಅದನ್ನು ಹೆಚ್ಚು ಮಾಡಿ ಅದರ ಇನ್‌ಪುಟ್ ಕಾಸ್ಟ್ ಹೆಚ್ಚು ಮಾಡಿ. ಈ ದೇಶದಲ್ಲಿ ಇಂಡಸ್ಟ್ರಿಗಳಿಗೆ ಕೊಡತಕ್ಕಂಥ ಎಲ್ಲಾ ರಿಯಾಯಿತಿಗಳು ಏನು ಇವೆ ಅದರಿಂದ ನೀವು ಅಷ್ಟು ತೃಪ್ತರಾಗುವುದಕ್ಕೆ ಸಾಧ್ಯವಾಗುವುದಿಲ್ಲ. ನೀವೇನು ಸಾಲ ಮಾಡಿದ್ದೀರಿ. ಈ ಸಾಲದ ಬಗ್ಗೆ ನಾನು ಹೇಳುತ್ತೇನೆ. ಮಾನ್ಯ ನರಸಿಂಹರಾವ್‌ರ ಬಗ್ಗೆ ಈ ಸದನದಲ್ಲಿ ಹೇಳಿದರೆ ಈ ಕಡೆ ಕುಳಿತು ಕೊಂಡಿರುವವರು ತಪ್ಪು ತಿಳಿದುಕೊಂಡರೆ ಚಿಂತೆ ಇಲ್ಲ. How can I blame Mr. Narasimha Rao for Rs. 2 lakhs crores of external debt ? ನರಸಿಂಹರಾವ್‌ರವರು ಬರುವಷ್ಟರಲ್ಲಿ ಚಂದ್ರಶೇಖರ್‌ರವರು ಸುಮಾರು 22 ಟನ್ ಅಥವಾ 30 ಟನ್ ಚಿನ್ನವನ್ನು ಬಡ್ಡಿಗೋಸ್ಕರ ಗಿರವಿ ಹಾಕಿದ್ದರು. ಕಾರಣ ಈ ದೇಶದ ಮರ್ಯಾದೆ ಉಳಿಸಬೇಕು ಎಂದು otherwise, there would have been a debt trap. ನಾವು ಸಿಕ್ಕಿ ಬೆಗ್ಗರ್ಸ್ ಕ್ಲಬ್ ಎಂದು ಏನೋ ಇದೆ. ಈ ದೇಶ ಆ ಬೆಗ್ಗರ್ಸ್‌ಕ್ಲಬ್‌ಗೆ ಹೋಗಬೇಕಾಗಿತ್ತು. ಇವತ್ತು ಈ ದೇಶದಲ್ಲಿ ಎರಡು ಲಕ್ಷ ಕೋಟಿ ಸಾಲವನ್ನು ನಾವು ಫಾರನ್ ಟೆಕ್ಸ್‌ನಿಂದ ಮಾಡಬೇಕಾಗಿದ್ದರೆ ಸನ್ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಈ ಸದನದಲ್ಲಿ ಕುಳಿತಿದ್ದಾರೆ, 1980ನೇ ಇಸವಿಯಿಂದ ಯಾವ ಯಾವ ರೀತಿಯಲ್ಲಿ ಸಾಲ ಬಂದಿದೆ ಎನ್ನುವ ಬಗ್ಗೆ ಪಾರ್ಲಿಮೆಂಟ್ ಮುಂದೆ ಬಂದು ವಿಷಯ ಚರ್ಚೆ ಆಗಿದೆ ಇದರ ಬಗ್ಗೆ ನಾನು

ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ನಾನು ಇಂದಿನ ಪ್ರಧಾನ ಮಂತ್ರಿಗಳನ್ನು ಹೊಣೆ ಮಾಡುವುದಕ್ಕೆ ಹೋಗುವುದಿಲ್ಲ. When the country was facing such a crisis. 1980ರಿಂದ 1985-86ರವರೆಗೂ ಹೇಗೆ ಆಯಿತು. 1986 ಆದ ಮೇಲೆ ಏನಾಯಿತು ? Short-term loan in some of the commercial banks, overseas banks .... 10 ತಿಂಗಳು, 6 ತಿಂಗಳು 3 ತಿಂಗಳಿಗೆ ಸನ್ಮಾನ್ಯ ಅಧ್ಯಕ್ಷರೇ ಇವತ್ತು ಈ ಒಂದು ಸಾಲ ತೀರಿಸಬೇಕು. ನಾವೆಲ್ಲರೂ ಇದಕ್ಕೆ ಜವಾಬ್ದಾರರು ಇದ್ದೇವೆ. ಯಾರೊಬ್ಬರು ತೀರಿಸುವುದಕ್ಕೆ ಆಗುವುದಿಲ್ಲ ನಾಳೆ ಬೆಳಿಗ್ಗೆ ನರಸಿಂಹರಾಯರು ಹೋಗಿ ಇನ್ನು ಯಾರೋ ಒಬ್ಬರು ಪ್ರಧಾನ ಮಂತ್ರಿ ಅದರೆ ಅವರು ಆ ಸಾಲವನ್ನು ಅವರ ಮನೆಯಿಂದ ತಂದು ಕಟ್ಟಲಿಕ್ಕೆ ಆಗುವುದಿಲ್ಲ. ಈ ದೇಶದಲ್ಲಿ ಉತ್ಪಾದನೆ ಹೆಚ್ಚು ಮಾಡಬೇಕು, ವಿದೇಶಿ ವಿನಿಮಯ ಹೆಚ್ಚು ಗಳಿಸಬೇಕು 65ಪರ್ಸೆಂಟ್ ವರ್ಕ್‌ಫೋರ್ಸ್ ಇರತಕ್ಕಂಥ ಈ ವ್ಯವಸಾಯ ರಂಗದಲ್ಲಿ ಹಗಲು ರಾತ್ರಿ ದುಡಿಯತಕ್ಕಂಥ ರೈತನ ಬಗ್ಗೆ ಈ ದೇಶದ ಅತ್ಯಂತ ಗಣ್ಯ ವ್ಯಕ್ತಿ ಒಬ್ಬ ತಂತ್ರಜ್ಞಾನಿ ಹೇಳುತ್ತಾರೆ. every year we can earn Rs. 60,000 crores of foreign exchange if you provide sufficient capital. ಇದನ್ನು ಮಾಡುವುದಕ್ಕೆ ಇವತ್ತೂ ಕೂಡ ಹಿಂದೆ ಮುಂದೆ ನೋಡುತ್ತಾರೆ. ಇದನ್ನು ಡಿಕ್‌ಟೇಟ್ ಮಾಡುವವರು ಯಾರು ? ಸನ್ಮಾನ್ಯ ಮೊಯಿಲಿಯವರೇ, ಪ್ರಾಮಾಣಿಕವಾಗಿ ನಾವು ಚರ್ಚೆಗೆ ಬರೋಣ. ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರದಲ್ಲಿದ್ದರು.

Has she agreed for the conditions laid down by the World Bank or IMF, Rajiv Gandi was also in power, has he agreed for the terms and conditions laid down by IMF or World Bank ? I may differ with some of the policies. Loan mela, I may differ. Why ; today we have accepted ? What for ?

ಈ ರಾಷ್ಟ್ರದ ರೈತನಿಗೆ ನಾವು ಏನು ನೆರವು ಕೊಡಬೇಕು ಎನ್ನುವುದರ ಬಗ್ಗೆ who is he to dictate ? Sir, I may honestly tell you this. In Inter-action Committee meeting in Davos ; when 34 states represented, the World Bank representative was also there, I raise this issue; who are you. ? We are well within 10% ceiling limit imposed by the GATT. Ours is hardly 2.8% and they

want to impose on us because they want to see that the Indian agriculture is destroyed.

ಹೌದು 3 ವರ್ಷ ಒಳ್ಳೆಯ ಮಳೆ ಬೆಳೆ ಆಯಿತು. The Parliamentary standing Committee itself has given a recommendation after examining the Petro Chemicals and Fertilizer Department. 33% of the phosphate fertilizer consumption has gone down.

ಇದರಿಂದ ಭೂಮಿಯ ಚಾರಿತ್ರ್ಯ ಏನಾಗುತ್ತದೆ ? ಭೂಮಿಯ ಒಂದು ಪ್ರೊಡಕ್ಟಿವಿಟಿ ಎಷ್ಟರ ಮಟ್ಟಿಗೆ ಇಳಿತಾಯವಾಗುತ್ತದೆ ಎನ್ನುವ ಬಗ್ಗೆ ನಾವು ರಾಜಕಾರಣಿಗಳು ಚರ್ಚೆ ಮಾಡುವುದು ಬೇಡ. ಸನ್ಮಾನ್ಯ ಅಧ್ಯಕ್ಷರೇ, ಬಹು ಕಾಲ ನಾವು ಇದನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ. ನಾನು ಈ ಮಾತನ್ನು ಪ್ರಧಾನ ಮಂತ್ರಿಗಳ ಹತ್ತಿರ ಬಹಳ ವಿನಯದಿಂದ ಪ್ರಾರ್ಥನೆ ಮಾಡಿದ್ದೇನೆ. ಈ ಸದನದಲ್ಲಿ ಹೇಳುತ್ತೇನೆ ಇದರಲ್ಲಿ ಕದ್ದು ಮುಚ್ಚಿ ಏನೂ ಮಾತನಾಡಬೇಕಾಗಿಲ್ಲ. ಈ ಒಂದು ವಿಷಯದಲ್ಲಿ ಜನ ಇವತ್ತು ಸರ್ಕಾರದ ಮೇಲೆ ತಿರುಗಿ ಬೀಳುತ್ತಾರೆ. ಮೊಯಿಲಿಯವರ ಸರ್ಕಾರ ಹೋಯಿತು, ವಿಜಯಭಾಸ್ಕರ ರೆಡ್ಡಿಯವರ ಸರ್ಕಾರ ಹೋಯಿತು ಅದರಿಂದ ನನಗೇನೂ ಆನಂದ ಅಲ್ಲ. ನೀವೇನೂ ಕೆಲಸ ಮಾಡಲಿಲ್ಲ ಬಂಗಾರಪ್ಪನವರು ನೀವು ನೀವೆಲ್ಲ ಹಾಗೆ ನಿದ್ದೆ ಮಾಡುತ್ತಿದ್ದೀರಿ ನಿಮ್ಮ ಸರ್ಕಾರದಲ್ಲಿ ಏನೂ ಅಚೀವ್‌ಮೆಂಟ್ ಇಲ್ಲ ಎಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ ನಾನು ಆ ಲೆವೆಲ್‌ಗೆ ಇಳಿಯುವುದಿಲ್ಲ. ಇದರಲ್ಲಿ ನೂರಕ್ಕೆ ನೂರು ಪರ್ಸೆಂಟ್ ಅಚೀವ್‌ಮೆಂಟ್ ಇಲ್ಲಿ ಇರಬಹುದು. ಆದರೆ ತಾವು ಏನೂ ಮಾಡಲಿಲ್ಲ ಎಂದು ಹೇಳುವಂತಹ ಯೋಗ್ಯತೆ ನನಗೆ ಇಲ್ಲ. You have done something. ಜಗಳ ಎಲ್ಲರಲ್ಲೂ ಇದೆ, ಯಾರಲ್ಲಿ ಇಲ್ಲ ಜಗಳ which is that political party which has no internal quarrel. ಆದರಿಂದಲೇ ಹೋಯಿತು ಎಂದು ನಾನು ವಾದ ಮಾಡುವುದಿಲ್ಲ. ಬಿಡಾರದಲ್ಲಿ ಜನತಾದಳದಲ್ಲಿ ಜಗಳ ಇತ್ತಲ್ಲ why people have voted? The issue before us is, today the farmers have awakened ; the weaker sections of the society who are living on the P.D.S. system who cannot go to the market and purchase they have realised. Sir, the National Sample Survey has given a report saying that during 1992-1993 that the consumption of food articles by these poorer and weaker sections was 500 Grams per day.

12.40. ಪಿ.ಎಂ.

Whereas in 1993-94, 1994-95, it came down to 435 Gms. ಇವತ್ತು 30 ಮಿಲಿಯನ್ ಟನ್ ಆಹಾರ ಧಾನ್ಯ ಗೋಡನ್‌ನಲ್ಲಿ ಸ್ಟಾಕ್ ಇದೆ. ಆದರೆ ಕೊಂಡು ಕೊಳ್ಳುವ ಶಕ್ತಿ ಇಲ್ಲ, ಆದರಿಂದಲೇ, ಅನೇಕ ಜನ ಎಕನಾಮಿಸ್ಟ್ ಬರೆದಿದ್ದಾರೆ ; it is not a populist programme. It is a programme that is going to help the poorer sentions of the society so far as food subsidy and agriculture subsidy is concerned. I do not want to name them. Ashok Gulathi, a well-known Agricultural Economist who argued this before the Committee. We cannot say that this is a populist programme. ನಾವು ಶಾಶ್ವತವಾಗಿ ಇರುತ್ತೇನೆಂದು ಎಂದೂ ಹೇಳಿಲ್ಲ. ನಾನು ಬಂದಿದ್ದೂ ಆಕಸ್ಮಿಕ. 1989ರ ಚುನಾವಣೆಯಲ್ಲಿ ನಾನು ಸೋತಿದ್ದೆ. ನಾಳೆ ಯಡಿಯೂರಪ್ಪನವರೇ ಇಲ್ಲಿ ಬಂದು ಕೂಡಬಹುದು, ಮಾನ್ಯ ಬಂಗಾರಪ್ಪನವರು, ನಾನು ಮತ್ತೆ ಅಧಿಕಾರಕ್ಕೆ ಬಂದು ಕೊರುತ್ತೆನೆಂದು ಹೇಳಿದರು. ಅದರಲ್ಲಿ ಆಶ್ಚರ್ಯಪಡಬೇಕಾದುದಿಲ್ಲ. The SJP has come back to power in Orissa. I never dispute this argument. My only concern is, ಈ ಇನ್ಸ್ಟಿಟ್ಯೂಷನ್ಸ್ ಯಾರಿಗೋಸ್ಕರ ಕೆಲಸ ಮಾಡುತ್ತಿವೆ ? ನಾವ್ಯಾರೂ ಆ ವರ್ಗದ ಪ್ರತಿನಿಧಿಗಳಲ್ಲ. ಇಲ್ಲಿ ಇರುವವರು ಯಾರೂ ಅಲ್ಲ. ಆದರೆ ದುರಾದೃಷ್ಟ, ಡೆಲ್ಲಿಯೊಳಗೆ ಇದನ್ನು ಕಂಟ್ರೋಲ್ ಮಾಡುವ ಶಕ್ತಿ ಇದೆ. ಅಲ್ಲಿ ಪಕ್ಷ ರಾಜಕಾರಣಗಳು ಬರುತ್ತವೆ. ಇಲ್ಲಿ ಬಂಗಾರಪ್ಪನವರೂ ಅಲ್ಲ, ಕಂಟ್ರೋಲ್ ಮಾಡುವ ಜನ ಬೇರೆ ಇದ್ದಾರೆ. ಇಲ್ಲಿ ಯಡಿಯೂರಪ್ಪನವರು ದಿನಾ ಕೂಗುವುದು, ನಾವೂ ಮಣ್ಣಿನ ಮಕ್ಕಳು, ದೇವೇಗೌಡ ಒಬ್ಬನೇ ಅಲ್ಲ. ಅವರೇನೂ ಕಡಿಮೆ ಕೂಗಿಲ್ಲ. ನಾನು ನಿಮ್ಮ ಮ್ಯಾನಿಫೆಸ್ಟೋ ಬಗ್ಗೆ ಹೇಳುತ್ತೇನೆ. ನಾನು ಕುಣಿಗಲ್‌ಗೆ 80 ಕಿಲೋಮೀಟರ್ ಸ್ಪೀಡ್‌ನಲ್ಲಿ ನಡೆದರೆ ಯಡಿಯೂರಪ್ಪನವರು 180, 200 ಕಿಲೋಮೀಟರ್ ಸ್ಪೀಡ್‌ನಲ್ಲಿ ನಡೆದಬಿಟ್ಟಿದ್ದಾರೆ. ಆದರೆ, ನಿಮ್ಮ ಕೂಗು ಅಲ್ಲಿ ಮುಟ್ಟಬೇಕಲ್ಲಾ ನನ್ನ ಸಹೋದ್ಯೋಗಿ ಬೈರೇಗೌಡರು ಏನೋ ಹೇಳಿದಾಗ, ನನ್ನ ಸಹೋದರಿ ಸ್ವಲ್ಪ ಪ್ರತಿಭಟನೆ ಮಾಡಿದರು. ಮಾನ್ಯ ರಾಜೀವ್ ಗಾಂಧಿಯವರ ಹೆಸರಿನಲ್ಲಿ ಒಂದು ಟ್ರಸ್ಟ್ ಮಾಡಿ ಅದಕ್ಕೆ 100 ಕೋಟಿ ರೂಪಾಯಿ ಇಡುತ್ತೇವೆಂದಾಗ, ಅದನ್ನು ಕೈ ಬಿಡದ್ದಿರೆ ಬಜೆಟ್‌ನ್ನು ಪಾಸ್ ಮಾಡುವುದಿಲ್ಲವೆಂದು ಹೇಳಿದಂಥ ವಿರೋಧಿ ಪಕ್ಷದ ನಾಯಕರು, 5 ಸಾವಿರ ಕೋಟಿ ರೂಪಾಯಿಗಳನ್ನು ರೈತರಿಗೆ ಕೊಡುತ್ತಿರುವಂಥ ಸಬ್ಸಿಡಿ ಹಣವನ್ನು

ತೆಗೆಯುತ್ತೇವೆಂದು ಹೇಳಿದಾಗ ಆವತ್ತು ಆ ಮಾತನ್ನು ವಿರೋಧ ಪಕ್ಷದ ನಾಯಕರು ಹೇಳಿದ್ದಿದ್ದರೆ, ನಾನು ಶರಣಾಗುತ್ತಿದ್ದೆ, ತಲೆ ಬಾಗುತ್ತಿದ್ದೆ. It is a Parliamentary document. It is not a cock and bull story. That is all I want to say here. ಆ ದಿನ ಹೌಸನ್ನು ನಡೆಯುವುದಕ್ಕೆ ಬಿಡಲಿಲ್ಲ. ರಾಜೀವ್ ಗಾಂಧಿ ಟ್ರಸ್ಟ್‌ಗೆ ದೇಶದ 100 ಕೋಟಿ ಜನರ ಹಣವನ್ನು ನೀವು ಕೊಡುವುದಕ್ಕೆ ಸಾಧ್ಯವಿಲ್ಲ. ನೀವು ಬಜೆಟ್ ಪಾಸ್ ಮಾಡುವುದಕ್ಕೆ ನಮ್ಮ ಸಹಕಾರ ಬೇಕು ಎಂದಾದರೆ, ಅದನ್ನು ತೆಗೆಯಿರಿ ಎಂದು ಪಟ್ಟು ಹಿಡಿದರು. ಮಾರನೆಯ ದಿವಸ, ಮನಮೋಹನ್ ಸಿಂಗ್‌ರವರು ಅದನ್ನು ತೆಗೆಯುತ್ತೇವೆಂದು ಒಪ್ಪಿಕೊಂಡರು. ನಂತರ ಬಜೆಟ್ ಆಯಿತು. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರೈತರುಗಳಿಗೆ ತುಂಬಾ ಶಕ್ತಿ ಕೊಟ್ಟಿದ್ದೇವೆಂದು ಹೇಳುವ ಯೋಗ್ಯತೆ ನನಗಿಲ್ಲ. ಎಲ್ಲಿಂದ ಬರಬೇಕು ? ಈ ಬಜೆಟ್‌ನ್ನು ನಾನು ಮಂಡನೆ ಮಾಡಿದರೂ ಅಷ್ಟೇ, ಮಾನ್ಯ ಬಂಗಾರಪ್ಪನವರು ಮಂಡನೆ ಮಾಡಿದರೂ ಅಷ್ಟೇ, ಮೊಯಿಲಿಯವರು ಮಂಡನೆ ಮಾಡಿದರೂ ಅಷ್ಟೇ ನಮ್ಮನ್ನು ಹತ್ತಿರ ರಿಸೋರ್ಸ್‌ಸ್ ಎಲ್ಲಿದ್ದೆ ? ತಿರುಗಾಮುರುಗಾ ಲೆಕ್ಕಾ ಹಾಕಿ ನನಗೆ ಸಲಹೆ ಕೊಡುತ್ತಾರೆ. ನಿಮ್ಮ ಕಾಲದಲ್ಲಿ ಯಾವ ಅಧಿಕಾರಿಗಳು ಸಲಹೆ ಕೊಡುತ್ತಿದ್ದರೋ ಅದೇ ಅಧಿಕಾರಿಗಳು ನನಗೂ ಸಲಹೆ ಕೊಡುತ್ತಿದ್ದಾರೆ. ಆ ಅಧಿಕಾರಿಗಳನ್ನು ನಾನು ಇನ್ನೂ ಬದಲಾವಣೆ ಮಾಡಲಿಲ್ಲ. ಸನ್ಮಾನ್ಯ ಅಧ್ಯಕ್ಷರೆ, 1,570 ಕೋಟಿ ಹಣ ಬ್ಯಾಂಕ್‌ನಲ್ಲಿ ಲೂಟಿಯಾಗಿರುವುದಕ್ಕೆ ಸಬ್ಸಿಡಿ ಕೊಡುತ್ತೇವೆಂದು ಹೇಳಿದ್ದಾರೆ. ಯಾರು ಕೆಲವೇ ಕೆಲವು ಮಂದಿ ಈ ದೇಶದಲ್ಲಿರತಕ್ಕಂಥ ಎಲ್ಲಾ ವ್ಯವಸ್ಥೆಗಳಿಂದ ನುಣುಚಿಕೊಂಡು ಬ್ಯಾಂಕ್‌ನಲ್ಲಿ ಲೂಟಿ ಮಾಡಿದರಲ್ಲಾ ? ಆದಕ್ಕಾಗಿ ಈ ದೇಶದ ಜನತೆಯ ತೆರಿಗೆ ಹಣದಲ್ಲಿ 10,570 ಕೋಟಿ ರೂಪಾಯಿ ಹಣವನ್ನು ರೀಯಂಬರ್ಸ್‌ಮೆಂಟ್ ಮಾಡುತ್ತೇವೆಂದು ಹೇಳಿದರು. ಆದರೆ, ಯಾರು ವ್ಯವಸಾಯದ ಮೇಲೆ. ಇವತ್ತು ಜೀವನ ಮಾಡುತ್ತಿದ್ದಾರೋ ? ಯಾರು ನೂರಕ್ಕೆ 76 ರಷ್ಟು ಜನ ಬಿಲೋ ಎರಡು ಹೆಕ್ಟೇರ್‌ಗಳ ಕೆಳಗಡೆ ಇದ್ದಾರೋ ? 10 ಗುಂಟೆ, ಅರ್ಧ ಎಕರೆ, ಒಂದೂವರೆ ಎಕರೆ, ಎರಡು ಎಕರೆ ಜಮೀನು ಇರತಕ್ಕಂಥವರಿಗೆ ಫುಟ್ ಸಬ್ಸಿಡಿ + ಫರ್ಟಿರೈಸರ್ ಸಬ್ಸಿಡಿ ಸೇರಿ 11 ಸಾವಿರ ಕೋಟಿ ರೂಪಾಯಿಗಳನ್ನು ಕೊಡುವುದನ್ನು ನಿಲ್ಲಿಸಿ, ಯಾರು 30-40 ಜನ ದಳ್ಳಾಳಿಗಳು ಲೂಟಿ ಮಾಡಿದ್ದಾರೋ ಅದಕ್ಕೆ 10,570 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಈ ಸಾರಿ ನನಗೆ ಸ್ವಲ್ಪ ಸಮಾಧಾನವಾಯಿತು, ಮೊದಲನೆ ದಿವಸ ಪೇಪರ್ ಓದಿದ್ದಕ್ಕೆ, ಫಾರ್ಮರ್ ಸಬ್ಸಿಡಿ ಹ್ಯಾಸ್ ಬೀನ್ ಇನ್‌ಕ್ರೀಸ್. ಇದನ್ನು ನೋಡಿ ಸ್ವಲ್ಪ ಖುಷಿಯಾಯಿತು. ನಾನು ಮಾನ್ಯ ನರಸಿಂಹರಾಯರ ಮನೆಗೆ ಹೋಗಿ, ಮನಮೋಹನ್ ಸಿಂಗ್‌ರವರನ್ನು ನೋಡಿ, ಫರ್ಟಿಲೈಸ್ ಮಿನಿಸ್ಟರ್‌ರವರನ್ನು

ನೋಡಿ, ಕಾಮರ್ಸ್ ಮಿನಿಸ್ಟರ್‌ರವರನ್ನು ನೋಡಿ ಅವರ ಹತ್ತಿರವೆ ಓಡಾಡಿ, ಈ ಸಾರಿಯಾದರೂ ಸಬ್ಸಿಡಿಯನ್ನು ಹೆಚ್ಚು ಮಾಡಿ, ಅದರ ಕೀರ್ತಿ ನಿಮಗೇ ಬರಲಿ ನನಗೇನೂ ಬೇಡ ಎಂದು ಹೇಳಿದ್ದೆ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನಾನು ಪ್ರಧಾನ ಮಂತ್ರಿಯವರನ್ನು ನೊಡಿ ಇದರ ಬಗ್ಗೆ ಮಾತನಾಡಿದಾಗ, ಇಲ್ಲಾ ಇದರ ಬಗ್ಗೆ ನೀವು ತಪ್ಪು ತಿಳಿದುಕೊಂಡಿದ್ದೀರಿ, ಮನಮೋಹನ್‌ಸಿಂಗ್‌ರವರು ಇದಕ್ಕಾಗಿ 5 ಸಾವಿರ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ ಎಂದು ಹೇಳಿದ್ದಾರೆ ಎಂದು ತಿಳಿಸಿದರು. ನಾನು ಇಲ್ಲಿ ಬಂದು ಅಧಿಕಾರಿಗಳನ್ನು ಕೂಡಿಸಿಕೊಂಡು ಈ ಸಾರಿ 1500 ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿದ್ದಾರೆಂದು ಹೇಳಿದ್ದಾರೆ ಎಂದು ತಿಳಿಸಿದೆ. ಇದರ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಬಂದಿತ್ತು. ಅಲ್ಲಿ ಇರತಕ್ಕಂಥಾದ್ದು ಏನೆಂದರೇ ಹಿಂದಿನ ವರ್ಷ ಈ ಕಂಪನಿಗಳಿಗೆ ಬಾಕಿ ಏನು ಕೊಡಬೇಕಾಗಿತ್ತಲ್ಲಾ?, ಅದರ ರಿವೈಸ್ಡ್ ಎಸ್ಟಿಮೇಟ್ ಆಫ್ 1994-95 that has been provided in the current year's Budget. It is not the subsidy facility that has been provided to farmers. ಪುನಃ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಸರ್ ಹೀಗಾಗಿದೆ ಎಂದು ವಿವರಿಸಿದ ಮೇಲೆ ಅವರು ಅರ್ಥ ಮಾಡಿಕೊಂಡರು. ಮನಮೊಹನ್ ಸಿಂಗ್ ಹಾನೇಸ್ಟಿ ಬಗ್ಗೆ ಹೇಳಬೇಕಾಗಿಲ್ಲ. His honesty cannot be doubted by anybody even by worst enemy.

ಅವರ ತಲೆ ಒಳಗೆ ರೈತರ ಹತ್ತಿರ ಬಹಳ ದುಡ್ಡು ಇದೆ ಎಂಬ ಭಾವನೆ ಇರಬಹುದು. 8 ಯೋಜನೆಗಳಲ್ಲಿ ರೈತರುಗಳು ಬಹಳ ಹಣ ಮಾಡಿದ್ದಾರೆ ಎನ್ನುವ ಭಾವನೆ ಅವರಲ್ಲಿ ಇರಬಹುದು. ನಾವು ಬಂದು ನಾಲ್ಕು ತಿಂಗಳಾಗಿದೆ. ಈ ನಾಲ್ಕು ತಿಂಗಳೋಳಗೆ ಬಹಳ ದೊಡ್ಡ ಸಾಧನೆ ಮಾಡಿದ್ದೇವೆಂದು ಹೇಳುವಷ್ಟು ಯೋಗ್ಯತೆ ನಮಗೆ ಇಲ್ಲದಿದ್ದರೂ ಒಂದನ್ನು ಗಮನದಲ್ಲಿ ಇಟ್ಟು ಕೊಳ್ಳಬೇಕಾಗುತ್ತದೆ. ಈ ದೇಶದಲ್ಲಿ ಏನಾದರೂ ರೈತರಿಗೊಸ್ಕರ ಹೋರಾಟ ಮಾಡಿದಂಥ ಒಂದು ಸನ್ನಿವೇಶವಿದ್ದರೆ, ಇದನ್ನು ರಾಜಕೀಯಕ್ಕಾಗಿ ಹೇಳುತ್ತಿಲ್ಲ, ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಚೌಧರಿ ಚರಣಸಿಂಗ್‌ರವರು ನಮ್ಮ ಮುಂದೆ ಇಲ್ಲ. Sri Choudhary Charan Singh has written a Book "Nightmare of Indian Agriculture". ಅದನ್ನು ಓದಬೇಕು ನೀವು ಡಿಫೇಂಡ್ ಆಗಿ, ಬಿಡಿ. ಅವರ ಬಗ್ಗೆ ಪತ್ರಿಕೆಗಳಲ್ಲಿ ಏನೇನೋ ಈ ಬೇಡದಲ್ಲಿ ಶೂದ್ರ ಶಕ್ತಿ ಬೆಳೆಯಲಿಕ್ಕೆ ಯಾರೂ ಬಿಡುವುದಿಲ್ಲ. ಅದರ ಬಗ್ಗೆ ಚರ್ಚೆ ಈಗ ಬೇಡ. ಡಿ.ಪಿ.ಧರ್ ಇರಬಹುದು, ಪಬ್ಲಿಕ್ ಸೆಕ್ಟಾರ್ ಇನ್‌ವೆಸ್ಟ್‌ಮೆಂಟಿನ ಬಗ್ಗೆ ದೊಡ್ಡ ಪ್ರತಿಪಾದನೆ ಮಾಡಿದವರು, ಹಾಗೆಯೇ ಮಿನಾಸ್ ಎಂದು ಹೇಳಿ, ಅವರು ಪ್ಲಾನಿಂಗ್ ಕುಮಿಶನ್‌ನ ಮೆಂಬರ್ ಇದ್ದರು ಎಂದು ಕಾಣುತ್ತದೆ. To-day

it is the concern of all of us. It is not the concern of Paliament alone. ಪ್ರಧಾನಿಯವರು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಯವರನ್ನು ಕರೆಯಿಸಿ, I am going to discuss on this issue. Why he has stated that. It is the concern of the entire country. ನಾನು ಅ ಹಿನ್ನಲೆಯಲ್ಲಿ ಮಾತನಾಡುತ್ತಾ ಇದ್ದೇನೆ ಜನತಾ ದಳ ಸರಕಾರ ಬಂತು, ಅದು ಹತ್ತು ತಿಂಗಳು ಇದ್ದು ಹೋಯಿತು. ಹತ್ತು ವರ್ಷಗಳ ಕಾಲ 20 ವರ್ಷಗಳಕಾಲ ರಾಜ್ಯವನ್ನು ಅಳಬೇಕಾಗಿಲ್ಲ. 25 ವರ್ಷ ರಾಜ್ಯ ಆಳಿದರೂ ಅಧಿಕಾರ ಬಿಟ್ಟು ಹೋಗಬೇಕಾಗುತ್ತದೆ. Sir, the one Government which has atleast taken the decision to abolish the loan to the tune of Rs. 10,000/- crores. ಹತ್ತು ಸಾವಿರ ರೂಪಾಯಿಗಳ ಒಳಗಿರತಕ್ಕಂಥ ಸಾಲ. ಆದು ಅರ್ಟಿಸಾನ್ಸ್ ಇರಬಹುದು ಅಥವಾ ರೈತರು ಇರಬಹುದು. ಹತ್ತು ಸಾವಿರಗಳಿಗೆ ಒಳಪಟ್ಟು ಇರುವ ಸಾಲವನ್ನು ಮನ್ನಾ ಮಾಡಬೇಕು ಎಂದು. One time concession must be given ಎಂದು ಹೇಳಿ, ಶ್ರೀಮಾನ್ ಚೌಧುರಿ ದೇವಿಲಾಲ್‌ರವರು ಬೆಳಿಗ್ಗೆಯಿಂದ ಸಂಜೆಯವರೆಗೂ ಕೂಗಿದರು. ಅಂದಿನ ಪ್ರಧಾನಮಂತ್ರಿಗಳು ಅದನ್ನು ಅಕ್ಸೆಪ್ಟ್ ಮಾಡಿದರು. ಅಂದು ಮಧುದಂಡವತೆಯವರು ಫೈನಾನ್ಸ್‌ಮಿನಿಸ್ಟರ್ ಎಂದು ಕಾಣುತ್ತದೆ. ಅಷ್ಟೇ ಅಲ್ಲ ನಮ್ಮ ರಾಜ್ಯ ಸರಕಾರದವರು 50 ಪರ್‌ಸೆಂಟ್ ಲೋನ್‌ನ್ನು ನೀವು ಕೊಡಬೇಕೆಂದು ಹೇಳಿದಾಗ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅದನ್ನು ನಾವು ಸಾಲರೂಪದಲ್ಲಿ ಕೊಡುತ್ತೇವೆ, ನೀವು ಅದನ್ನು ತೆಗೆದುಕೊಳ್ಳಿ, ರಿ-ಅಂಬರ್ಸ್ ಮಾಡಿಕೊಳ್ಳಿ, 3-4 ವರ್ಷಗಳಲ್ಲಿ ಅದನ್ನು ತೀರಿಸಿರಿ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೆ ಇಲ್ಲಿ ನಾವು ಜಗಳಾಡಿದ್ದೇವೆ, ಒಂದಾಗಿದ್ದೇವೆ. ಎಲ್ಲಾ ಪಕ್ಷಗಳಲ್ಲಿಯೂ ಜಗಳ ಬರುತ್ತದೆ ಹೋಗುತ್ತದೆ. ಈ ದೇಶದ ರಾಜಕಾರಣದಲ್ಲಿ ಇಂಥ ಜಗಳಗಳು ಇದ್ದೇ ಇರುತ್ತದೆ. ಅದಕ್ಕಾಗಿ ಯಾರನ್ನೂ ಅಳೆಯ ಬೇಕಾಗಿಲ್ಲ. 1983 ರಿಂದ 1989ರ ವರೆಗೆ what is the loan component we have abolished ? Takavi loan, Land improvement loan, and various other types of loans ಇವೇ ಮುಂತಾದ ಲೋನ್ ಇರಬಹುದು, ಈಗ ನನ್ನ ಹತ್ತಿರ ಅಂಕಿಅಂಶಗಳು ಇಲ್ಲ, ಅದನ್ನು ಬೇಕಾದರೆ ತರಿಸಿಕೊಡುತ್ತೇನೆ. ಅದನ್ನು ಅಬಾಲಿಶ್ ಮಾಡಿದರು. ಯಾರು ಸಕಾಲದಲ್ಲಿ ಸಾಲ ಕೊಡುತ್ತಾರೋ ಅವರಿಗೆ 7 ಪರ್‌ಸೆಂಟ್ ಬಡ್ಡಿ ನಾವು ಕೊಡುತ್ತೇವೆ. ಬಾಕಿ ಇರುವುದನ್ನು ನೀವು ಕೊಡಿ, ಬಾಕಿ ಇರುವುದನ್ನು ನಾವೇ ನಿಮ್ಮ ಪರವಾಗಿ ಕಟ್ಟುತ್ತೇವೆ ಎಂದರು. 2 ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುವಂಥ ಕೆಲಸವನ್ನು ಮಾಡಿದ್ದೇನೆ

ದೊಡ್ಡ ಸಾಧನೆ ಮಾಡದಿದ್ದರೂ ಇಷ್ಟಾದರೂ ಮಾಡಿದ್ದೇವೆ. ನಾವು ನಾಲ್ಕು ತಿಂಗಳಲ್ಲಿ ಏನು ಮಾಡಬಹುದಾಗಿತ್ತು ? Within a short period after coming to power in Karnataka. ನಾವು ವ್ಯವಸಾಯಗಾರರಿಗೆ .... 70 ಪರ್‌ಸೆಂಟ್ ನಷ್ಟು ರೂರಲ್ ಡೆವಲಪ್‌ಮೆಂಟ್‌ಗೆ ಇನ್‌ಕ್ರೀಸ್ ಮಾಡುತ್ತೇನೆ. ಎಂದು ಹೇಳಿದ್ದೆ. ಈ ಬಜೆಟ್‌ನಲ್ಲಿ ಅದಕ್ಕೆ ಅವಕಾಶ ಮಾಡಿದ್ದಾಯಿತು. Non-nitrogenous fertilisers, ಬಗ್ಗೆ ನಮ್ಮ ಕೈಯಲ್ಲಿ ಇನ್ನೋನು ಮಾಡುವುದಕ್ಕಾಗುತ್ತದೆ ? ಫಂಢ್‌ಸಬ್ಸಿಡಿ, ನಾವು ಹೇಳಿದೆವು. 3-20 ರೂಪಾಯಿಗೆ ಕೇಜಿ ಅಕ್ಕಿಯನ್ನು ಕೊಡುತ್ತೇವೆ ಎಂದು ಅದನ್ನು ನಾವು ಏಪ್ರಿಲ್ ಒಂದರಿಂದ ಇಂಪ್ಲಿಮೆಂಟ್ ಮಾಡಿದ್ದೇವೆ. ಎಲ್ಲೋ ಒಂದು ಕಡೆಯಿಂದ ಆ ಅಕ್ಕಿ ತೆಗೆದು ಕೊಂಡವರು ಅದನು ತಿಂದರೆ ಕಾಲರ ಬರುತ್ತದೆ ಎಂದು ಹೇಳಿದ ಬಗ್ಗೆ ರಿಪೋರ್ಟ್ ಬಂತು. ಅಕ್ಕಿ ಸಪ್ಲೈ ಮಾಡುತ್ತಿರುವವರು ಹತ್ತಿರ ಹೋಗಬೇಕು. ಅವರು ಸಾಧ್ಯವಾದಷ್ಟು ಮಟ್ಟಿಗೆ ಇಂಪ್ರೂವ್ಡ್ ವೈರೆಟಿ ಅಕ್ಕಿ ಕೊಡುತ್ತಾ ಇದ್ದಾರೆ. ಎಲ್ಲೋ ಒಂದೆರಡು ಕಡೆ ಕೀಳುದರ್ಜೆಯ ಅಕ್ಕಿ ಬಂದಿರುಬಹುದು. ನಾವು ಕೊಟ್ಟಿದ್ದನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ. ಯಾವುದೋ ಒಂದು ಕನ್‌ಸ್ಯಾನ್‌ಮೆಂಟ್‌ನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದುದನ್ನು ದೊಡ್ಡದು ಮಾಡಬೇಕಾಗಿಲ್ಲ. On this one item we will lose Rs. 137 crores. ಈ ಸದನದಲ್ಲಿ ಎಲ್ಲಾ ಕಡೆಯಿಂದಲೂ ಒತ್ತಡ ಇರುವುದು ನನಗೆ ಗೊತ್ತು. ಲೋನ್ ಕಾಂಪೋನೆಂಟ್, ಮಾಡಿ ಎಂದು ಹೇಳಿದ್ದೀರಿ. ಮಾನ್ಯ ಖರ್ಗೆಯವರು ಮಾರ್ಚ್ 31ರ ವರೆಗೆ ಎಷ್ಟಾಗಿದೆ ಎಂದು ಕೇಳಿದರು ? ಈಗ ಸುಮಾರು 20 ಕೋಟಿಗಳ ವರೆಗೆ ನಮ್ಮ ಕನ್‌ಸೆಶನ್ ಸಿಗಬಹುದು. ಲ್ಯಾಂಡ್ ಬ್ಯಾಂಕ್‌ನಿಂದ 10ಕೋಟಿ ಮತ್ತು ಕೋ-ಅಪರೇಟಿವ್ ಬ್ಯಾಂಕ್‌ನಿಂದ 10ಕೋಟಿ. ಈಗ ಮತ್ತೆ ಎರಡು ತಿಂಗಳು ವಿಸ್ತರಿಸಿದ್ದೇವೆ. ಆಗ ನಾವು ಮಾರ್ಚ್ 31 ಕಳೆಯಲಿ ಎಂದು ಹೇಳಿಲ್ಲ, ಏಕೆಂದರೆ ಕೊಡುವವರು ಕೊಡಲಿ ಎಂಬ ಉದ್ದೇಶದಿಂದ. ಅನಂತರ 3 ಅಥವಾ 4ನೇ ದಿನಾಂಕದಂದು ಅದನ್ನು ಈ ಸದನದಲ್ಲಿ ಹೇಳಿದೆ. ಅದಕ್ಕಾಗಿಯೇ 100 ಕೋಟಿಗಳನ್ನು ಬಜೆಟ್ ಪ್ರಾವಿಶನ್ ಮಾಡಿದ್ದೇವೆ. ಏಕೆಂದರೆ ಆ 100 ಕೋಟಿಗಳನ್ನು ರಿ-ಅಂಬರ್ಸ್ ಮಾಡದಿದ್ದರೆ ನಾಬಾರ್ಡ್‌ನವರು ಸಾಲವನ್ನು ಕೊಡುವುದಿಲ್ಲ. ಮಾನ್ಯ ಮೊಯಿಲಿಯವರು ನಾವು ರೈತರ ವಿರೋಧಿಗಳು ಎಂಬ ತರಹದಲ್ಲಿ ಹೇಳಿದ್ದಾರೆ. ಆದರಿಂದ ನನಗೇನೂ ಚಿಂತೆ ಇಲ್ಲ. ನಾವು ಟ್ಯಾಕ್ಸನ್ನು ಸಿಕ್ಕಾಪಟ್ಟೆ ಹಾಕಿದ್ದೇವೆ ಎಂದು ಹೇಳಿದ್ದಾರೆ. ವ್ಯವಸಾಯಗಾರರಿಗೆ ಎಲ್ಲಾ ಫಾಸ್ಪೆಟಿಕ್ ಪರ್ಟಿಲೈಸರ್ಸ್ ಮೇಲೆ 2 ಪರ್‌ಸಂಟ್ ಟ್ಯಾಕ್ಸನ್ನು ತೆಗೆದು ಹಾಕಿದ್ದೇವೆ. ಅಂದರೆ ಇದರಿಂದ ಸರಕಾರಕ್ಕೆ 12 ಕೋಟಿ ರೂಪಾಯಿಗಳ ನಷ್ಟ ಆಯಿತು. ಹಿಂಗಾರಿ ಬೆಳೆಗೆ ವರ್ನ್‌ಓವರ್ ಟ್ಯಾಕ್ಸನ್ನು ತೆಗೆದಿದ್ದೇವೆ. ಅದಕ್ಕೆ ಕಾರಣ

ಏನೆಂದರೆ, ಕೇಂದ್ರ ಸರಕಾರದವರು ನಮಗೆ ಒಂದು ಸುತ್ತೋಲೆಯನ್ನು ಕಳುಹಿಸಿದ್ದರು. ನೀವು ಏನಾದರೂ ಒಂದು ರೇಟ್‌ನ್ನು ಫಿಕ್ಸ್ ಮಾಡಿ ಅವರ ಮೇಲೆ ಎನ್‌ಫೋರ್ಸ್ ಮಾಡುವುದಾದರೆ ಮಾಡಿ ಎಂದು ಹೇಳಿದರು. ನಾನು ಫರ್ಟಿಲೈಸರ್ಸ್‌ನ್ನು ಉತ್ಪಾದನೆ ಮಾಡುವ ಕೈಗಾರಿಕೋದ್ಯಮಿಗಳ ಸಭೆಯನ್ನು ಕರೆದೆ. ನಾನು ಈ ರೇಟ್‌ನ್ನು ಫಿಕ್ಸ್ ಮಾಡುತ್ತೇನೆ, ನೀವು ದಯಮಾಡಿ ಒಪ್ಪಿಕೊಳ್ಳುವುದಿಲ್ಲ, ನಿಮ್ಮ ಸಬ್ಸಿಡಿ ನಮಗೆ ಬೇಡ ಎಂದರು. ಒಂದೆರಡು ಸಾವಿರ ರೂಪಾಯಿ ಇಟ್ಟಿದ್ದರು. ಥಯಾಮೋನಿಯಂ ಸಲ್ಫೇಟ್‌ಗೆ ಸಾವಿರ ರೂಪಾಯಿ ಇಟ್ಟಿದ್ದಾರೆ, ಅದು 9200 ರಲ್ಲಿ. ನಾವು 13ಕ್ಕೆ 15 ಸಾವಿರಕ್ಕೆ ಮಾಡಿಕೊಳ್ಳುತ್ತೇವೆ, ನಿಮ್ಮ ಸಬ್ಸಿಡಿ ನಮಗೆ ಬೇಡ ಎಂದರು. ಇವೊತ್ತು ಡಿಮಾಂಡ್ ಮತ್ತು ಸಪ್ಲೈ ಪರಿಸ್ಥಿತಿಯು ಹೇಗಿದೆ? ಜನರಿಗೆ ದರ್ದ್ ಇದೆ ತೆಗೆದುಕೊಂಡು ಹೋಗುತ್ತಿದ್ದಾರೆ. ಅದನ್ನು ಬಡವರು ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂಬುದು ಬೇರೆ ವಿಚಾರ. ಆಗ ಇವರ ಸಹವಾಸ ಬೇಡಪ್ಪ, ನಾವೇಕೆ ಹೆಚ್ಚು ಮಾಡುವುದು, ನಮ್ಮ ತಲೆಗೆ ಏಕೆ ಇದು ಎಂದು ಹೇಳಿ ಟರ್ನ್ ಓವರ್ ಟ್ಯಾಕ್ಸ್‌ನ್ನು ಕಡಿಮೆ ಮಾಡಿಬಿಡಿ ಎಂದು ಹೇಳಿ, ಮಾರ್ಚ್ 31ರ ವರೆಗೆ ಹಿಂದಿನ ವರ್ಷದ ಹಿಂಗಾರಿ ಬೆಳೆಗೆ ಕೊಡತಕ್ಕಂಥ ಗೊಬ್ಬರ ಏನಿದೆಯೋ ಅದಕ್ಕೆ ಟರ್ನ್‌ಓವರ್‌ಟ್ಯಾಕ್ಸ್ ತೆಗೆದರು. ನಮ್ಮ ಈ ರಾಜ್ಯದ ರೈತರು ಬೇರೆ ಯಾವುದೇ ರಾಜ್ಯದ ರೈತರಿಗೆ ಕಡಿಮೆ ಇಲ್ಲ. ಹರಿಯಾಣ, ಪಂಜಾಬ್, ಗುಜರಾತ್, ಮಹಾರಾಷ್ಟ್ರದಲ್ಲಿನ ರೈತರ ಕುರಿತಾದ ಕೆಲವು ಅಂಕಿ-ಅಂಶಗಳನ್ನು ಸಂಗ್ರಹಿಸಲು ನಾನು ಪ್ರಯತ್ನ ಮಾಡಿದ್ದೆ. 15 ಸಾವಿರ ಟನ್ ಗ್ರೇಪ್‌ನ್ನು ಇವೊತ್ತು ಮಹಾರಾಷ್ಟ್ರದಲ್ಲಿ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ಅದಕ್ಕಿಂತ ಅತ್ಯಂತ ಉತ್ತಮವಾದಂಥ ಗ್ರೇಪ್ಸ್‌ನ್ನು ನಮ್ಮಲ್ಲಿ ಬಿಜಾಪುರ, ಬೆಳಗಾಂನಲ್ಲಿ ಬೆಳೆಯುತ್ತಾ ಇದ್ದಾರೆ. ನಾನು ಒಂದೇ ಒಂದು ಶಬ್ಧವನ್ನು ಹೇಳಿದೆ, ಈ ವರ್ಷ ಬೆಂಗಳೂರು ಏರ್‌ಪೋರ್ಟ್ ಬಳಿ, ಬಜೆಟ್‌ನಲ್ಲಿ ನಾವು ಮೂರು ಕೋಲ್ಡ್ ಸ್ಟೋರೇಜ್‌ಗಳನ್ನು ಹಾಕಿದ್ದೇವೆ. 2 ಸಾವಿರ ಟನ್ ಕೆಪಾಸಿಟಿಯ ಮೂರು ಕೋಲ್ಡ್ ಸ್ಟೋರೇಜ್‌ಗಳನ್ನು ಈ ಸಾರಿ ಮಾಡಬೇಕೆಂದಿದ್ದೇವೆ. ನಾನು ಮಾನ್ಯ ಕೃಷಿ ಸಚಿವರಿಗೆ ಒಂದು ವಿಚಾರವನ್ನು ಹೇಳಿದ್ದೇನೆ. ಬೆಂಗಳೂರು ಏರ್‌ಪೋರ್ಟ್‌ನ ಹತ್ತಿರ ಕೋಲ್ಡ್‌ಸ್ಟೋರೇಜ್‌ನಲ್ಲಿ ವೇರ್‌ಹೌಸಿಂಗ್ ಇರಬೇಕು ಮತ್ತು ಕೋಲ್ಡ್ ಸ್ಟೋರೇಜ್‌ನ ಸೌಲಭ್ಯವೂ ಇರಬೇಕು. ಅದು ಕೋಲಾರ, ಬೆಂಗಳೂರು, ಚಿತ್ರದುರ್ಗ ಎಲ್ಲೇ ಇರಬಹುದು, ಅಲ್ಲಿ ರೈತರು ತಂದಿರತಕ್ಕಂಥಾದ್ದನ್ನು ನಾವು ಪ್ಯಾಕ್ ಮಾಡಿ ಎಕ್ಸ್‌ಪೋರ್ಟ್ ಮಾಡುವುದರ ಬಗ್ಗೆ ವ್ಯವಸ್ಥೆಯನ್ನು ಇದೇ ವರ್ಷದಲ್ಲಿ ಮಾಡಿ ಮುಗಿಸಬೇಕೆಂದು ಹೇಳಿದ್ದೇನೆ.

ಅದಕ್ಕೆ ಹಣ ಹೇಗೆ ಒದಗಿಸಬೇಕೆಂಬ ಬಗ್ಗೆ ಕೂಡ ನಾನು ಇವತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಈ ವರ್ಷ ಆ ಕೆಲಸ

ಮಾಡಲೇಬೇಕೆಂಬ ಇಚ್ಚೆ ಇದೆ. ಇದರ ಉದ್ದೇಶ ಇಷ್ಟೇ ನಮ್ಮ ರಾಜ್ಯದ ರೈತ ಬೆಳೆದಂತಹ, ಅದು ಫ್ಲೋರಿಕಲ್ಚರ್ ಇರಬಹುದು, ಹಾರ್ಟಿಕಲ್ಚರ್ ಇರಬಹುದು, ಫ್ರೂಟ್ಸಿರಬಹುದು ಮತ್ತೊಂದಿರಬಹುದು. ಅಧ್ಯಕ್ಷರೇ, ಇವತ್ತು ಹಿಂದೂಸ್ಥಾನ ಉತ್ತರದ ಯಾವುದೋ ನಾಲ್ಕೇ ನಾಲ್ಕು ರಾಜ್ಯಗಳಿಗೆ ಸೀಮಿತವಾಗಿಲ್ಲ, market mechanism ಸ್ವಾಮಿ ಈ ದೇಶದಲ್ಲಿ ಯಾರೂ ಅದನ್ನು ಜಾರಿಗೆ ತರಲಾಗಲಿಲ್ಲ, ನಾವು ಜನತಾದಳದವರು 7 ವರ್ಷ ಇದ್ದೆವು, ನಾವೇ ಮಾಡುವುದಕ್ಕಾಗಲಿಲ್ಲ. ಅಲ್ಲೇ ವೆಸ್ಟರ್ನ್ ಯುಪಿ, ಹರ್ಯಾಣ, ಪಂಜಾಬ್, ಅಲ್ಲೇ, ಬೆಳೆ ಬಿದ್ದು ಹೋದರೆ ಇಮ್ಮಿಡಿಯೇಟಾಗಿ ಹೋಗ್ತಾರೆ ಅವರು ಕುತ್ತಿಗೆಪಟ್ಟಿ ಹಿಡಿದುಕೊಳ್ಳುತ್ತಾರೆ. ಯಾರೂ ಡೌನ್‌ಸೌತ್‌ಗೆ ಬರಲು ಸಾಧ್ಯವೇ ಇಲ್ಲ. ಈ ಸಾರಿಯಾದರೂ ನಮ್ಮ ರಾಜ್ಯದಲ್ಲಿ ನಮ್ಮ ರೈತರು ಬೆಳೆದಂತಹ ಪದಾರ್ಥಗಳನ್ನು ಬೇರೆ ಬೇರೆ ವಿದೇಶಿ ಮಾರುಕಟ್ಟೆಗಳಿಗೆ ಎಕ್ಸ್‌ಪೋರ್ಟ್ ಮಾಡಲಿಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಈ ಸರ್ಕಾರ ಒಂದು ನಿರ್ಣಯ ತೆಗೆದುಕೊಂಡು ಮೂರು ಕೋಲ್ಡ್‌ಸ್ಟೋರೇಜ್ ಅಷ್ಟೇ ಅಲ್ಲ ಬೆಂಗಳೂರು ಹತ್ತಿರ ದೆಹಲಿಯಲ್ಲಿ ಹೇಗೆ ದೊಡ್ಡ ಪ್ರಮಾಣದ ವೇರ್‌ಹೌಸನ್ನು ಮಾಡಿದ್ದಾರೋ ಅದೇ ರೀತಿ ನಾವೂ ಮಾಡಬೇಕೆಂದು ಈ ನಿರ್ಣಯ ತೆಗೆದುಕೊಂಡಿದ್ದೇವೆ. ಇಲ್ಲಿಂದ ಮುಂದಕ್ಕೆ ರೈತ ಯಾವುದೇ ಸಾಲ ತೆಗೆದುಕೊಳ್ಳಲಿ, ಅದು ಭೂ ಅಭಿವೃದ್ಧಿ ಬ್ಯಾಂಕಿನದಿರಲಿ, ಸರ್ವಿಸ್ ಕೋ-ಅಪರೇಟಿವ್ ಸಂಸ್ಥೆಯದಿರಲಿ, ಅದರಲ್ಲಿ 9 ಪರ್ಸೆಂಟ್ ಲೋನ್ ಮಾತ್ರ ಅವನು ಕಟ್ಟಬೇಕು ಬಾಕಿಯದನ್ನು ನಾವು ಅವನ ಹೆಸರಿಗೆ ಜಮಾ ಮಾಡುತ್ತೇವೆ ಎನ್ನುವ ನೀತಿಯನ್ನು ನಿರೂಪಣೆ ಮಾಡಿದ್ದೇವೆ. ಇದು ಒಂದು ಸಣ್ಣ ಕಾಣಿಕೆ ಆ ವರ್ಗಕ್ಕೆ ಅಷ್ಟೆ. ಹೆಚ್ಚು ನಾನು ಮಾಡಲಿಕ್ಕೆ ಹೋಗಿದ್ದೇನೆಂದು ಹೇಳುವುದಿಲ್ಲ. ಅಧ್ಯಕ್ಷರೇ, ಗಂಗಾಕಲ್ಯಾಣ ಸ್ಕೀಂ. 100 ಪರ್ಸೆಂಟ್ ಅದನ್ನು ನಾವೇ ಮಾಡುತ್ತೇವೆ, ಪರಿಶಿಷ್ಟ ಸಮಾಜ ಮತ್ತು ಹಿಂದುಳಿದ ವರ್ಗದವರಿಗೆ, ರಿಕರಿಂಗ್ ಮತ್ತು ನಾನ್‌ರಿಕರಿಂಗ್ ಖರ್ಚುಗಳನ್ನು ನಾವೇ ಮೀಟ್ ಮಾಡಬೇಕೆಂದು ನಿರ್ಣಯ ತೆಗೆದುಕೊಂಡೇ ಅವತ್ತು ನಾನು ನೀರಾವರಿ ಮಂತ್ರಿಯಾಗಿದ್ದಾಗ ಮಾನ್ಯ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ ಏಕೋ ಆ ಸ್ಕೀಂ ಇವತ್ತು ಮೂಲೆಗುಂಪಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಾನು ಕೇಳಿದೆ, ಸಮಾಜಕಲ್ಯಾಣ ಇಲಾಖೆಗೆ ಕೊಟ್ಟಿದ್ದಾರಂತೆ. 75 ಪರ್ಸೆಂಟ್ ಸಮಾಜಕಲ್ಯಾಣ ಇಲಾಖೆ ಕೊಡುವುದಂತೆ 25 ಪರ್ಸೆಂಟ್ ಫಲಾನುಭವಿಗಳೇ ಹಾಕಿಕೊಳ್ಳಬೇಕಂತೆ. ಮೊನ್ನೆ ಮೀಟಿಂಗ್‌ನಲ್ಲಿ ನಾನು ರಿವ್ಯೂ ಮಾಡಿದೆ. ಸ್ವಾಮಿ, ಈ ಸರ್ಕಾರ ನಿರ್ಣಯ ಮಾಡಿದೆ ಇವತ್ತು 10 ಕೋಟಿ ಈ ವರ್ಗದ ಜನತೆಗೆ ಇಟ್ಟಿದ್ದೇವೆ, ಸಂಪೂರ್ಣ ರಿಕರಿಂಗ್ ಮತ್ತು ನಾನ್-ರಿಕರಿಂಗ್ ವೆಚ್ಚವನ್ನು ನಾವೇ ಮೆನ್ಟೇನ್ ಮಾಡಿ ಆ ಪರಿಶಿಷ್ಟ ವರ್ಗದವರಿಗೆ ಈ ಸ್ಕೀಮನ್ನು ಮತ್ತೆ ರಾಜ್ಯದಲ್ಲಿ ಜಾರಿಗೆ ತರುತ್ತೇವೆ. ಅಧ್ಯಕ್ಷರೇ, 20 ರೆಸಿಡೆನ್‌ಶಿಯಲ್ ಶಾಲೆಗಳನ್ನು ಬಡವರ

ಮಕ್ಕಳಿಗೆಂದು ತೆಗೆಯಬೇಕೆಂದು ತೀರ್ಮಾನ ಮಾಡಿದ್ದೇವೆ. ಶ್ರೀಮಂತರ ಮಕ್ಕಳಿಗೇನು ಮಾಡುವುದು ತೀರ್ಮಾನ ಮಾಡೋಣ. ನನ್ನ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರ ನವೋದಯ ಶಾಲೆ ಎಂದು ಮಾಡಿದ್ದಾರೆ, ಆ ಜಮೀನು ಕೊಟ್ಟ ಜನರೆಲ್ಲ ಬಡಿದುಕೊಳ್ಳುತ್ತಿದ್ದಾರೆ ನಾನು ಮಂತ್ರಿಯಾಗಿದ್ದೆ, ಏನೋ ಒಂದು ದೊಡ್ಡ ಸ್ಕೀಂ ಬಂದುಬಿಡುತ್ತದೆ ಎಂದು ಒಂದಷ್ಟು ಬಡವರ ಜಮೀನು ಕೊಡಿಸಿಬಿಟ್ಟೆ. ಅಲ್ಲಿ ಒಬ್ಬ ನಮ್ಮ ತಾಲ್ಲೂಕಿನ ಹುಡುಗ ಸೇರಿಕೊಳ್ಳುವುದಕ್ಕೆ ಗತಿಯಿಲ್ಲ. ಏಕೆಂದರೆ ಎಲ್ಲಾ ಹೈಲಿ ಮೆರಿಟೆಡ್ ವಿದ್ಯಾರ್ಥಿಗಳೇ ಬರಬೇಕು. ಅದಕ್ಕೊಂದು ಸೆಲೆಕ್ಷನ್ ಕಮಿಟಿ ಅಂತೆ, ದೊಡ್ಡ ಸ್ಟಾಂಡರ್ಡ್ ಫಿಕ್ಸ್ ಮಾಡಿದ್ದಾರೆ. ಇವತ್ತು ನಾವು ಮಾಡುವ ಈ 20 ರೆಸಿಡೆನ್‌ಶಿಯಲ್ ಸ್ಕೂಲ್ it is for the backward classes and sch.castes who are poorer among the poor ಅವರಿಗಾಗಿ ಆ ನಿರ್ಣಯ ತೆಗೆದುಕೊಂಡಿದ್ದೇನೆ. ಹೌದು ನನಗೆ ಹಣದ ಇತಿಮಿತಿ ಗೊತ್ತಿದೆ. ಯಾರಿಗೋಸ್ಕರ ಮಾಡಿದ್ದೇವೆ ಇದನ್ನು? ಬ್ಲೆಂಡ್ ಸ್ಕೂಲ್ಸ್ ಒಂದು ಕಡೆ ನನ್ನ ಕರೆದುಕೊಂಡು ಹೋದರು, ಒಂದು ಅರ್ಜಿ ಹಿಡಿದು ಬಂದು ನಮ್ಮ ಸ್ಕೂಲಿಗೆ ಗ್ರಾಂಟ್ಸ್ ಕೊಡಿ ಎಂದರು. ಈ ದೇಶದಲ್ಲಿ ಕಣ್ಣಿರುವವರಿಗೆ ಕಾಲಿರುವವರಿಗೆ ಗ್ರಾಂಡ್ಸ್ ಇನ್ ಏಡ್ಸ್ ಕೊಡುತ್ತೇವೆ ಅಂತ, ಅದು ರಿಲಿಜಿಯಸ್ ಸಂಸ್ಥೆಗಳು ನಡೆಸಲಿ, ಮಠಾಧಿಪತಿಗಳು ನಡೆಸಲಿ ಯಾರಾದರೂ ನಡೆಸಿಕೊಳ್ಳಲಿ what is the total grant in aid that we are going to give to all these institutions? ಆದರೆ ಬ್ಲೈಂಡ್ಸ್ ಸ್ಕೂಲ್ಸ್‌ಗೆ ಮಾತ್ರ ಅನುದಾನ ಇಲ್ಲ, ಅಲ್ಲ, ಈ ರಾಜ್ಯದಲ್ಲಿ ಯಾರೇ ಇವತ್ತು ಕುರುಡರ ಶಾಲೆ ನಡೆಸಲಿ ಅವರಿಗೆಲ್ಲರಿಗೂ ಈ ಸಾರಿ ಸರ್ಕಾರ ಪ್ರೈಮರಿ ಹೈಸ್ಕೂಲ್, ಹೈಸ್ಕೂಲ್ ನಡೆಸುವವರಿಗೆ ಅನುದಾನವೆಂದು ಕೊಡುತ್ತೇವೆಯೋ ಅದೇ ಅನುದಾನ ಕೊಡಬೇಕೆಂದು ಇವತ್ತು ಈ ಬಜೆಟ್‌ನಲ್ಲಿ ಹಾಕಿದ್ದೇವೆ. ಇದು ಒಂದು ಆ ನತದೃಷ್ಟರಿಗೆ ಕಿರುಕಾಣಿಕೆ. ಓಲ್ಡ್ ಏಜ್ ಹೋಮ್ಸ್ 20 ಪ್ರತಿ ಜಿಲ್ಲೆಗೂ ಒಂದರಂತೆ ಮಾಡೋಣ. ಒಂದೊಂದು ತಾಲ್ಲೂಕಿನಲ್ಲೂ ಒಂದು ಮಾಡಬೇಕೆಂದು ನನ್ನ ಆಸೆ ಇತ್ತು. ಆದರೆ ದುಡ್ಡು ಬೇಕಲ್ಲ, ನನ್ನನ್ನು ಬಿಎಂಎಸ್ ಮೂರ್ತಿ ಕರೆದುಕೊಂಡು ಹೋದರು ನೋಡಿದೆ, ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಾವು 50 ಮಾಡಿದುದ್ದನ್ನು ನೀವು 75 ರೂಪಾಯಿ ಮಾಡಿದಿರಿ. ನೀವು ಮಾಡಿದ್ದು ಒಳ್ಳೆಯದೆಂದು ಹೇಳಬೇಕಾಗಿದೆ. ಇವತ್ತು 75 ರೂಪಾಯಿನಲ್ಲಿ ಏನು ಜೀವನ ಮಾಡುತ್ತಾರೆ ಕಷ್ಟ ಇದೆ. ಆದ್ದರಿಂದ ಯಾರು ಇವತ್ತು ಅನನ್ಯ ಕಾಲಕ್ಷೇಪ ಮಾಡುತ್ತಾರೋ ಅಥವಾ ಮಕ್ಕಳು ಅವರನ್ನು ನೋಡಿಕೊಳ್ಳಲು ಸಾಧ್ಯವಿಲ್ಲವೋ, ಯಾರು ಜೀವನದಲ್ಲಿ ಇನ್ಯಾವುದೇ ವರಮಾನದ ಮೂಲ ಇರುವುದಿಲ್ಲವೋ, ಅನೇಕ ಹಳ್ಳಿಗಳಿಗೆ ಹೋದರೆ ಚಾವಡಿ ಮೇಲೆ ಬಿದ್ದಿರುತ್ತಾರೆ. ಗೋಣಿಚೀಲ ಹಾಕಿಕೊಂಡು. ಗೌಡರು ನೋಡಿರಬಹುದು. ಇಂಥ

ಜನರಿಗಾಗಿ ಕನಿಷ್ಟ ಪ್ರತಿ ಜಿಲ್ಲೆಯಲ್ಲಿ ಒಂದೊಂದು ವೃದ್ಧಾಶ್ರಮ ತೆರೆದು ಅವರಿಗೆ ಊಟ, ತಿಂಡಿ, ಬಟ್ಟೆ ಎಲ್ಲಾ ವ್ಯವಸ್ಥೆ ಮಾಡಬೇಕೆಂಬ ಗುರಿ ಇಟ್ಟುಕೊಂಡೇ ಮಾಡಿದ್ದುದು. ಇದು ಶ್ರೀಮಂತರ ಪರ ಬಜೆಟ್ ಎಂದು ಹೇಳುವುದಾದರೆ I leave it to the judgement of the people. ರಾಜ್ಯದ ಜನತೆ ನೀವು ಹೇಳಿದ್ದುದನ್ನು ಗಮನದಲ್ಲಿಟ್ಟುಕೊಳ್ಳುತ್ತಾರೋ, ತೀರ್ಮಾನ ಮಾಡುವುದು ಅವರು. ನಾವು ಬೆಂಗಳೂರಿನಲ್ಲಿ 75 ಪೈಸೆ ಟ್ಯಾಕ್ಸ್ ಹಾಕಿಬಿಟ್ಟೆವಿ. For Mass Rapid Transport Systemಗೆ 4000 ಕೋಟಿಯಾಗುತ್ತದೆ ಎಲ್ಲಿಂದ ತರುವುದು ಎಂದರು. ಬೆಂಗಳೂರಿನಲ್ಲಿರುವ ಬಡವರ ಬಗ್ಗೆ ಅನುಕಂಪವಿಲ್ಲ ಅಥವಾ ಇಲ್ಲಿ ಓಡಾಡುವ ಜನರಿಗೆ ತೊಂದರೆ ಕೊಡಬೇಕೆಂಬ ದೃಷ್ಟಿಯಿಂದ ನಾವು ಮಾಡಲಿಲ್ಲ. ಯಾರೋ ಕಾರ್ ಇಟ್ಟುಕೊಂಡಿರಿರುವವರು, ಮೋಟಾರ್‌ಸೈಕಲ್ ಇಟ್ಟುಕೊಂಡಿರುವವರು ಇಷ್ಟು ದೊಡ್ಡ ಪ್ರಮಾಣದಲ್ಲಿ ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುತ್ತೋವೆಂದು ಹೇಳುತ್ತಾರೆ. ಹೌಸಿಂಗ್‌ಗೆ ಬಂದರೆ, ಬೆಂಗಳೂರಿನಲ್ಲಿ ಪ್ರೈವೇಟ್‌ನವರು ಇನ್‌ವೆಸ್ಟ್ ಮಾಡಲು ತಯಾರಿದ್ದಾರೆ. ಆದರೆ ಅವರು ಹಳ್ಳಿಗೆ ಹೋಗುವುದಿಲ್ಲ. ನೀವು ಹೋಗಿ ಅಂದರೂ ಹೋಗುವುದಿಲ್ಲ. ಏಕೆಂದರೆ ಅವರು ಹಾಕಿದ ಹಣ ವಾಪಸ್ ಬರುತ್ತದೆ, ಹಳ್ಳಿಯಲ್ಲಿ ಹೋಗಿ ಮನೆ ಕಟ್ಟಿದರೆ ಯಾರು ವಾಪಸ್ ಕೊಡುವವರು? ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಟೀಕೆ ಮಾಡಿದ್ದಾರೆ, ಅದು ಅವರ ಕರ್ತವ್ಯ, 93-94 ಬಜೆಟ್ ಅವರದೇ, ಪೆಟ್ರೋಲ್ ಶೇ. 20 ರಿಂದ 22ಕ್ಕೆ ಏರಿಸಿದ್ದಾರೆ. ಇದು Mass Rapid Transport Systemಗೆ ಏರಿಸಿದ್ದಲ್ಲ.

1.10 ಪಿ.ಎಂ

ಇಡೀ ರಾಜ್ಯದ ಎಲ್ಲಾ ಜನರಿಗೆ ನೀವು ಏರಿಸಿರುವುದು ನಾವು ಇಲ್ಲಿ ಬೆಂಗಳೂರಿನಲ್ಲಿ ಓಡಾಡುವ ಜನಕ್ಕೆ ಒಂದು ಅಂಡರ್‌ಗೌಂಡ್ ಬ್ರಿಜ್ ಏನೋ ಮಾಡಬೇಕೆಂದು ಯೋಚನೆ ಮಾಡಿದ್ದೆವು. ಆ 55 ಕೋಟಿ ರೂಪಾಯಿಗಳಿಂದ ಏನೂ ಆಗುವುದಿಲ್ಲ. ನಾವು ಹಾಕಿದ್ದುದು ನಿಜ. ನಾಳೆ ತೀಕ್ಷ್ಣವಾದ ಚರ್ಚೆ ಬರುತ್ತದೆ. ನಾಳೆ ಉತ್ತರ ಕೊಡಬೇಕು ಎಂದು ನನಗೆ ಗೊತ್ತು. ನಾವು ಯಾವುದೋ ಒಂದು ಉದ್ದೇಶದಿಂದ ಮಾಡಿದ್ದುದು. ಬೆಂಗಳೂರು ಇವತ್ತು ಅತ್ಯಂತ ವೇಗದಲ್ಲಿ ಬೆಳೆಯುತ್ತಿರುವ ನಗರ. ಇದಕ್ಕೆ ಏನಾದರೂ ಸ್ವಲ್ಪ ಮಟ್ಟಿಗೆ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕೆಂದು ಒಂದು ನಿರ್ಣಯ ಮಾಡಿದರೆ, ಅತೀ ಹೆಚ್ಚು ಆಯಿತು ಎಂದು ನೀವು ಹೇಳಿದಿರಿ. ನಾವು ಕಡಿಮೆ ಮಾಡಿದೆವು. 25ಕ್ಕೆ ಪೈಸೆಗೆ ಇಳಿಸಿರಬಹುದು ಎಂದು ಕಾಣುತ್ತದೆ. ಅವರು ಅವತ್ತು ಉತ್ತರ ಕೊಡುವಾಗ ಇಲ್ಲಿ ನನಗೆ ಇರಲಿಕ್ಕೆ ಆಗಲಿಲ್ಲ. ನಾವು ಬಟ್ಟೆ ಒಗೆಯುವ ಸೋಪಿನ ಮೇಲೆ ತೆರಿಗೆ ಹಾಕಿದ್ದೇವೆ ಎಂದು ತಾವು ಹೇಳಿದ್ದೀರಿ. ಬಟ್ಟೆ ಒಗೆಯುವ ಸೋಪುಗಳು,

ಡಿಟರ್ಜೆಂಟ್‌ಗಳು ಮತ್ತು ಲಾಂಡ್ರಿಗೆ ಬೇಕಾದಂತಹ ವಸ್ತುಗಳಿಗೆ 8 ರಿಂದ 10 ಪೈಸೆಗೆ ಏರಿಸಿದ್ದೇವೆ. ಶೇಕಡ 8 ರಿಂದ 10 ಪೈಸೆ. ನಾನು ಇದನ್ನೆಲ್ಲಾ ವಾದ ಮಾಡಲಿಕ್ಕೆ ಹೋಗುವುದಿಲ್ಲ, ವಾದ ಮಾಡಲಿಕ್ಕೆ ಹೋದರೆ ಬೇಕಾದಷ್ಟು ಇವೆ. ನಾನು ವಾದ ಮಾಡಿ ಸಮರ್ಥನೆ ಮಾಡಿಕೊಂಡು ನಾನೇನೋ ದೊಡ್ಡ ಹೀರೋ ಆಗಬೇಕಾದ ಅವಶ್ಯಕತೆ ಇಲ್ಲ. But what has been actually done. ಅದನ್ನು ಮಾತ್ರ ನಿಮ್ಮ ಗಮನಕ್ಕೆ ತರುತ್ತೇನೆ. ನಾನು ವ್ಯವಸಾಯ ರಂಗದಲ್ಲಿ ಮಾಡಬೇಕಾದದ್ದು ಬಹಳ ಇದೆ. ಅದರ ಬಗ್ಗೆ ನಮ್ಮ ಸರ್ಕಾರದ ಮುಂದಿನ ಉದ್ದೇಶ ಏನು ಎನ್ನುವಂತಹ ಎಲ್ಲಾ ವಿವರಣೆಗಳನ್ನು ನಾನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಹೋದರೆ ಅದಕ್ಕೆ ಸಮಯ ಬಹಳ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಾನು ಅವಕಾಶ ಸಿಕ್ಕಾಗ ಈ ವಿಷಯ ಪ್ರಸ್ತಾಪ ಮಾಡುತ್ತೇವೆ. ಈ ರಾಜ್ಯದಲ್ಲಿ ಜನತಾದಳದ ಸರ್ಕಾರ ಅಧಿಕಾರಕ್ಕೆ ಬಂತು. ಈ ಮನೆಯೊಳಗೆ ಮೂರು ಸಾರಿ ಒಂದುದಿನ ಪವರ್ ನಿಂತು ಹೋಯಿತು. ನಾವೆಲ್ಲ ಹೊರಗಡೆ ಹೋಗಿ ಆ ಅಧಿಕಾರಿಗಳ ಮೇಲೆ ಜಗಳಕ್ಕೆ ಬೀಳಬೇಕಾಗಿ ಬಂತು. ಇದೇನು ನಾವು ಮೂರು ತಿಂಗಳೊಳಗೆ ಎಷ್ಟರಮಟ್ಟಿಗೆ ಪವರ್ ಅನ್ನು ಜನರೇಟ್ ಮಾಡಬಹುದು? ಏಳು ವರ್ಷ ಇದ್ದಾಗ ಎಷ್ಟು ಮಾಡಿದ್ದೇವೆ ಎಂಬ ಬಗ್ಗೆ ನನಗೆ ಗೊತ್ತಿದೆ. ಅದರ ಬಗ್ಗೆ ನಾನೇನು ಹೀರೋ ಎಂದು ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ. 1991ರಿಂದ ನನ್ನ ಹತ್ತಿರ ವಿವರ ಇದೆ. ಹಳ್ಳಿ ಕಡೆ ಹೇಳುತ್ತಾರೆ ಪವರ್ ಒಂದು ಸರಿ ಮಾಡಿ ಬಿಟ್ಟರೆ ಸಾಕು. ಈ ಸರ್ಕಾರ ಒಳ್ಳೆಯದು ಎಂದು ಬಯ್ದು ಹೇಳುತ್ತಾರೆ, ನೀವು ಹೇಳದೇ ಇದ್ದರೂ ನಾನು ಹೇಳುತ್ತೇನೆ. ಬಯ್ದು ಹೇಳುತ್ತಾರೆ. ಇದೊಂದು ಸರಿ ಮಾಡಿದರೆ ಸಾಕಪ್ಪಾ ಎಂದು ನಾನು ಬಯ್ಸಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಮೂರು ತಿಂಗಳಲ್ಲಿ ನಾನೇನು ಸರಿ ಮಾಡಲಿ, ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ, ನಾನು ಕುಳಿತುಕೊಳ್ಳುವುದಿಲ್ಲ. ಅದು ಎಷ್ಟೇ ಕಷ್ಟ ಆದರೂ ಪ್ರಯತ್ನ ಮಾಡುತ್ತೇನೆ. ಹಿಂದಿನ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. 22.10.94 ಡಿಜಿಎಸ್ ತುಮಕೂರ್-ಸುಭಾಷ್ ಪ್ರಾಜೆಕ್ಟ್. ಡಿಜಿಎಸ್ ಪೀಣ್ಯ-22.10.94 ತೂಬಿನಕೆರೆ, ಮಂಡ್ಯ-1.09.94 ಕೊಪ್ಪಳ-1.9.94, ಬಿಜಾಪುರ, ಕೇಇಬಿ ಎನರ್ಜಿ-1.9.94 ಕೋಲಾರ, ಇಂಡಿ ಬೀದರ್ ಜಮಖಂಡಿ-1.9.94 ಇದು ಎನ್‌ಓಯು ಸೈನ್ ಮಾಡಿರುವುದು ಡೀಸೆಲ್ ಸ್ಟೇಷನ್ ಮಾಡುವುದಕ್ಕೆ. ಆಮೇಲೆ ಹೂಡಿ 1.9.94 ಆಮೇಲೆ ಹೈಡ್ರೋ ಪ್ರಾಜೆಕ್ಟ್ ರಾಜನ್ ಕೊಲ್ಲೂರ್ 6.9.94, ಕುಮಾರಧಾರಾ - 6.9.94, ವರಾಹಿ - 22.10.94, ತುಂಗಾ ಅಣೆಕಟ್ಟು ಇದೆಲ್ಲಾ ಹೈಡ್ರೋ ಪ್ರಾಜೆಕ್ಟ್ 6.9.94 ಅಲ್ಲಿಂದ ವರಾಹಿ ಟೈಲ್ ರೇಸ್-6.9.94. ಹೇಮಾವತಿ ಎಲ್‌ಬಿಸಿ 6.9.94. ಕೀರ್ತಿ ಹೊಳೆ-6.9.94, ಕಬಿನಿ ಡಿಜಿಎಚ್-6.9.94. ಹೇಮಾವತಿ ಆರ್‌ಬಿಸಿ 6.9.94. ಡೇಟ್ಸ್ ಮಾತ್ರ ಹೇಳಿದನೇ ಹೊರತು ಬಾಕಿ

ಏನೂ ಹೇಳುವುದಿಲ್ಲ. ಅವರು ನನ್ನ ಸರ್ಕಾರಕ್ಕೆ ಹೇಳಿದ್ದಾರೆ ನಾವು ಲಾಬಿಗೆ ಮಣಿದಿದ್ದೇವೆ ಎಂದು. The allege that this Government is controlled by lobbies, one is liquor lobby and the other is Capitation Lobby. ಆಮೇಲೆ ಮುಂದೆ ಚರ್ಚೆ ಮಾಡೋಣ. ನಾನು ಡೇಟ್ಸ್ ಕೊಡುತ್ತಿದ್ದೇನೆ. 6.9.94, 6.9.94, 6.3.94. ಕಬಿನಿ 6.9.94, ಹೇಮಾವತಿ 6.9.94. ನಾರಾಯಣಪುರ 22.10.94, 6.9.94 ಅಳಂಡ್‌ನದಕ, ಹೊಳಲು - 6.9.94, ಐಸಾಹಿ 6.9.94, ಆಮೇಲೆ ಕಪ್ಪದ ಗುಡ್ಡ 6.9.94. ಜೋಗೀ ಮಟ್ಟಿ 6.9.94, ಕಪ್ಪದ ಗುಡ್ಡ ಹಿಲ್ಸ್ 6.9.94, ಇನ್ನೊಂದು ಕಪ್ಪದ ಗುಡ್ಡ ಸುಭಾಷ್ ಪ್ರಾಜೆಕ್ಟ್-6.9.94. ಬರೇ 6.9.94 ಶುಭ ದಿನ. ಜೋಗಿ ಮಟ್ಟಿ 9.11.94. ಬಂಗಾರಪ್ಪನವರು ಕೊಟ್ಟು ಹೋಗಿದ್ದುದು. ನಾನು ಬರೀ 6.9.94ರ ಬಗ್ಗೆ ಹೇಳುತ್ತೀದ್ದೇನೆ. ಭದ್ರಾ ಎಲ್‌ಪಿಸಿ 6.9.94, ಲಕ್ಷ್ಮಣ ತೀರ್ಥ 6.9.94 ಅಪ್ಪರ್ ಕಣೇರಿಯೂ-6.9.94. ಆಮೇಲೆ ಬೊಮ್ಮನ ಹಳ್ಳಿ 6.9.94. ಬಾಬಾ ಬುದನ್‌ಗಿರಿ 6.9.94 ಇನ್ನೊಂದು ಕಪ್ಪದ ಗುಡ್ಡ ಸುಭದ್ರಾ ಟೆಕ್ಸ್‌ಟೈಲ್ - 6.9.94. ಕೊಪ್ಪದ ಗುಡ್ಡ ವೈಪ್ರೋ ಫಿನಾನ್ಸಿಯಲ್ 6.9.94. ಬಿಎಚ್‌ಪಿ ಇಂಜಿನಿಯರ್ ಅದೂ 6.9.94. ನಾನು ಏಕೆ ಇದನ್ನು ಎಂದರೆ ನಾನು ಯಾರ ಮೇಲೂ ಪೋಟಿವೇಟ್ ಆಟ್ರಿಬ್ಯೂಟ್ ಮಾಡಲಿಕ್ಕೆ ಹೇಳುತ್ತಾ ಇಲ್ಲ. It is said that this Government is controlled by Lobbies....

ಶ್ರೀ ಎಚ್.ಎನ್.ನಂಜೇಗೌಡ : ಈಗ ಅವರು ಕೊಟ್ಟಂತಹ ಮಾಹಿತಿ ಇನ್‌ಸಫಿಷಿಯೆಂಟ್ ಆಗುತ್ತದೆ.

ಶ್ರೀ ಎಚ್.ಡಿ.ದೇವೇಗೌಡ : ಅವರು ಒಪ್ಪುವುದಾದರೆ ನಾನು ಇಲ್ಲೇ ನಿಮಗೆ ಮಾಹಿತಿ ಕೊಡುತ್ತೇನೆ,

ಶ್ರೀ ಎಚ್.ಎನ್.ನಂಜೇಗೌಡ : ಪಾರ್ಟೀಸ್ ಯಾರು ? ಯಾವ ಸಂದರ್ಭದಲ್ಲಿ ಅಗ್ರಿಮೆಂಟ್ ಮಾಡಿದ್ದಾರೆ ಎನ್ನುವುದು ಬೇಕು.

ಶ್ರೀ ಎಚ್.ಡಿ.ದೇವೇಗೌಡ : ತಾವು ಏನೇ ಮಾಹಿತಿ ಕೇಳಿದರೂ ಕೊಡುತ್ತೇನೆ. With the permission of the Chair, I will provide the information.

ಶ್ರೀ ಎಚ್.ಎನ್.ನಂಜೇಗೌಡ : ಟೋಟಲ್ ಸಂಖ್ಯೆ, ಹೇಳಿ.

ಶ್ರೀ ಎಚ್. ಡಿ. ದೇವೇಗೌಡ : ಸಭೆಯಲ್ಲಿ ಅದನ್ನು ಓದುವಾಗ ಹೇಳಲು ಆಗುವುದಿಲ್ಲ ಎಂದಲ್ಲ. ಸುಮಾರು 61 ಪ್ರಾಜೆಕ್ಟ್ ಥರ್ಮಲ್, ಡೀಸೆಲ್, ಹೈಡ್ರೋ, ಮಿನಿ ಹೈಡೆಲ್ ಇವೆಲ್ಲಾ ಸೇರಿ 61 ಪ್ರಾಜೆಕ್ಟ್ ಥರ್ಮಲ್ , ಡೀಸೆಲ್, ಹೈಡ್ರೋ, ಮಿನಿ ಹೈಡಲ್ ಇವೆಲ್ಲಾ ಸೇರಿ 61 ಪ್ರಾಜೆಕ್ಟ್‌ಗೆ ಸೈನ್ ಮಾಡಿದ್ದಾರೆ. ಇದು ಬಂಗಾರಪ್ಪನವರ ಕಾಲದಿಂದ ಇದು ನಾನು ಹೇಳಿದ್ದುದು 6.9.94 ನಿಮಗೆ ಗಳಿಗೆ

ಕೂಡಿ ಬರಲಿಲ್ಲ. ನಾನು ಇದರ ಬಗ್ಗೆ ಒಂದು ಬುಕ್‌ಲೆಟ್ ಮಾಡಿಸಿ ಪ್ರತಿ ಒಬ್ಬ ಸದಸ್ಯರಿಗೂ ಹಂಚುತ್ತೇವೆ, ಆದರಲ್ಲಿ ಮುಚ್ಚುಮರೆ ಏನೂ ಇಲ್ಲ. ಯಾವುದು ವೋಲ್ಟೇಜ್, ಎಷ್ಟು ಮೆಗಾವ್ಯಾಟ್ಸ್ ಹಾಫ್‌ಮೆಗಾವ್ಯಾಟೋ, ಮೂರು ಮೆಗಾವ್ಯಾಟೋ, ಪ್ರತಿ ಒಂದು ವಿಷಯದ ಬಗ್ಗೆ ಒಂದು ಸಣ್ಣ ಕೈಪಿಡಿ ಮಾಡಿ with the permission of the Speaker ಅದನ್ನು ಕೊಡುತ್ತೇನೆ. ನಾವು ಯಾರಿಗೂ ಇನ್ನೂ ಸಹಿ ಮಾಡಿಲ್ಲ. ಕೊಜೆಂಟ್ರಿಕ್‌ಗೆ ಒಂದೇ ಸಹಿ ಮಾಡಿರುವುದು, ಅದೂ ನೀವೇ ಮಾಡಿರುವುದು. ಅದು ಇನ್ನೂ ಕ್ಲಿಯರೆನ್ಸ್ ಬರುವುದರಲ್ಲಿದೆ. ನಾನೂ ಪಟೇಲ್ ಅವರೂ ಶಂಖ ಹೊಡೆದುಕೊಳ್ಳುತ್ತಿದ್ದೇವೆ ಇನ್ನೂ ಕ್ಲಿಯರೆನ್ಸ್ ಬಂದಿಲ್ಲ ಬರಬೇಕು. ಲಿಕ್ಕರ್ ಲಾಬಿ ಇದೆಯಲ್ಲಾ ಅದಕ್ಕೆ ಸಂಬಂಧಸಿದಂತೆ ನಾನು ಇನ್ನೂ ಯಾವ ಆಫೀಸರ್ ಅವರನ್ನೂ ಛೇಂಜ್ ಮಾಡಲಿಲ್ಲ. ಅವರು ಯಾವ ಆಫೀಸರ್‌ನ್ನು ಇಟ್ಟಿದ್ದಾರೋ ನಾನೂ ಅವರನ್ನೇ ಇಟ್ಟಿದ್ದೇನೆ. ಒಬ್ಬರನ್ನೂ ಛೇಂಜ್ ಮಾಡಲಿಲ್ಲ. ಹಾನೆಸ್ಟಾಗಿ ನಾನು ಒಂದು ಮಾತು ಹೇಳುತ್ತೇನೆ. I have never asked any officers; let them tell it. ಒಂದು ದಿನ ನನ್ನ ಜೀವನದಲ್ಲಿ ಅವರನ್ನು ಕರೆದು ನೀವು ಹೀಗೆ ಮಾಡಿ ಎಂದು ನಾನು ಹೇಳಿಲ್ಲ. ಅದು ಏನೇ ಪ್ರೆಶರ್ ಬಂದರೂ ಸಹ. ಕ್ಯಾಪಿಟೇಷನ್ ಫೀ ಬಗ್ಗೆ ನನ್ನದೇ ಆದಂತಹ ಅಭಿಪ್ರಾಯ ಇದೆ. ಮಣಿಪಾಲ್‌ನವರಿಗೆ 100 ಪರ್ಸೆಂಟ್ ಏಕೆ ಕೊಡಬೇಕು? ಮೈನಾರಿಟಿ ಹೆಸರಿನಲ್ಲಿ ಇನ್ನೊಂದು ಕಮ್ಯುನಿಟಿಗೆ 75 ಪರ್ಸೆಂಟ್ ಫೀಸ್ ಏಕೆ ಕೊಡಬೇಕು? ಇನ್ನೊಂದು ಕಮ್ಯುನಿಟಿಗೆ 50 ಪರ್ಸೆಂಟ್ ಏಕೆ ಕೊಡಬೇಕು? ಅದೇ ಖರ್ಗೆ ಅವರು ನಡೆಸುವ ಕಾಲೇಜಿಗೆ ಒಂದು ಪರ್ಸೆಂಟೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಯಾವ ಕಾಲೇಜೂ ನಡೆಸುವುದಿಲ್ಲ. ನನ್ನ ಜಾತಿಯವರು ಒಂದು ನಡೆಸುತ್ತಾರೆ. I am not there as Chairman. ನಮ್ಮ ಜಾತಿಯವರೆಗೆ ಸಪೋರ್ಟ್ ನೀವೂ ಮಾಡಬೇಡಿ, ನಾನೂ ಮಾಡುವುದಿಲ್ಲ.

Sri. H.D. Devegowa : I am sorry. I apologise. ನಾನು ಹಾಗೆ ಹೇಳಲಿಲ್ಲ. ನಾನು ಜಾತಿ ಹೆಸರು ಹೇಳಿದೆ ಅಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕಾಲೇಜು ನಡೆಸುತ್ತಾರೆ ಎಂದು ಹೇಳಿದಿರಿ. ಈಗ ಅಂಬೇಡ್ಕರ್ ಕಾಲೇಜ್ ಇದೆ. ಅವರಿಗೆ ಒಂದು ಸೀಟು ಏನಾದರೂ ಚಾಯಸ್ ಇದೆಯೋ? ಏಕೆಂದರೆ ಮಣಿಪಾಲ್‌ದಲ್ಲಿದ್ದ ಶ್ರೀಮಂತರು ಇವರು. ಕಿತ್ತು ಹಾಕುವುದಕ್ಕೆ ನಮ್ಮ ಹತ್ತಿರ ಏನಿದೆ ನಮ್ಮ ಹತ್ತಿರ ಏನಿದೆ, ಅದು ಎಷ್ಟರ ಮಟ್ಟಿಗೆ ಉಳಿದಿದೆ ಎಂದು ಬಿಲ್ ತರುತ್ತೇನೆ. ಏಕೆಂದರೆ ಯಾರದೋ ಲಾಭಿಗೋಸ್ಕರ ಮಾಡುವುದು ಅಲ್ಲ, ನಿಮ್ಮ ಕಣ್ಣು ಮುಂದೆ ಇಷ್ಟು ಗ್ಲೇರಿಂಗ್ ಆಗಿ ಏನು ನಡೆಯುತ್ತಿದೆ ಎಂದು 100 ಪರ್ಸೆಂಟ್ ಹಿಡಿಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಏನು ಹೇಳುತ್ತೀರಿ ಅದನ್ನು ಫುಲ್ ಫ್ಯಾಕ್ಟ್ಸ್ ಕೊಡಬೇಕು. ಮೈನಾರಿಟಿ ಸ್ಟೇಟಸ್ ಎಂದು ನೀವು ಏನು ಕೊಟ್ಟಿದ್ದೀರೆಂದು ನಮಗೆ ಏನು ಹೇಳುತ್ತಿದ್ದೀ ಅದನ್ನು ಯಾರು ನಾವು ಕೊಟ್ಟಿದ್ದೇವೆಯೋ? ಹೈಕೋರ್ಟ್‌ನವರು ಕೊಟ್ಟಿದ್ದಾರೋ ಅದನ್ನು ಹೇಳಿ ಅದಕ್ಕೆ ನಾವು ಮಣಿಪಾಲ್ ನವರಿಗೆ 100 ಪರ್ಸೆಂಟ್ ಕೊಟ್ಟಿದ್ದಕ್ಕಾಗಿ ನನ್ನ ಯಾವುದೇ ಹೇಳಿಕೆಯನ್ನು ಪೂರ್ಣವಾಗಿ ಬ್ಲಾಕ್ ಔಟ್ ಮಾಡುತ್ತಿದ್ದಾರೆ, ಉದಯವಾಣಿ ಮಣಿಪಾಲ್‌ರವರು, ಅದರಿಂದ ಅವರಿಗೆ ಸಹಾಯ ಮಾಡಿದ್ದರಿಂದ ಇವತ್ತು ನನ್ನ ನ್ಯೂಸ್‌ನ್ನು ಬ್ಲಾಕ್ ಔಟ್ ಮಾಡುತ್ತಿದ್ದಾರೆ. ಓಪನ್ನಾಗಿ ಹೇಳುತ್ತಿದ್ದೇನೆ. ಆದರಿಂದ ನಾವು ಅವರಿಗೆ ಸಹಾಯ ಮಾಡಿದ್ದೇವೋ ಇಲ್ಲವೋ ಎಂದು ಹೇಳಿ ತಾವು ಸ್ವಲ್ಪ ವಿಚಾರಿಸಿ ತಾವು ಏನು ಬೇಕಾದರೂ ಮಾಡಿ. we are not going to defend.

ಶ್ರೀ ಹೆಚ್.ಡಿ.ದೇವೇಗೌಡ : ಮೊಯಿಲಿಯವರೇ, ನೀವು ಮಾಡಿರಲಿ ಎಂದು ನಾನು ಹೇಳಲಿಲ್ಲ. I am not going to say this. ನೀವೂ ಮಾಡಲಿಲ್ಲ, ಬಂಗಾರಪ್ಪನವರು ಮಾಡಲಿಲ್ಲ ಇಲ್ಲಿ ಯಡಿಯೂರಪ್ಪನವರೂ ಮಾಡಿದ್ದಾರೆಂದು ಹೇಳಲಿಲ್ಲ. ಯಾರೂ ಮಾಡಲಿಲ್ಲ. ಮಾಡಿದವರು ಬೇರೆಯವರಿದ್ದಾರೆ. Deemed ಯೂನಿವರ್ಸಿಟಿ ಕೊಡುವುದಕ್ಕೆ ನೀವು ರೆಕಮೆಂಡ್ ಮಾಡಲಿಲ್ಲ, ನೀವು ಏನೂ ರೆಕಮೆಂಡ್ ಮಾಡಲಿಲ್ಲ It is not recommended by the State Government. ಅವರಿಗೆ ಶಕ್ತಿ ಇದೆ ಮಾಡಿಕೊಳ್ಳುತ್ತಾರೆ. ಇಲ್ಲಿ ಅಂಬೇಡ್ಕರ್ ಕಾಲೇಜಿಗೆ ಯಾರು ಡೀಮ್ಡ್ ಯೂನಿವರ್ಸಿಟಿ ಕೊಡುವವರು. ಅದರಿಂದ ಆ ಬಿಲ್ಲನ್ನು ಇಟ್ಟಾಗ ಈ ಸಭೆಯ ಮುಂದೆ ಎಲ್ಲಾ ಮಂಡನೆ ಮಾಡುತ್ತೇನೆ. ಯಾವುದೋ ಕ್ಯಾಪಿಟೇಷನ್ ಲಾಬಿಗೋಸ್ಕರ ಅಲ್ಲ ಇದು. It is a social tension. Why? Why a particular Institution can sell all the 100% seats to foreigners and why not an institution belonging to Backward Classes/Scheduled Caste or Scheduled Tribe and even belonging to Vokkaliga or Lingayat? ತೀರ್ಮಾನ ಮಾಡಿದರೆ ಮಾಡಲಿ ನೋಡೋಣ ಏನೆಂದು.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಹೇಳಿದ್ದಕ್ಕೆ ನಮ್ಮದು ಸಂಪೂರ್ಣ ಸಹಕಾರ ಇದೆ. ನೀವು ಏನು ಬದಲಾವಣೆ ಮಾಡಬೇಕೆಂದಿದ್ದೀರೋ?

ಶ್ರೀ ಹೆಚ್.ಡಿ.ದೇವೇಗೌಡ : ಈ ಒಂದು ಭಾಷಣದಲ್ಲಿ ನಿಮಗೆ ಟೀಕೆ ಮಾಡುವ ಅಧಿಕಾರ ಇದೆ. ನಾನು ಸ್ವಾಗತ ಮಾಡುತ್ತೇನೆ.. ನಾನು ವಿಶೇಷ ಅಧಿವೇಶನ ಕರೆಯುತ್ತೇನೆ. ಬಿಲ್ ತರುತ್ತೇನೆ. ಬಿಲ್ಲನ್ನು ನಿಮ್ಮ ಮುಂದೆ, ಸಭೆಯ ಮುಂದಿಡುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ : ತಾವು ಇಲ್ಲಿ ಮಾತನಾಡುವಾಗ ಬೆಂಗಳೂರಿನಲ್ಲಿ, ಆರು ಲಕ್ಷಕ್ಕೆ ಒಂದು ಮೆಡಿಕಲ್ ಸೀಟು ಹೋಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ತಂದಿದ್ದೇನೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಎಂ.ಕೃಷ್ಣ ಮೂರ್ತಿ : ವಿರೋಧ ಪಕ್ಷದವರು ಭಾಷಣ ಮಾಡುವಾಗ ಇದೆಲ್ಲಾ ಗಮನಕ್ಕೆ ಬರಲಿ ಎಂದು ಜ್ಞಾಪಿಸುತ್ತಿದ್ದಾರೆ ಅಷ್ಟೆ.

ಶ್ರೀ ಹೆಚ್.ಡಿ.ದೇವೇಗೌಡ : ಅವರು ಹೇಳಿದ್ದು ನಿಜ. ಅವರು ಹೇಳಿದ್ದುದು ಅಸತ್ಯ ಎಂದು ಭಾವಿಸಿಕೊಳ್ಳಬೇಕಾಗಿಲ್ಲ. ಅವರು ಹೇಳಿದಂತಹ ಮಾತಿನಲ್ಲಿ ಸತ್ಯ ಇದೆ. ಇದನ್ನೇ ನಂಜೇಗೌಡರು ಈ ಸಭೆಯಲ್ಲಿ ಎತ್ತಿದರು, ಅವರು ಹಿರಿಯ ಮುಖಂಡರು. ಮೈಸೂರಿನಲ್ಲಿ ಮಾರ್ಕ್ಸ್ ಕಾರ್ಡ್ ರಾಕೆಟನ್ನು ಯಾರು ಕ್ವಾಲಿಫೈಯಿಡ್ ಎಕ್ಸಾಮಿನೇಷನ್ ಮಾರ್ಕ್ಸ್‌ಗಳನ್ನು ಇವತ್ತು ಆಲ್ಟರ್ ಮಾಡುವುಗಕ್ಕೆ ಹೊರಟಿದ್ದಾರೆ ಅಂತಹವರನ್ನು ಇವತ್ತು ಪತ್ತೆ ಹಚ್ಚಿ ಮೂರು ಜನ ಅಧಿಕಾರಿಗಳನ್ನು ಅರೆಸ್ಟ್ ಮಾಡಿದ್ದೇವೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ನಡೆದಿರತಕ್ಕಂತಹ ವ್ಯವಹಾರದ ಬಗ್ಗೆ ಸನ್ಮಾನ್ಯ ರಾಜ್ಯಪಾಲರು ಇವತ್ತು ಆಜ್ಞೆ ಮಾಡಿದ್ದಾರೆ. ಎನ್‌ಕ್ವೈರಿ ಮಾಡತಕ್ಕಂಥದ್ದರ ಬಗ್ಗೆ ಇವತ್ತು ಒಬ್ಬ ಹಿರಿಯ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ.

" Serious irregularities are alleged to have been committed in the Evaluation of the answer papers relating to the Final Year M.B.B.S./B.D.S. exminations during the year 1992, 93, 94 involving replacement of one of the answer scripts during the Evaluation and tempering with them. Some officers of the University appear to have been responsible for these irregularities. Sri H.G.Balakrishna Committee enquiring into the allegations has been bogged down due to non-cooperation from the University Authorities. There is an apprehension that the existing documents bearing on the allegations will be tampered with or destroyed in the context of the alleged involvement of the key functionaries of the University. The above matters have been brought to my notice through an official communication and have also come to my notice from the reports appearing in the Press. The serious nature of the allegations tends to erode public confidence and Sanctity and Sacredness of the University as a premier institution of higher education. It is also felt necessary to ensure that the documents pertaining to the alleged irregularities in the evaluation are not tampered with or destroyed and are kept in safe custody. In these

circumstances, on inspection needs to be caused into the work of the evaluation of the answer papers relating to M.B.B.S., and B.D.S., examinations of the Bangalore University.

In exercise of the powers conferred under sub-section (1) of Section 8 of the Karnataka Universities Act 1976, I, Khurshid Alam Khan, Governor of Karnataka and Chancellor of Bangalore University, hereby appoint Sri D.Srinivasalu, I.P.S., Commissioner of Police, Bangalore City, for holding an inspection into the evaluation of answer papers pertaining to the Final Year M.B.B.S.,/B.D.S., examinations hold during June-July 1991 and Supplementary Examinations held in February 1993 of the Bangalore University. For the purpose of the said enquiry, he shall have access to the concerned institutions and premises and to the answer scripts and accounts and other records he may deem necessary. The officers holding the inspection may take the assistance of such officers of the University or other officers as he may deem necessary. He shall have the powers to take to custody any incriminating documents and keep them in safe custody. Sri Srinivasulu after inspecting the work and the documents above mentioned shall submit his report on or before 30/05/1995".

ನೀವು ಏನು ರೈಸ್ ಮಾಡಿದಿರಿ ಈ ಸಭೆಯಲ್ಲಿ ಅವರು ಏನು ಈಗ ಬೇಳಿದರು ಅದು ನಡೆಯುತ್ತಿದೆ.

ಶ್ರೀ ಕುಂಬ್ಳೆ ಸುಂದರರಾವ್: ಬೆಂಗಳೂರು ಕ್ರಿಶ್ಚಿಯನ್ ಮೆಡಿಕಲ್ ಕಾಲೇಜ್, No.712, ಮಾಜಿ ಸೈನಿಕರ ಕಾಲೋನಿ, ದೊಡ್ಡ ಬಾಣಸವಾಡಿ, ಬೆಂಗಳೂರು-13 ದೂರವಾಣಿ ಸಂಖ್ಯೆ 569699, 5476376 ಇಲ್ಲಿ ಫೋನ್ ಮಾಡಿ ನೋಡಬಹುದು. ಈಗ ಇಂತಿಷ್ಟು ಲಕ್ಷ ತೆಗೆದುಕೊಂಡು ಬನ್ನಿ ನಾವು ಅಡ್‌ಮಿಷನ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದಕ್ಕೆ ಯಾವುದೇ ಭಾರತ ಸರ್ಕಾರದ ಪರ್ಮಿಷನ್ ಇಲ್ಲ, ಐಎಮ್‌ಸಿ ಪರ್ಮಿಷನ್ ಇಲ್ಲ. ಇದು ಕೇವಲ ಒಂದು ಕ್ಯಾಪಿಟೇಷನ್ ಫೀ ಪ್ರಶ್ನೆ ಅಲ್ಲ, ಲಾ ಅಂಡ್ ಆರ್ಡರ್ ಪ್ರಶ್ನೆ ಕೂಡ ಇದೆ ಎಂದು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಚೆ ಪಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಇದೂ ಒಂದು ರಾಕೆಟ್ ಇದೆ ಎಂದು ಹೇಳಿದೆ. ಇದರಿಂದ ಮೊದಲನೆಯ ಹೆಜ್ಜೆಯನ್ನು ತೆಗೆದುಕೊಳ್ಳಲಿಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಮೈಸೂರಿನಲ್ಲಿ ಮೂರು ಜನ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಅರೆಸ್ಟ್ ಮಾಡಬೇಕಾಗಿದ್ದರೆ ಈ ಒಂದು ರಾಕೆಟ್‌ನಲ್ಲಿ ಅದು ಒಂದು ಅಂಗ ಅಷ್ಟೆ. ಪಿ.ಯು.ಸಿ ಮಾರ್ಕ್ಸ್ ಕಾರ್ಡ್‌ನ್ನು ಕ್ವಾಲಿಫೈಯಿಂಗ್ ಎಕ್ಸಾಮಿನೇಷನ್ ಮಾರ್ಕ್ಸ್ ಕಾರ್ಡ್‌ನ್ನೇ ತಿದ್ದತಕ್ಕಂಥಾದ್ದು, ಮನೆಯಲ್ಲಿ ಖಾಲಿ ಮಾರ್ಕ್ಸ್ ಕಾರ್ಡ್‌ಗಳನ್ನು ಇಟ್ಟುಕೊಂಡು ಮನೆಯಲ್ಲಿ ಸೀಲು ಹೊಡೆದು ನಂಬರ್ ಹಾಕಿ ಕೊಡತಕ್ಕಂಥ ವ್ಯವಸ್ಥೆ ಇದೆ. ಇದರ ಎನ್‌ಕ್ವೈರಿ ನಡೆಯುತ್ತಿದೆ. ಏಕೆಂದರೆ ತಾವು ಹೇಳಿದಿರಿ ಈ ಸರ್ಕಾರ ಎಂದು ಯಾರಾದರೂ ರೆಕಗ್ನೈಸ್ ಮಾಡುತ್ತಾರಾ ಎಂದು ಹೇಳಿದಿರಿ. ನನಗೆ ಛೇಡಿಸುವುದಕ್ಕೆ ಹೇಳಿದಿರೋ ಇಲ್ಲವೇ ಏಕೆಂದರೆ ನಿಮಗೆ ಹೇಳುವ ಅಧಿಕಾರ ಇದೆ.

ಶ್ರೀ ಹೆಚ್.ಎನ್.ನಂಜೇಗೌಡ : ನೀವು ಒಳ್ಳೆಯ ಕೆಲಸ ಮಾಡಿದರೆ ಸಂತೋಷ, ಈಗ ಏನಾಗಿದೆ ಅಂದರೆ ನಾನು ಹೊಡೆದ ಹಾಗೆ ಮಾಡುತ್ತೇನೆ, ನೀವು ಅತ್ತ ಹಾಗೆ ಮಾಡಿ. ಏಕೆ ಹೇಳುತ್ತೇನೆ ಅಂದರೆ ಒಳ್ಳೆಯ ಕೆಲಸ ಮಾಡಿದರೆ ಸಂತೋಷ ಪಡೋಣ ಎಂದು ಹೇಳಿದೆ. ಆದರೆ ನಾನು ಹೊಡೆದ ಹಾಗೆ ಮಾಡುತ್ತೇನೆ, ನೀನು ಅತ್ತ ಹಾಗೆ ಮಾಡು ಎಂದು ಹೇಳಿ ಈಗ ಅಲ್ಲಿರುವ ರಿಜಿಸ್ಟ್ರಾರ್ ಆಫ್ ಎವಾಲ್ಯುಯೇಷನ್ ಮತ್ತೊಬ್ಬರು ಎಲ್ಲಾ ಸರ್ವೀಸ್‌ನಲ್ಲಿದ್ದಾರೆ, ಅವರಿಗೆ ಏನೂ ಬದಲಾವಣೆ ಮಾಡಲಿಲ್ಲ.

SRI H.D. Devegowda : I have transferred the Registrar of Evaluation to Bidar. If he has not handed over the charge, I am going to suspend him. There is no question of any hesitation on my part. I have already transfered him and the Senior police officers are there in the University Campus.

ಡಾಕ್ಯುಮೆಂಟ್ಸ್ ವಾಚ್ ಮಾಡುವುದಕ್ಕೆ ಅಲ್ಲಿ ಯಾರನ್ನೂ ಬೇರೆ ನಾವು ಎಲ್ಲೆಲ್ಲಿ ಏನೇನು ಆನ್ಸರ್ ಪೇಪರ್ಸ್ ಇವೆ ಅದನ್ನೆಲ್ಲಾ ಕಾಯುವುಗಕ್ಕೆ ಈತ ಒಬ್ಬ ಹೋಗಿ ರೂಮ್‌ನಲ್ಲಿ, ಹಿಂದೆ ಒಂದು ಸಾರಿ ಬೆಂಕಿ ಹಾಕಿದ್ದರು. ಅದು ಅನುಭವ ಅದರಿಂದ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಅದರಲ್ಲಿ ಯಾವ ಮುಚ್ಚು ಮರೆಯೂ ಇಲ್ಲ. ನಾನು ತಮಗೆ ಇಷ್ಟು ಮಾತ್ರ ಹೇಳುತ್ತೇನೆ. ನನಗೆ ಏನು ಶಕ್ತಿ ಇದೆಯೋ ಆ ಶಕ್ತಿ ಈ ಸರ್ಕಾರದ ಶಕ್ತಿಗೆ ಬಳಕೆ ಮಾಡುತ್ತೇನೆ. ಬಳಕೆ ಮಾಡಿ ಇಲ್ಲಿಂದ ಮುಂದಕ್ಕಾದರೂ ಇಂತಹ ಅನಾಹುತಗಳು ಆಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ನೀವು ಸಹಕಾರ ಕೊಟ್ಟರೆ ಅಷ್ಟೇ ಸಾಕು.

ಶ್ರೀಮತಿ ಪ್ರಮಿಳಾನೇಸರ್ಗಿ : ಅಧ್ಯಕ್ಷರೆ, ನಿನ್ನೆ ಈ ವಿಷಯ ಗೊತ್ತಾಗಿ ಪರಶುರಾಂ ಎಂಬ ಸೆಂಟ್ ಜೋಸೇಫ್ ಕಾಲೇಜಿನ ಅಧಿಕಾರಿಯನ್ನು ಈಗಾಗಲೇ ಬೆಂಗಳೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಡಾಕ್ಯೊಮೆಂಟ್ಸ್ ಇಡುವುದಕ್ಕೆ

ಕಸ್‌ಸ್ಟೋಡಿಯನ್ ಇದ್ದಾರಲ್ಲ ಅವರನ್ನು ತಂದು ಅದನ್ನು ಬಂದೋಬಸ್ತು ಮಾಡಿದ್ದಾರೆ. ಇದರ ಬಗ್ಗೆ ದಯಮಾಡಿ ಕೂಡಲೆ ಕ್ರಮತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ದೇವೆಗೌಡ : ಮಾನ್ಯ ಸದಸ್ಯಣಿಯರು ಹೇಳಿದ ಮಾತನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ.

ಶ್ರೀ ಯು.ಬಿ.ಬಣಕಾರ್ : ಶಿಕ್ಷಣ ಇಲಾಖೆಯಲ್ಲಿ ಈಗಾಗಲೆ ಸಾಕಷ್ಟು ಭ್ರಷ್ಟಾಚಾರ ಮಾಡಿದಂಥ ಅಧಿಕಾರಿಗಳನ್ನು, ಬಡ್ತಿ ಕೊಟ್ಟು ಅವರು ಕೇಳಿರುವಂಥ ಸ್ಥಳಗಳಿಗೆ ಹೋಗಲು ಅವಕಾಶ ಮಾಡಿಕೊಡತಕ್ಕ ಕೆಲಸವಾಗಿದೆ. ಇದನ್ನು ಸರಿಪಡಿಸಬೇಕಾಗುತ್ತದೆ.

ಅಧ್ಯಕ್ಷರು : ಕ್ರಮತೆಗೆದುಕೊಳ್ಳುತ್ತಾರೆ.

ಶ್ರೀ ಹೆಚ್.ಡಿ.ದೇವೇಗೌಡ : ಮಾನ್ಯ ಸದಸ್ಯಣಿಯವರು ಏನು ವಿಚಾರವನ್ನು ಹೇಳಿದ್ದಾರೆ ಅದರ ಬಗ್ಗೆ ಈ ಸಭೆಯು ಮುಗಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವನ್ನು ತೆಗೆದುಕೊಳ್ಳಲು ಸೂಚನೆಯನ್ನು ಕೊಡುತ್ತೇನೆ. ಅವರೇನಾದರೂ ಆದನ್ನು ಹೇಳದಿದ್ದರೆ ನಾನು ಮರೆತುಬಿಡುತ್ತಿದ್ದೆ. ಇನ್ನು ಬೆಂಗಳೂರಿನಲ್ಲಿ ಮಂತ್ರಿಗಳೆಲ್ಲರೂ ಆರಾಮದಿಂದಿದ್ದಾರೆ, ಯಾವುದನ್ನು ನೋಡುವುದಿಲ್ಲ, ಮಾಡುವುದಿಲ್ಲವೆಂದು ಟೀಕೆಗಳನ್ನು ನಮ್ಮ ಹಳ್ಳಿಯವರೆ ಮಾಡುತ್ತಾರೆ. ಏಕೆಂದರೆ ಅವರ ಹಳ್ಳಿಗಳಿಗೆ ಬಸ್ಸುಗಳನ್ನು ಹೋಗುವುದಿಲ್ಲವಲ್ಲ. ಇನ್ನು ಕೆಎಸ್‌ಆರ್‌ಟಿಸಿ ಬಸ್ಸುಗಳ ಬಗ್ಗೆ ಹೇಳಬೇಕಾದರೆ, 1993ರ ಏಪ್ರಿಲ್‌ನಲ್ಲಿ ಕೆಎಸ್‌ಆರ್‌ಟಿಸಿಯಲ್ಲಿ 446 ಲಕ್ಷ ನಷ್ಟವಾಗಿದ್ದರೆ 1994ರಲ್ಲಿ 629 ಲಕ್ಷ, ಜೂನ್ 93ರಲ್ಲಿ 811 ಲಕ್ಷ, ಜೂನ್ 94ರಲ್ಲಿ 876 ಲಕ್ಷ ಜುಲೈ 1993ರಲ್ಲಿ 12837 ಲಕ್ಷ, 1994ರಲ್ಲಿ 1259 ಲಕ್ಷ, ಆಗಸ್ಟ್ 93ರಲ್ಲಿ 1412 ಲಕ್ಷವಾಗಿದ್ದರೆ 1994ರಲ್ಲಿ 1237 ಲಕ್ಷ, ಸೆಪ್ಟಂಬರ್ 93ರಲ್ಲಿ 1489 ಲಕ್ಷವಾಗಿದ್ದರೆ 94ರಲ್ಲಿ 1463 ಲಕ್ಷ, ಅಕ್ಟೋಬರ್‌ನ 93ರಲ್ಲಿ 1199 ಲಕ್ಷ ನಷ್ಟವಾಗಿದ್ದರೆ 94ರಲ್ಲಿ 1206 ಲಕ್ಷ, ನವೆಂಬರ್ 93ರಲ್ಲಿ 1130 ಲಕ್ಷ ನಷ್ಟವಾಗಿದ್ದರೆ 94ರಲ್ಲಿ 1286 ಲಕ್ಷ ನಷ್ಟವಾಗಿದೆ. ಈ ಸಂಸ್ಥೆಯಲ್ಲಿ ಷೆಡ್ಯೂಲ್‌ಗಳನ್ನು ಎಷ್ಟು ಕಡಿಮೆ ಮಾಡಿದ್ದಾರೆ ಎನ್ನುವ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ. ಡಿಸೆಂಬರ್ 1994ರಲ್ಲಿ ಷೆಡ್ಯೂಲ್ ಆಪರೇಟೆಡ್ 8908. ಒಂದು ಕಡೆಯಲ್ಲಿ ನಷ್ಟ ಮತ್ತೊಂದು ಕಡೆಯಲ್ಲಿ ಷೆಡ್ಯೂಲ್‌ಗಳನ್ನು ಕಡಿಮೆ ಮಾಡಿದ್ದುದು, ನಾವು ಈ ರೀತಿ ನಡೆಯುವುದಕ್ಕೆ ಬಿಡುವುದಿಲ್ಲ ಆ ರೀತಿ ತೆಗೆದುಹಾಕಲ್ಪಟ್ಟು ಖಾಸಗಿಯವರು ಎಲ್ಲೆಲ್ಲಿ ಬಸ್ಸುಗಳನ್ನು ಓಡಿಸುತ್ತಾರೋ ಇವರು ಅಲ್ಲೇ ಓಡಿಸುತ್ತಾರೆ. ಇದು ತಿಂಗಳು ತಿಂಗಳ ಮಾಹಿತಿಯನ್ನು ನಾನು ಕೊಡುತ್ತಿದ್ದೇನೆ. ಬೇಕಾದರೆ ಎಲ್ಲಾ ಮಾಹಿತಿಯನ್ನು ಸಹ ತರಿಸಿಕೊಡುತ್ತೇನೆ. ನಮ್ಮ ಜನತಾದಳದ ಸರ್ಕಾರವಿದ್ದಾಗ 200 ಕೋಟಿ ಲಾಭ ಮಾಡಿದ್ದ ಬಗ್ಗೆಯೂ ಸಹ ತರಿಸಿಕೊಡುತ್ತೇನೆ. ಡಿಸೆಂಬರ್‌ನಲ್ಲಿ 8908 ಷೆಡ್ಯೂಲ್‌ಗಳು ಇತ್ತು ನಾವು ಬಂದಮೇಲೆ ನೂರು ಷೆಡ್ಯೂಲ್‌ಗಳನ್ನು ಇಂಟ್ರಡ್ಯೂಸ್ ಮಾಡಿದೆವು. ನಾವು ಬಂದಮೇಲೆ ಅಂದರೆ ಜನವರಿ 1995ರಲ್ಲಿ ಇದು 8956ಕ್ಕೆ ಏರಿತ್ತು ಫೆಬ್ರವರಿಯಲ್ಲಿ 9019, ಮಾರ್ಚ್‌ನಲ್ಲಿ 9085 ಕ್ಕೆ ತೆಗೆದುಕೊಂಡು ಹೋದೆವು.

ಏಕೆಂದರೆ ನಾವು ಹಳ್ಳಿಗಳ ಕಡೆಗೆ ಹೋದರೆ ಬಹಳ ಕೆಟ್ಟ ಶಬ್ದದಿಂದ ಹೇಳುತ್ತಾರೆ. ನಮಗೆ ಓಟನ್ನು ಕೊಟ್ಟಂಥ ಪ್ರಭುಗಳು ಅವರು. 1995-96ರಲ್ಲಿ 1050 ಬಸ್ಸುಗಳನ್ನು ರೀಪ್ಲೇಸ್‌ಮೆಂಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಹಾಗೆಯೇ 450 ಹೊಸ ಬಸ್ಸುಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಒಟ್ಟಾರೆ 1993ರಲ್ಲಿ ಕೆಎಸ್‌ಆರ್‌ಟಿಸಿಯಲ್ಲಿ 93 ಕೋಟಿ ರೂಪಾಯಿ ನಷ್ಟವಾಗಿದೆ. 1994ರಲ್ಲಿ ಅದು 80 ಕೋಟಿಗೆ ಇಳಿಯಿತು. ಅಂದರೆ ಹತ್ತು ಕೋಟಿ ಕಡಿಮೆಯಾಯಿತು. ಈ ವಿಷಯವನ್ನೇಕೆ ಈ ಸಭೆಯ ಮುಂದಿಡುತ್ತಿದ್ದೇನೆಂದರೆ, ಸಮಸ್ಯೆಗಳನ್ನು ಬಗೆಹರಿಸತಕ್ಕ ಕಾಲದಲ್ಲಿ ಈ ನಾಲ್ಕು ತಿಂಗಳಿನಲ್ಲಿ ಎಲ್ಲಾ ಸಮಸ್ಯೆಗಳನ್ನು ನಾನು ಬಗೆಹರಿಸತಕ್ಕಂಥ ಅಥವಾ ನನ್ನ ಸಹೋದ್ಯೋಗಿಗಳೊಂದಿಗೆ ಸೇರಿ ಬಗೆಹರಿಸತಕ್ಕಂಥ ಮಂತ್ರದಂಥ ನಮ್ಮ ಕೈಯಲಿಲ್ಲ. ಅದಕ್ಕೆ ಪ್ರಯತ್ನಪಡಬೇಕಾಗುತ್ತದೆ. ನಾವು ನಮ್ಮ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ ನಮಗೆ ಶಕ್ತಿ ಇಲ್ಲವೆಂದು ಜನರು ತೀರ್ಮಾನ ಮಾಡಿದರೆ ನಮಗೆ ಮನೆಗೆ ಕಳಿಸುತ್ತಾರೆ. ನಮಗೆಷ್ಟು ಓಡಲು ಸಾಧ್ಯವೊ ಅಷ್ಟನ್ನು ನಾವು ಓಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೋಟಾರ್‌ವಾಹನಗಳಿಗೆ ಮಿನಿಮಮ್ ವೇಗವೆಂದು ಇಟ್ಟಿರುತ್ತಾರೆ, ತಾವು ಆ ಮಿನಿಮಮ್ ವೇಗದಲ್ಲಾದರೂ ಓಡಬೇಕು. ಜಾಸ್ತಿ ವೇಗವಾಗಿ ಓಡಿದರೆ ಅಪಘಾತವಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಅವರು ಹೇಳಿದ್ದುದು ವೇಗದ ಬಗ್ಗೆಯಲ್ಲ, ದಿಕ್ಕಿನ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಅವರು ದಿಕ್ಕುತಪ್ಪಿದ್ದಾರಲ್ಲ?

ಶ್ರೀ ಹೆಚ್. ಡಿ. ದೇವೇಗೌಡ : ತಮ್ಮ ಸಲಹೆಯನ್ನು ಸ್ವಾಗತ ಮಾಡುತ್ತೇನೆ. ನೀವು ಸಹಕಾರ ಕೊಟ್ಟರೆ ಸ್ವಲ್ಪ ಹೆಚ್ಚು ಓಡಬಹುದು. ಇನ್ನು ಲೋಕಾಯುಕ್ತದ ಬಗ್ಗೆ ಹೇಳುವುದಾದರೆ ಇದಕ್ಕೆ ಸಂಬಂಧಪಟ್ಟ ಒಂದು ನೋಟಿಫಿಕೇಶಷನ್‌ನ್ನು ವಿಥ್‌ಡ್ರಾ ಮಾಡಿದ್ದೇವೆ. ಅದೇನೆಂದರೆ ಪೋಲಿಸ್ ಇಲಾಖೆಯಲ್ಲಿ ಡಿಜಿಪಿ ಯವರನ್ನು ನೇಮಕ ಮಾಡಿದಮೇಲೆ ಅವರು ಲೋಕಾಯುಕ್ತದ ವ್ಯಾಪ್ತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿಲ್ಲವೆನ್ನತಕ್ಕ ನೋಟಿಫಿಕೇಷನ್ ಇದೆ. ಈಗ ಆ ನೋಟಿಫಿಕೇಷನ್‌ನ್ನು ವಿತ್‌ಡ್ರಾ ಮಾಡಿ He has been brought under the purview of the Lok Ayuktha. ಇನ್ನೊಂದು ಬಿಲ್ಲು ಇಲ್ಲಿ ಇಂಟ್ರಡ್ಯೂಸ್ ಆಗುತ್ತಿದೆ. ಅದೇನೆಂದರೆ, 3500 ರೂಪಾಯಿಗಳಿಗೆ ಒಳಪಟ್ಟು ಇರತಕ್ಕ ಅಧಿಕಾರಿಗಳು ಲೋಕಾಯುಕ್ತದ ವ್ಯಾಪ್ತಿಯಲ್ಲಿ ಬರುತ್ತಾರೆ, ಅದರ ಮೇಲೆ ಇರುವವರು ಬರುವುದಿಲ್ಲವೆಂದು ಹೇಳಿದರು. ಬಹುಶಃ ಇವತ್ತು ಅದು ಸಭೆಯ ಮುಂದೆ ಬರಬಹುದು. ಒಂದುವೇಳೆ ಒಂದೊಂದಾಗಿ ಏಕೆ ತರುತ್ತೀರಿ ಕಾಂಪ್ರಹೆನ್‌ಸೀವ್ ಆಗಿ ಏಕೆ ತರಬಾರದೆಂದು ಕೆಲವು ಮಾನ್ಯ ಸದಸ್ಯರುಗಳು ಕೇಳಿದರು. ನನಗೇನು ಹಿಂದೆ ಹೋಗಬೇಕೆಂದಿಲ್ಲ. ನಾವು ಚುನಾವಣೆಯಲ್ಲಿ ವಚನ ಕೊಟ್ಟಿದ್ದೆವು. ಕಾಂಪ್ರಹೆನ್‌ಸೀವ್ ಆಗಿ ಕೊಡುವಂತೆ ಕಾನೂನು ಇಲಾಖೆಗೆ ಹೇಳಿ ಅವರ ಬಗ್ಗೆ ಸಾಧ್ಯವಾಗುವುದಾಗಿದ್ದರೆ ಯೋಚನೆ ಮಾಡಿ ಎಂದಿದ್ದೇವೆ. ಮತ್ತು

ಲೋಕಾಯುಕ್ತದವರಲ್ಲಿ ವಿನಂತಿ ಮಾಡಿ ಈ ಆಕ್ಟ್‌ನಲ್ಲಿ ಏನೇನು ದೋಷವಿದೆ ಅದರ ಬಗ್ಗೆ ನಮಗೆ ಕಳಿಸಿಕೊಡಿ ನಾವು ಕಾಂಪ್ರಹೆನ್‌ಸೀವ್ ಆಗಿ ಲೆಜಿಸ್‌ಲೇಷನ್ ತರಲು ಪ್ರಯತ್ನ ಪಡುತ್ತೇವೆ ಎಂದು ಹೇಳಿದೆ. ಇವತ್ತು ನಾವು ಈ ಸದನದಲ್ಲಿ ಇದನ್ನು ಏನು ಮೂವ್ ಮಾಡುತ್ತೇವೆ, ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಕಾಂಪ್ರಹೆನ್‌ಸೀವ್ ಲೆಜಿಸ್‌ಲೇಷನ್ ಆಗಿ ತರಬೇಕಾದರೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಪೋಲೀಸ್ ಹಿರಿಯ ಅಧಿಕಾರಿಗಳನ್ನು ಲೋಕಾಯುಕ್ತದ ವ್ಯಾಪ್ತಿಯಿಂದ ಹೊರಗಿಟ್ಟಿದ್ದರು ಎನ್ನುವ ಎಕ್ಸಿಕ್ಯೂಟಿವ್ ಆರ್ಡ್‌ರನ್ನು ಈ ಕೂಡಲೆ ವಿಥ್‌ಡ್ರಾ ಮಾಡತಕ್ಕ ಪ್ರಯತ್ನ ಪಟ್ಟಿದ್ದೇವೆ. ಈ ಒಂದು ತಿದ್ದುಪಡಿಯೇನಾಗಬೇಕಾಗಿದೆ ಅದರಲ್ಲಿ ಒಂದೊಂದಾಗಿ ಮಾಡುವುದು ಬೇಡ, ಕಾಂಪ್ರಹೆನ್‌ಸೀವ್ ಆಗಿ ಮಾಡಲೂ ಸಹ ನಾನು ಸಿದ್ಧನಾಗಿದ್ದೇನೆ. ಇದಕ್ಕೆ ವಿರೋಧ ಪಕ್ಷದ ಎಲ್ಲಾ ಸನ್ಮಾನ್ಯ ಗೌರವಾನ್ವಿತ ಸದಸ್ಯರ ಸಲಹೆಗಳನ್ನು ತೆಗೆದುಕೊಳ್ಳಲು ನಾವು ಸಿದ್ಧರಾಗಿದ್ದೇವೆ. ಬೇಕಾದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕೆಂದು ಕೆಲವರು ನಿನ್ನೆ ಸಲಹೆ ಕೊಟ್ಟರು, ಅದನ್ನು ಮಾಡಬೇಕೆಂದರೆ ಮಾಡುತ್ತೇನೆ ಇಲ್ಲ, ಈಗ ತಂದಿರುವುದು ಇರಲಿ ಇದನ್ನು ಪಾಸ್ ಮಾಡೋಣ ಮುಂದೆ ಕಾಂಪ್ರಹೆನ್‌ಸೀವ್ ಆಗಿ ತರೋಣವೆಂದರೆ ಅದಕ್ಕೂ ಸಹ ಸಿದ್ದರಾಗಿದ್ದೇವೆ. ಇನ್ನು ಲೋಕಾಯುಕ್ತದಲ್ಲಿ ಎಷ್ಟು ಕೇಸುಗಳು ಪೆಡಿಂಗ್ ಇವೆ ಎಂಬ ಬಗ್ಗೆ ಮಾಹಿತಿಯನ್ನು ತರಿಸಿದ್ದೇವೆ. ಇದರ ಬಗ್ಗೆ ವಿವರಣೆಯನ್ನು ಕೊಟ್ಟು-ಕೊಂಡು ಹೋಗಬಹುದು, ಆದರೆ ದಾಖಲೆಗಳನ್ನು ಸ್ಥಾಪನೆ ಮಾಡತಕ್ಕ ಅನಿಸಿಕೆ ನನಗಿಲ್ಲ. ರೈಡ್, ಟ್ರಾಫ್‌ಕೇಸ್‌ಗಳು ಎಷ್ಟು ಆಗಿದೆ, ಅವುಗಳು ಯಾವ್ಯಾವ ಹಂತದಲ್ಲಿವೆ ಎಂಬ ಬಗ್ಗೆ ಅದರ ವಿವರಣೆಯನ್ನು ತರಿಸಿದ್ದೇನೆ. ತಾವು ಸಿಓಡಿ ಯ ಬಗ್ಗೆ ಕೇಳಿದ್ದಿರಿ, ಆದರೆ ಪೂರ್ಣವಾದ ಅದರ ಬಗ್ಗೆ ಮಾಹಿತಿ ನನಗೇ ಬಂದಿಲ್ಲ. ಕೆಲವು ಮಾಹಿತಿಯನ್ನು ಕಳಿಸಿಕೊಟ್ಟಿದ್ದಾರೆ.

1.40 ಪಿ.ಎಂ

ನನ್ನ ಮುಂದೆ ಬಂದಿರತಕ್ಕಂಥಾದ್ದು ಕೇವಲ ಎರಡು ಮಾಹಿತಿಗಳು. ಕೆಲವು ಸಾರಿ ಪತ್ರಿಕೆಗಳವರೂ ಉಪಕಾರ ಮಾಡುತ್ತಾರೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಹೆಸರು ಹೇಳುತ್ತೇನೆ, ಯಾವುದು ಅಂದರೆ ಸುಲಭ ಶೌಚಾಲಯಗಳ ಬಗ್ಗೆ ಒಂದು ಆರ್ಟಿಕಲ್ ಬಂದ ಮೇಲೆ ನಾನೇ ತಕ್ಷಣ ಫೋನ್ ಮಾಡಿದೆ. ಅದು ಬಂದ ಮೇಲೆ ಈಗ ಸುಮಾರು 11-12 ಜನ ಆಫೀಸರ್‌ಗಳನ್ನು ಸಸ್ಪೆಂಡ್ ಮಾಡಿ ಫರ್ದರ್ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇನೆ. ಅದಕ್ಕೆ ಕೊಡಬೇಕಾಗಿರತಕ್ಕಂತಹ ಪೆಂಡಿಂಗ್ ಬಿಲ್ ಎಷ್ಟಿದೆ ಅದನ್ನು ಸೆಟ್ಲ್ ಮಾಡತಕ್ಕಂತಹ ಪ್ರಯತ್ನ ಕೂಡ ಮಾಡಬೇಕೆಂದು ಹೇಳಿ ಹೊಸ ಡೈರೆಕ್ಟರ್‌ಗೆ ಸೂಚನೆ ಕೊಟ್ಟಿದ್ದೇನೆ. ಇನ್ನು ಒಂದು ಇವತ್ತು ಬೆಳಿಗ್ಗೆ ನೋಡಿದೆ. ಟಾರ್ ಟ್ರಾನ್ಸ್‌ಪೋರ್ಟೇಷನ್ 10 ಕೋಟಿ ರೂಪಾಯಿ ಅಕ್ರಮ ನಡೆದಿದೆ ಎಂದು. ಬೆಳಿಗ್ಗೆ ಪೇಪರ್ ನೋಡಿದ ತಕ್ಷಣ ನೀವು ಯಾರಾದರೂ ರೈಸ್ ಮಾಡುತ್ತೀರಿ ಅಂದುಕೊಂಡೆ. ನನಗೆ ಗೊತ್ತು ಇದು ಬರಬಹುದು. ನಾನು

ಐದು ವರ್ಷಗಳಿಂದ ರಾಜ್ಯ ಬಿಟ್ಟು ಹೊರಗೆ ಹೋಗಿಲ್ಲ. ನನಗೂ ಒಂದೊಂದು ಸಾರಿ ಕಷ್ಟ ಇದೆ. ನನಗೆ ಎಷ್ಟು ಸಾಧ್ಯ ಇದೆ ಅಷ್ಟು ಪ್ರಯತ್ನ ಮಾಡುವುದು. ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಎಷ್ಟು ನಡೆಯುತ್ತಿದೆ, ಸಿ.ಒ.ಡಿ.ಇನ್‌ಕ್ವೈರಿ ಎಷ್ಟು ನಡೆಯುತ್ತಿದೆ, ಲೋಕಾಯುಕ್ತ ಎನ್‌ಕ್ವೈರಿ ಎಷ್ಟು ನಡೆಯುತ್ತಿದೆ, ಯಾವ್ಯಾವ ಸ್ಟೇಜ್‌ನಲ್ಲಿ ಏನೇನು ಇದೆ, ಯಾವ ಯಾವ ಇಲಾಖೆಯಲ್ಲಿ ಏನೇನಿದೆ, ಇವೆಲ್ಲಾ ಮಾಹಿತಿ ತರಿಸಬೇಕೆಂದು ಚೀಫ್ ಸೆಕ್ರೆಟರಿಯವರಿಗೆ ಹೇಳಿದ್ದೇನೆ. ಪ್ರತಿಯೊಂದು ಇಲಾಖೆಯಲ್ಲಿ ಯಾವ್ಯಾವ ತರಹದ ಎನ್‌ಕ್ವೈರಿಗಳು, ಪಾರ್ಟ್‌ಮೆಂಟಲ್ ಎನ್‌ಕ್ವೈರಿ ಲೋಕಾಯುಕ್ತ ಎನ್‌ಕ್ವೈರಿ ಸಿ.ಒ.ಡಿ. ಎನ್‌ಕ್ವೈರಿ ಅಷ್ಟು ತರಿಸಬೇಕೆಂದು ಹೇಳಿದ್ದೇವೆ. ಎಲ್ಲಾ ಇಲಾಖೆಗಳಲ್ಲೂ ಸಂಗ್ರಹ ಮಾಡುವುದಕ್ಕೆ ಅವರು ಪ್ರಯತ್ನ ಮಾಡಿದ್ದಾರೆ. ಬಹುಶಃ ಮುಂದಿನ ಅಧಿವೇಶನ ಬರುವುದರೊಳಗೆ ಇನ್ನು ಒಂದಷ್ಟು ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗಬಹುದು ಎಂದು ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬೆಂಗಳೂರು ಅರಮನೆ ವಿಷಯವಾಗಿ ವಾಟಾಳ್‌ರವರು ಏನು ಹೇಳುತ್ತಾರೆ ಗೊತ್ತಿಲ್ಲ. ಏಕೆಂದರೆ ಐದು ನೂರು ಎಕರೆ ಭೂಮಿ, 475 ಎಕರೆ, 480 ಎಕರೆ ಇರಬಹುದು. ಅದು ಎಕರೆಗೆ ಐದು ಕೋಟಿ ರೂಪಾಯಿ ಅಂದರೂ ಎರಡು ಸಾವಿರ ಕೋಟಿ ಅಂದರೂ 1,500 ಕೋಟಿ ಆಗಬಹುದು. ಇವತ್ತು ಬೆಂಗಳೂರಿನಲ್ಲಿ ಭೂಮಿ ಬೆಲೆ ಚಿನ್ನಕ್ಕಿಂತ ಜಾಸ್ತಿ ಇದೆ. ವಜ್ರಕ್ಕಿಂತ ಜಾಸ್ತಿ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದನ್ನು ಸರ್ಕಾರಕ್ಕೆ ತೆಗೆದುಕೊಂಡು ಸಾರ್ವಜನಿಕರಿಗೋಸ್ಕರ ಉಳಿಸಿಕೊಳ್ಳಿ. ಅದು ಸೆಂಟರ್ ಪ್ಲೇಸ್ ಇದೆ.

ಶ್ರೀ ಹೆಚ್.ಡಿ.ದೇವೇಗೌಡ : ನಮಗೆ ಇನ್ನು ಫೈಲ್ ಸಿಕ್ಕಿಲ್ಲ. ನಮ್ಮ ಹಣೆಬರಹ ಎಲ್ಲಿಗೆ ಬಂದಿದೆಯೆಂದರೆ ಯಾವ್ಯಾವ ಇಲಾಖೆಯಲ್ಲಿ ಬಂದಿದೆ ಎಂದು ಹುಡುಕಿಸುತ್ತಾ ಇದ್ದೇನೆ. ನಮ್ಮ ಚೀಫ್ ಸೆಕ್ರೆಟರಿ ಒದ್ದಾಟ ಮಾಡಿ ಒಂದು ಫೈಲ್ ತಂದು ಕೊಟ್ಟರು. The Bangalore Palace Acquisition and Transfer Ordinance, 1992 ಸುಮ್ಮನೆ ಅದರ ಬಗ್ಗೆ ಒಂದು ಸೂಕ್ಷ್ಮವಾಗಿ ಹೇಳಿದ್ದಾರೆ ಅಷ್ಟೇ. ಬಾಕಿ ಅವರ ಪೂರ್ಣ ಫೈಲ್ ತುಂಬಾ ದಪ್ಪ ಇದೆ ಎಂದು ಹೇಳಿದರು. ನಾನು ಅವರಿಗೆ ವಿಶೇಷವಾಗಿ ಹೇಳಿದ್ದೇನೆ, ಯಾರಾದರೂ ಒಬ್ಬ ಕಾವೇರಿಗೆ ಹೇಗೆ ತಜ್ಞರನ್ನು, ಅಡ್ವೊಕೇಟ್‌ನ್ನು ಅಪಾಯಿಂಟ್ ಮಾಡಿದ್ದೇವೆ ಅದೇ ರೀತಿ ಬೇಕಾಗಿದ್ದರೆ ಅವಶ್ಯಕತೆ ಇದ್ದರೆ ಅಡ್ವೊಕೇಟ್ ನೇಮಕ ಮಾಡಿ ಅದು ಎಂಟೈರ್ ಲೀಗಲ್ ಆಸ್ಪೆಕ್ಟ್ ಸ್ಟಡೀ ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದೇನೆ. ಇದರಲ್ಲಿ ಹಿಂದೂ ಮುಂದೂ ನೋಡುವ ಪ್ರಶ್ನೆ ಇಲ್ಲ.

ಶ್ರೀ ಎಸ್.ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಈ ಬೆಂಗಳೂರು ಅರಮನೆ ವಿಷಯದಲ್ಲಿ ಅರಮನೆಗೆ ಸುತ್ತಮುತ್ತಲೂ ಆವರಣಕ್ಕೆ ಸೇರಿದ ಆಸ್ತಿ ಪಾಸ್ತಿ ವಿಚಾರದಲ್ಲಿ ತಾವು ಆರ್ಡಿನೆನ್ಸ್ ಎಂದು ಹೇಳುತ್ತಿದ್ದೀರಿ. ಅದು ಯಾವ ಆರ್ಡಿನೆನ್ಸ್, ನೀವು ತಂದಿದ್ದುದು ಅಲ್ಲ, ನಾನು ಹೇಳುವುದು ನಾನು ಮುಖ್ಯ ಮಂತ್ರಿ ಇದ್ದಂತಹ

ಕಾಲದಲ್ಲಿ ಒಂದು ಆರ್ಡಿನೆನ್ಸ್ ಇತ್ತು ಇದರ ವಿಚಾರದಲ್ಲಿ ನಾವು ಏನು ಮಾಡಿದೆವು ಅಂದರೆ ಅದನ್ನು ಒಂದು ಸಾರ್ವಜನಿಕ ಆಸ್ತಿಯಾಗಿ ಉಳಿಸಿಕೊಳ್ಳಬೇಕು ಎನ್ನತಕ್ಕಂತಹ ವಿಚಾರ ಮಾಡಿ ಅದಕ್ಕೆ ಆರ್ಡಿನೆನ್ಸ್ ಹೊರಡಿಸುವುದಕ್ಕೋಸ್ಕರ ಕ್ಯಾಕಬಿನೆಟ್ ತೀರ್ಮಾನವನ್ನು ನಾವು ಮಾಡಿ ಅದಕ್ಕೆ ಸಕಲ ಸಿದ್ಧತೆಗಳನ್ನು ನಾವೆಲ್ಲಾ ನಡೆಸಿದೆವು. ಅದು ಮುಂದೆ ಏನಾಯಿತು ಎನ್ನತಕ್ಕಂತಹ ವಿವರಗಳಿಗೆ ನಾನು ಹೋಗುವುದಿಲ್ಲ. ತಾವು ಮುಖ್ಯ ಮಂತ್ರಿಯಾಗಿ ಉತ್ತರ ಕೊಡಬೇಕಾಗದರೆ ಸಾಧ್ಯವಿದ್ದರೆ, ಏಕೆಂದರೆ ಸ್ವಲ್ಪ ಅರ್ಜೆನ್ಸಿ ಅದರಲ್ಲಿ ನನಗೆ ಕಾಣಿಸುತ್ತಿದೆ. ಸದನವನ್ನು ಇವತ್ತು ಸಾಯಂಕಾಲ ಅಥವಾ ನಾಳೆ ನಾವು ಮುಕ್ತಾಯ ಮಾಡುತ್ತಿದ್ದೇವೆ. ಇನ್ನೊಂದು ಸಾರಿ ನಾವು ಸದನದ ಸೇರುವುದರೊಳಗೆ ಅಲ್ಲಿ ಆಗಬಾರದ ಅನಾಹುತಗಳು ನಡೆಯುತ್ತದೆ ಎನ್ನುವ ಅಭಿಪ್ರಾಯ ನನ್ನ ಗಮನಕ್ಕೆ ಬಂದಿದೆ. ಮಾನ್ಯ ಸಭಾಧ್ಯಕ್ಷರೆ, ಅಲ್ಲಿ ಏನಾಗಿದೆಯೆಂದರೆ ಸಿವಿಲ್ ವ್ಯಾಜ್ಯಗಳು ಅವರವರಲ್ಲಿ ನಡೆದಿದೆ. ಹಿಂದಿನ ಮಹಾರಾಜರು ಅವರ ಅಕ್ಕ ತಂಗಿಯರು ಇತ್ಯಾದಿ, ಇತ್ಯಾದಿ ಸಂಬಂಧಿಕರು ಮತ್ತು ಬೇರೆ ಬೇರೆಯವರಿಗೂ ಸಂಬಂಧ ಅಲ್ಲದೆ ಇರತಕ್ಕಂಥವರು ಅವರೆಲ್ಲಾ ಅಗ್ರಿಮೆಂಟ್‌ಗಳು, ರಿಜಿಸ್ಟರ್ ಪತ್ರಗಳು ಎಲ್ಲಾ ನಡೆದು ಅದರಲ್ಲಿ ರಾದ್ಧಾಂತ ಎದ್ದು ಹೋಗಿ ಬಿಟ್ಟಿದೆ, ಮಾನ್ಯ ಸಭಾಧ್ಯಕ್ಷರೆ, ನಾನು ಮುಖ್ಯ ಮಂತ್ರಿಯಾಗಿದ್ದಾಗ ಈ ವಿಚಾರ ನನ್ನ ಗಮನಕ್ಕೆ ಬಂದ ಮೇಲೆ ಒಂದು ಅರ್ಡಿನೆನ್ಸ್ ತರಿಸುವ ವಿಚಾರ ಮಾಡಿ, ನಾವು ಆ ಆಸ್ತಿಯನ್ನು ಸಂಪೂರ್ಣವಾಗಿ ಸಾರ್ವಜನಿಕವಾಗಿ ಉಪಯೋಗವಾಗುವಂತೆ ಮಾಡಬೇಕು, ಅಲ್ಲ ಒಂದು ಡಿಸ್ನಿ ಲ್ಯಾಂಡ್ ಮಾಡಬಹುದು. ಜನರಿಗೆ ಮಕ್ಕಳಿಗೆ ತೆಗೆದುಕೊಂಡು ಹೋಗುವುದಕ್ಕಾಗಿ ಮಾಡಬಹುದು ನಾನು ಒಂದು ಹೇಳುತ್ತೇನೆ, ಕಬ್ಬನ್ ಪಾರ್ಕಿಗೆ ನಾವು ಯಾರೂ ಹೋಗುವ ಹಾಗೆ ಇಲ್ಲ ಒಂದು ರಾಜಕೀಯ ಪಕ್ಷದವರೂ ಕೂಡ ಅಲ್ಲಿ ಸಾರ್ವಜನಿಕ ಭಾಷಣ ಮಾಡುವುದಕ್ಕೆ ಬರುವುದಿಲ್ಲ. ಹಲವಾರು ಕಾರಣಗಳಿಂದ ಅಲ್ಲಿ ಅದು ಕೂಡ ಸಾಕಾಗುವುದಿಲ್ಲ. ನೀವು ಎಲ್ಲಿ ಹೋಗಿ ಭಾಷಣ ಮಾಡುತ್ತೀರಿ, ನ್ಯಾಷನಲ್ ಕಾಲೇಜ್ ಕ್ರಾಂಡ್ ಬಗ್ಗೆ ಬೇಡ ಅಂದರೆ ನೀವು ಎಲ್ಲಿ ಹೋಗಿ ಭಾಷಣ ಮಾಡುತ್ತೀರಿ. ನಾನು ಹೇಳಿದ್ದು ಏನೆಂದರೆ ಇಂತಹ ಆವರಣದಲ್ಲಿ ಒಂದು ಮೂಲೆಯಲ್ಲಿ ಒಂದು ಜಾಗದಲ್ಲಿ ಆದರೂ ಒಂದು ಕಡೆ ಇಟ್ಟರೆ, ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆ ಯಾವುದೇ ರಾಜಕೀಯ ಪಕ್ಷಕ್ಕೆ ಅಲ್ಲಿ ಭಾಷಣ ಮಾಡುವುದಕ್ಕೆ ಜಾಗ ಇಟ್ಟುಕೊಂಡರೆ ಬಹಳ ಒಳ್ಳೆಯದು. ಇದು ಒಂದು. ಇನ್ನೊಂದು ಕಡೆ ಡಿಸ್ನಿ ಲ್ಯಾಂಡ್ ಅರಮನೆ ಅಂತೂ ದೊಡ್ಡ ಬಿಲ್ಡಿಂಗ್ ಬಹಳ ಹೆಸರಾಂತ ಒಂದು ಕಟ್ಟಡ ನಾನು ಒಂದೇ ಒಂದು ವಿಚಾರ ಹೇಳುವುದು. ಇದು ನಮ್ಮದು ಎನ್ನತಕ್ಕಂತಹ ಭಾವನೆಯಿಂದ ರಾಜ ಮಹಾರಾಜರು ಹೋದರಲ್ಲ, ರಾಜಮಹಾರಾಜರಿಗೆ ಈ ಎಲ್ಲ ಆಸ್ತಿಗಳು ಹೇಗೆ ಬಂತು. ನಾವೆಲ್ಲಾ ಸಮಾಜವಾದಿ ಸಿದ್ಧಾಂತಿಗಳು, ನಾವೇ ವಿಚಾರಧಾರೆಯನ್ನು ಇಟ್ಟಿರತಕ್ಕವರು ಏನು ಈ ಆಸ್ತಿ ಪಾಸ್ತಿಗಳನ್ನು ಹಣ ಕೊಟ್ಟು ಮಹಾರಾಜರು ಆ ಕಾಲದಲ್ಲಿ ಕೊಂಡರೇ, ಈ ದೇಶದಲ್ಲಿ ಸರ್ವ ಸ್ವಾತಂತ್ರ್ಯ ನಮ್ಮ ರಾಷ್ಟ್ರಕ್ಕೆ ಸಿಕ್ಕ ಮೇಲೆ

ರಾಜಮಹಾರಾಜರಿಗೆ ಕೊಡತಕ್ಕಂತಹ ಪಿಂಚಣಿ ಹಣ ಮತ್ತೊಂದು ರಾಜಧನ 1971ರಲ್ಲಿ ಇಂದಿರಾಗಾಂಧಿಯವರ ಕಾಲದಲ್ಲಿ ರದ್ದಾದ ಮೇಲೆ ನಾವು ಇನ್ನೂ ಕೂಡ ಇಲ್ಲಿ ಕುಳಿತು ಒದ್ದಾಟ ಮಾಡುತ್ತಿದ್ದೇವೆ. ಈಗ ತೆಗೆದುಕೊಂಡು ಹೋಗಿ ಕೋರ್ಟ್ ಆರ್ಡರ್ ಜಡ್ಜ್‌ಮೆಂಟ್ ಇವುಗಳನ್ನೆಲ್ಲಾ ತೋರಿಸಿ. ನಾನು ಅದಕ್ಕಾಗಿ ಹೇಳುವುದು, ಕೋರ್ಟ್ ಆರ್ಡರ್ಸ್ ಇವತ್ತು ಇದ್ದರೆ ಮೊಯಿಲಿಯವರ ಕಾಲದಲ್ಲಾಗಲಿ ನಿಮ್ಮ ಕಾಲದಲ್ಲಾಗಲಿ ಯಾವ ಕಾಲದಲ್ಲಿಯೂ ಕೂಡ Government is not a party to the proceedings, Civil Proceddings that have gone in Civil Courts in the State. We are not concerened to all those things. ಅದಕ್ಕಾಗಿ ನಾನು ಹೇಳುವುದು, ಮಾನ್ಯ ಸಭಾಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಿಗೆ ವಿನಂತಿ ಮಾಡುವುದು ಏನೆಂದರೆ, ಏನೇ ಸಲಹೆ ಸಹಕಾರ ಬೇಕೆಂದರೆ, ವಿರೋಧ ಪಕ್ಷದವರು ಎಲ್ಲರನ್ನು ಒಂದು ಸಾರಿ ಅರ್ಜೆಂಟಾಗಿ ಕರೆಯಿರಿ ಹಾಗೆ ಮಾಡಿದರೆ you are doing great service to the people of this State and that is a big property as you rightly said. Per acre may be 1000 crores or even more. ಏಕೆಂದರೆ ಅದರ ರೇಟ್ ಸುಮ್ಮನೆ ಸಿಕ್ಕಾ ಪಟ್ಟೆ ಮೇಲಕ್ಕೆ ಏರುತ್ತಿದೆ. ನಾನು ಹೇಳುವುದು ರೇಟ್ ನೋಡಿಕೊಂಡು ಕುಳಿತುಕೊಳ್ಳುವುದು ಅಲ್ಲ. ಆಸ್ತಿಯನ್ನು ಏನಾದರೂ ಮಾಡಿ ನಾವು ಉಳಿಸಿಕೊಳ್ಳಬೇಕು. ನನ್ನ ಸಲಹೆಯನ್ನು ತಾವು ಒಪ್ಪುವ ಹಾಗಿದ್ದರೆ ವಿರೋಧ ಪಕ್ಷದ ನಾಯಕರನ್ನು ಎಲ್ಲರನ್ನೂ ಕರೆದು, ಎಲ್ಲರ ನಂಬಿಕೆ ತೆಗೆದುಕೊಳ್ಳಿ. ನಮ್ಮ ಕಾಲದಲ್ಲಿ ಏನು ಒಂದು ಆರ್ಡಿನೆನ್ಸ್ ಮಾಡಬೇಕೆಂದು ನಾವು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ ಕೊಟ್ಟಿದ್ದು ನನ್ನ ನೆನಪು. ಆಮೇಲೆ ಅದರ ಬೆಳವಣಿಗೆ ಏನಾಯಿತು ಎಂದು ಅಷ್ಟೊಂದು ಸರಿಯಾಗಿ ನನಗೆ ಗೊತ್ತಿಲ್ಲ. ಕಾನೂನು ಇಲಾಖೆ ಯಾವರನ್ನೂ ಕೂಡ ತಾವು ಕರೆಯಿಸಿ ಮಾತನಾಡಿ ಅಷ್ಟರ ಒಳಗೆ ಅರ್ಜೆಂಟಾಗಿ ಒಂದು ಮೀಟಿಂಗ್ ಕರೆಯಿರಿ ನಾಳೆ ಸದನ ಮುಕ್ತಾಯವಾದಾಗ ನೀವು ಮಾಡುತ್ತೀರಿ ಇಲ್ಲಿ ಭಾಷಣ ಮಾಡಿಕೊಳ್ಳುತ್ತಾ ಕುಳಿತುಕೊಳ್ಳುವುದಕ್ಕೆ ನಮಗೆ ಆಗುವುದಿಲ್ಲ. ನೀವು ಆರು ತಿಂಗಳ ಒಳಗೆ ಈ ಸಭೆ ಕರೆಯತಕ್ಕಂತಹ ಪ್ರಶ್ನೆ ಬರುತ್ತದೆ. You have got very good intention I appreciate you but you have to formulate as per good intention otherwise it is of no us. ದಿನ ಬೆಳಗಾದರೆ ಅಲ್ಲಿ ಕಟ್ಟಡಗಳು ಈಗಾಗಲೇ ಕಟ್ಟುವುದನ್ನು ಪ್ರಾರಂಭ ಮಾಡಿದ್ದಾರೆ. ಯಾವುದಾದರೂ ಒಳಗೆ ಹೋಗುವುದಕ್ಕೆ ಬಿಡುತ್ತಿಲ್ಲ. ಗೇಟ್ ಮೊದಲು ಒಂದು ಇತ್ತು now it has got so many gates. Please have a look by taking round the entire property there. ಮೇನ್ ಗೇಟ್ ಹೋಗಿ, ಆ ಕಡೆ ಟಿವಿ ಟವರ್ ಇದೆಯಲ್ಲಾ ಅಲ್ಲಿ ಒಂದು ಗೇಟ್ ಆಯಿತು. ಸರ್ಕಸ್ ಟೆಂಟ್‌ಗಳು ಬರುವುದಕ್ಕೆ ಮಾಡಿದರು. ಈ ಕಡೆ ಆ ಗೇಟು, ಒಬ್ಬೊಬ್ಬರಿಗೆ ಒಂದೊಂದು ಗೇಟ್ ಅವರರವರ ಆಸ್ತಿ

ಮಾಡಿಕೊಂಡು ಅವರವರಿಗೆ ಒಂದೊಂದು ಗೇಟ್ ಇಟ್ಟುಕೊಂಡಿದ್ದಾರೆ. ದಯವಿಟ್ಟು ತಮ್ಮ ಗಮನಕ್ಕೆ ಈಗಾಗಲೆ ಬಂದಿರಬಹುದು ನಾವು ಸರ್ಕಾರ ಕೈಯಲ್ಲಿಟ್ಟುಕೊಂಡು ನಾವು ಗೇಟ್ ನೋಡಿಕೊಂಡು ಕುಳಿತುಕೊಳ್ಳುವುದು ಅಲ್ಲ. ಇವತ್ತು ನಾವು ಏನಾದರೂ ಮಾಡಿ ಆಸ್ತಿಯನ್ನು ಕರ್ನಾಟಕ ರಾಜ್ಯದ ಜನತೆಗೆ ಉಳಿಸಿಕೊಳ್ಳಬೇಕು. ಅದಕ್ಕೆ ನನ್ನ ಸಲಹೆ ಇಷ್ಟೆ ತಾವು ಯಾವುದೇ ಕಾರ್ಯಕ್ರಮ ಹಾಕಿ ಸಾರ್ವಜನಿಕ ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ದಯವಿಟ್ಟು ಕಾರ್ಯಕ್ರಮ ಹಾಕಿಕೊಳ್ಳಿ. ನಾವು ಅಂತೂ with all our right earnestness ನಾವು ಪ್ರಾರಂಭ ಮಾಡಿದ್ದೇವೆ. ಸಂಪೂರ್ಣಗೊಳಿಸುಕೊಳ್ಳುವುದಕ್ಕೆ ನನ್ನಿಂದ ಆಗಲಿಲ್ಲ. ದಯವಿಟ್ಟು ನಿಮ್ಮ ಕಾಲದಲ್ಲಿ ಆದರೂ ಆಗಲಿ ತಕ್ಷಣ ಅದನ್ನು ಉಳಿಸುವಂತಹ ಕೆಲಸ ಮಾಡಬೇಕು. ಮತ್ತು ವಿರೋಧ ಪಕ್ಷದ ನಾಯಕರು ಎಲ್ಲರೂ ಸೇರಿ ಎಲ್ಲಾ ಪಕ್ಷಗಳಿಗೆ ಕೂಡ ತಕ್ಷಣ ಕರೆಯಿಸಿ ನಾಳೆ ನಾಡಿದ್ದು ಒಂದು ಮೀಟಿಂಗ್ ಕರೆದು ಅದಕ್ಕೆ ಏನಾದರೂ ಒಂದು ರೂಪ ಕೊಟ್ಟು ಅಲ್ಲಿ ಆಗತಕ್ಕಂತಹ ಅನಾಹುತ ತಪ್ಪಿಸಿದರೆ ಆ ಹೆಸರು ನಿಮಗೂ ಒಳ್ಳೆಯದು, ರಾಜ್ಯಕ್ಕೆ ಒಳ್ಳೆಯದು. ಇದು ನನ್ನ ಸಲಹೆ ಇದರ ನಂತರ ತೀರ್ಮಾನ ತಮಗೆ ಬಿಟ್ಟಿದ್ದುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅರಮನೆ ಜಾಗದಲ್ಲಿ ಯಾರೂ ಬೇರೆ ಜನ ಅಲ್ಲಿದ್ದಾರೆ ಅವರನ್ನು ಹೊರಗಡೆ ಹಾಕಬೇಕೆಂದು ಒಂದು ಚಳುವಳಿ ಮಾಡಬೇಕು ಎನ್ನತಕ್ಕಂಥಾದ್ದು ಸಾರ್ವಜನಿಕವಾಗಿ ಒಂದು ದೊಡ್ಡ ಅಭಿಪ್ರಾಯ ಇದೆ. ಈಗ ಮುಖ್ಯಮಂತ್ರಿಳು ಆ ಪ್ರಸ್ತಾಪ ಮಾಡಿರುವುದು ನಿಜವಾಗಲೂ ಬಹಳ ಒಂದು ಒಳ್ಳೆಯ ಚಿಂತನೆ. ಅಲ್ಲಿ ಹೋದಾಗ ಏನಾಗಿದೆ ಅಂದರೆ ಕೆಲವು ಮಾಲೀಕರು ಅವರವರ ಹೆಸರುಗಳನ್ನು ಹಾಕಿ ಕೊಂಡಿದ್ದಾರೆ. ಮತ್ತು ಅವರವರ ಕಡೆಯವರನ್ನು ಆ ಆಸ್ತಿ ಕಾಯುವುದಕ್ಕೋಸ್ಕರವಾಗಿ ರಕ್ಷಣೆಗೋಸ್ಕರವಾಗಿ ಎಂದು ಕೆಲವರನ್ನು ನೇಮಿಸಿದ್ದಾರೆ. ನಾವು ಹೋಗಿ ನೀನು ಯಾರು ಎಂದರೆ ನಾನು ಇಂತಹ ಕಂಪನಿಯವನು ಎಂದು ಹೇಳುತ್ತಾರೆ. ಈ ತರಹವಾಗಿದೆ. ಮೊದಲು ಮಾಡಬೇಕಾದಂತಹ ಕೆಲಸ ಎಂದರೆ ಆ ಅರಮನೆಯ ಒಳಗೆ ಇರತಕ್ಕಂಥವರನ್ನು ಹೊರಗಡೆ ಕಳುಹಿಸತಕ್ಕಂಥಾದ್ದು ಅತೀ ಮುಖ್ಯವಾಗಿ ಆಗ ಬೇಕಾಗಿರತಕ್ಕಂಥಾದ್ದು. ಅದು ಯಾವ ಕಾರಣವೇ ಇರಲಿ, ಯಾವ ಶಕ್ತಿಗಳೇ ಇದ್ದರೂ ಚಿಂತೆ ಇಲ್ಲ, ಈ ಸರ್ಕಾರ ಅರಮನೆ ಜಾಗವನ್ನು ಉಳಿಸಿಕೊಳ್ಳಬೇಕಾದದ್ದು ಸರ್ಕಾರದ ಕರ್ತವ್ಯ. ಬಹಳ ದೊಡ್ಡ ದೊಡ್ಡ ಶಕ್ತಿಗಳು ಅದಕ್ಕೆ ಕಣ್ಣಿಟ್ಟಿದ್ದಾರೆ. ಅಲ್ಲಿ ಮೋಸಗಾರರೆಲ್ಲಾ ಸೇರಿ ಒಂದಾಗಿದ್ದಾರೆ. ಅಲ್ಲಿ ಇರುವವರೆಲ್ಲಾ ಒಟ್ಟಾಗಿ ತಾವೇ ತಾವೇ ಅದನ್ನು ಪಡೆದುಕೊಳ್ಳಬೇಕು ಎನ್ನುವಂತಹ ಒಂದು ದೊಡ್ಡ ಪಿತ್ತೂರಿ ನಡೆಯುತ್ತಿದೆ. ನನಗೆ ಅನಿಸುತ್ತದೆ, ಮೈಸೂರು ಅರಮನೆ ಜಾಗವನ್ನು ಸೇರಿಸತಕ್ಕಂಥಾದ್ದು ಒಳ್ಳೆಯದು ಎಂದು. ಏಕೆಂದರೆ ಇದೆಲ್ಲಾ ಉಳಿಯಬೇಕು. ಇದು ಸಾರ್ವಜನಿಕ ಆಸ್ತಿಯಾಗಿ, ಸಾರ್ವಜನಿಕ ಸ್ವತ್ತಾಗಿ ಉಳಿಯಬೇಕಾಗಿದೆ. ಅಲ್ಲಿ ಕೆಲವರು ಅವರವರೇ ಸೇರಿ ಒಳಗಡೆ ಒಂದು ವ್ಯವಸ್ಥಿತವಾದಂತಹ ಒಪ್ಪಂದಕ್ಕೆ ಬರುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಈ ಕೆಲಸವನ್ನು ಬಹಳ ಜಾಗರೂಕತೆಯಿಂದ

ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿರತಕ್ಕಂಥಾದ್ದು. ನಿಜವಾಗಲೂ ಮೆಚ್ಚತಕ್ಕಂಥಾದ್ದು ಅವರು ಇದರಲ್ಲಿ ಬಹಳ ಮುಂದೆ ಹೋಗಬೇಕು ಎನ್ನುವಂತಹ ಮಾತನ್ನು ತಮಗೆ ಹೇಳುತ್ತಿದ್ದೇನೆ. ಮಾನ್ಯ ಬಂಗಾರಪ್ಪನವರು ಏನು ಸಲಹೆ ಮಾಡಿದರು ಆ ಸಲಹೆ ಪ್ರಕಾರ ತಕ್ಷಣ ಎಲ್ಲಾ ವಿರೋಧಪಕ್ಷಗಳ ಮುಖಂಡರ ಸಭೆಯನ್ನು ಕರೆದು ಒಂದು ತೀರ್ಮಾನಕ್ಕೆ ಬರಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಒಳ್ಳೆಯ ಸಂದರ್ಭದಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದೀರಿ. ನಮಗೆ ಗೊತ್ತಿರುವ ಹಾಗೆ ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಬಂಗಾರಪ್ಪನವರು ಹೇಳಿದ ಹಾಗೆ ಅದರೊಳಗೆ ಅನೇಕ ಜನ ಸೇರಿಕೊಂಡಿದ್ದಾರೆ. ಪ್ರಭಾವಿ ವ್ಯಕ್ತಿಗಳು ಕೋಟ್ಯಾಧಿಪತಿಗಳು ಈ ಸರ್ಕಾರಕ್ಕೆ ಸೇರಬೇಕಾದಂತಹ ಜಾಗವನ್ನು ಕಬಳಿಸುವಂತಹ ಪ್ರಯತ್ನವಾಗುತ್ತಿದೆ. ಅನೇಕ ಅಗ್ರಿಮೆಂಟ್‌ಗಳು ಆಗಿದೆ. ಯಾವ್ಯಾವುದೋ ಕಾರಣಕ್ಕೆ ಹಿಂದಿನವರು ಆ ಸಂಬಂಧದಲ್ಲಿ ಸೂಕ್ತವಾದಂತಹ ತೀರ್ಮಾನವನ್ನು ತೆಗೆದುಕೊಂಡಿದ್ದರೆ ಇವತ್ತು ಈ ಸ್ಥಿತಿಗೆ ಬರುತ್ತಿರಲಿಲ್ಲ. ತಾವು ಈಗ ಪ್ರಸ್ತಾಪ ಮಾಡಿದ್ದೀರಿ. ತಮಗೆ ಗೊತ್ತಿರುವ ಹಾಗೆ ಕೋರ್ಟಿಗೆ ಹೋಗಿ ಹೊಸ ಹೊಸದಾಗಿ ದಾಖಲೆಗಳನ್ನು ನಿರ್ಮಾಣ ಮಾಡಿ ಈ ಸಾರ್ವಜನಿಕ ಸ್ವತ್ತನ್ನು, ಯಾವುದೋ ರಾಜರಿಗೆ ಸೇರಿರತಕ್ಕಂಥ ಸ್ವತ್ತನ್ನು ಯಾವುದೋ ಹೆಣ್ಣುಮಗಳಿಗೆ ಹೇಗೆ ಅಧಿಕಾರ ಬರುತ್ತದೆ. ಆ ರೀತಿ ಅಗ್ರಿಮೆಂಟ್ ಆ ರೀತಿ ಹೊಸ ಹೊಸ ದಾಖಲಾತಿಗಳನ್ನು ಸೃಷ್ಟಿ ಮಾಡುವಂತಹ ಕೆಲಸ ಪ್ರಾರಂಭವಾಗಿದೆ. ಇದು ಮತ್ತೆ ಕಾಂಪ್ಲಿಕೇಷನ್ ಆಗುವುದಕ್ಕೆ ಮುಂಚೆ ದಯವಿಟ್ಟು ವಾಟಾಳ್ ನಾಗರಾಜ್‌ರವರು ಸಲಹೆ ಕೊಟ್ಟಂತೆ ಅಲ್ಲಿ ಇರುವವರ ಮೊದಲು ಹೊರಗೆ ಹಾಕಿ, ಸರ್ಕಾರದ ಪೊಸಿಷನ್‌ಗೆ ತೆಗೆದುಕೊಳ್ಳಿ. ಅಲ್ಲಿ ಅರಮನೆ ಇದೆ, ಅದನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಉಳಿಸೋಣ. ಅದು ರಾಜಮಹಾರಾಜರು ಕಟ್ಟಿದ್ದುದು ಅಂತಹ ಕಟ್ಟದವನ್ನು ಕಟ್ಟುವುದಕ್ಕೆ ಈಗ ಆಗುವುದಿಲ್ಲ ಆ ಆಸ್ತಿ ಒಂದು ಗುಂಟೆ ಸಹ ಪರರ ಅಧೀನಕ್ಕೆ ಹೋಗದಂತೆ ಸರ್ಕಾರ ಅದನ್ನು ಉಳಿಸಿ ಕೊಳ್ಳಬೇಕು. ಅದು ಸಾರ್ವಜನಿಕರಿಗೋಸ್ಕರ, ಈ ರಾಜ್ಯದ ಜನರಿಗೋಸ್ಕರ ಉಪಯೋಗ ಆಗುವ ಹಾಗೆ ಮಾಡುವುದಕ್ಕೆ ಈ ಭಾಗದ ಎಲ್ಲರ ಸಹಕಾರ ಇದೆ. ನೀವು ಸಭೆಯನ್ನು ಕರೆಯಬೇಡಿ. ಒಂದೇ ಒಂದು ಎಂದರೆ ಈ ಸ್ಥಳ ಸಾರ್ವಜನಿಕ ಸ್ವತ್ತಾಗಿ ಉಳಿಯಬೇಕು. ನೀವು ಏನು ನಿಲುವು ತೆಗೆದುಕೊಳ್ಳುತ್ತೀರಿ, ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ಒಂದು ಕ್ಷಣ ಸಹ ತಡ ಮಾಡಬೇಡಿ.

ಅಧ್ಯಕ್ಷರು : ಅನೇಕ ಸದಸ್ಯರು ಚೀಟಿಯನ್ನು ಬರೆದು ಕಳುಹಿಸುತ್ತಿದ್ದಾರೆ, ಈಗಾಗಲೇ 2 ಗಂಟೆ ಆಗುತ್ತಿದೆ, ಹಸಿವಾಗುತ್ತಿದೆ, ಉತ್ತರವನ್ನು ಒಂದು ಗಂಟೆ ಆದಮೇಲೆ ಮುಂದುವರೆಸೋಣ ಎಂದು.

ಶ್ರೀ ಹೆಚ್.ಡಿ.ದೇವೇಗೌಡ : ಆಗಬಹುದು. ನನ್ನದೇನು ಅಭ್ಯಂತರವಿಲ್ಲ. ಇನ್ನೂ ಸ್ವಲ್ಪ ಟೈಂ ಬೇಕಾಗುತ್ತದೆ. ನ್ಯಾಷನಲ್ ಗೇಮ್ಸ್ ಬಗ್ಗೆ ಹೇಳಬೇಕು.

ಅಧ್ಯಕ್ಷರು : ನಿಮ್ಮ ಆರೋಗ್ಯ ಬೇರೆ ಸರಿಯಿಲ್ಲ. ಒಂದು ಗಂಟೆ ಮುಂದಕ್ಕೆ ಹಾಕಿರೋಣ, ಊಟ ಮಾಡಿಕೊಂಡು ಬಂದಮೇಲೆ ಮುಂದುವರೆಸೋಣ. ಈಗ ಸಭೆ ಒಂದು ಗಂಟೆ ಕಾಲ ಮುಂದೂಡಿ ಮತ್ತೆ ಮೂರು ಗಂಟೆಗೆ ಪುನಃ ಸೇರುತ್ತದೆ.

(ಸಭೆಯು 1-53ಕ್ಕೆ ಮುಕ್ತಾಯಗೊಂಡು ಮತ್ತೆ ಮೂರು ಗಂಟೆಗೆ ಸೇರಲು ನಿಶ್ಚಯಿಸಿತು)

(ಸಬೆಯು ಪುನಃ ಮಧ್ಯಾಹ್ನ 3-00ಗಂಟೆಗೆ ಮತ್ತೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠಕ್ಕೆ ಆಗಮಿಸಿದರು)

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಪೋಲಿಸ್ ಬಗ್ಗೆ ಹಾಗೂ ಎಲ್ಲಾ ಮುಖಂಡರುಗಳ ಸಭೆಯನ್ನು ಕರೆದು ಅಲ್ಲಿ ಈ ವಿಷಯವನ್ನು ಚರ್ಚೆ ಮಾಡಿ ಅದಕ್ಕೆ ಅವಶ್ಯವಾದಂಥ ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂದು ಎಲ್ಲರೂ ಒಟ್ಟು ಅಭಿಪ್ರಾಯದಿಂದ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ರೂಲಿಂಗ್ ಪಾರ್ಟಿ ಮಂತ್ರಿಗಳೆಲ್ಲರೂ ಮಾನ್ಯ ಮುಖ್ಯ ಮಂತ್ರಿಗಳ ಭಾಷಣಕ್ಕೆ ಬಾಯ್‌ಕಾಟ್ ಮಾಡಿದ್ದಾರೆಂದು ಅನಿಸುತ್ತದೆ. ಏಕೆಂದರೆ ಮೊದಲನೆಯ ಸಾಲು, ಎರಡನೇ ಸಾಲು, ಮೂರನೆಯ ಸಾಲುಗಳು ಪೂರ್ತಿ ಖಾಲಿ ಇವೆ. ಬಹುಶಃ ನಾವು ಬಾಯ್‌ಕಾಟ್ ಮಾಡುವುದಕ್ಕೆ ಮುಂಚೆ ರೂಲಿಂಗ್ ಪಾರ್ಟಿ ಮಂತ್ರಿಗಳೇ ಬಾಯ್‌ಕಾಟ್ ಮಾಡಿ, ಮುಖ್ಯ ಮಂತ್ರಿಗಳ ಭಾಷಣವನ್ನು ಕೇಳುವುದು ಬೇಡ ಎಂದು ಮಾಡಿದ್ದಾರೇನೋ ಎಂದು ನನಗನ್ನಿಸುತ್ತದೆ.

ಶ್ರೀ ಹೆಚ್.ಡಿ.ದೇವೇಗೌಡ : ಸನ್ಮಾನ್ಯ ಹಿರಿಯ ಸದಸ್ಯರಾದ ಖಾರ್ಗೆಯವರು ಹೇಳಿದಂತಹ ಮಾತಿನಲ್ಲಿ ಅರ್ಥ ಇದೆ, ಏಕೆಂದರೆ, ನಾವು ಯಾವ ಟೈಮ್‌ನಲ್ಲಿ ಸಭೆ ಸೇರಿಸಬೇಕೆಂದು ನಿಗದಿ ಮಾಡಿರುತ್ತೇವೆ ಆ ಟೈಮ್‌ಗೆ ಬರದೇ ಇದ್ದರೆ ನಮ್ಮ ಕರ್ತವ್ಯದಲ್ಲಿ ನಾವು ಲೋಪ ಮಾಡಿದಂತೆ ಆಗುತ್ತದೆ. ರೂಲಿಂಗ್ ಪಾರ್ಟಿ ಎಂದು ಅಲ್ಲ. ಎಲ್ಲರೂ ತಿಳಿದುಕೊಳ್ಳಬೇಕು. ಅಗದರಲ್ಲಿ ರೂಲಿಂಗ್ ಪಾರ್ಟಿ ಜವಾಬ್ದಾರಿ ಬಹಳ ಹೆಚ್ಚಾಗಿರುತ್ತದೆ ಎಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನನ್ನ ಉದ್ದೇಶ ಇಷ್ಟೆ ನಾವೆಲ್ಲ ಏಕೆ ಓಡಿ ಬರುತ್ತೇವೆ? ಈ ಸಭೆಯಲ್ಲಿ ನಾಯಕರು ಮಾತನಾಡುತ್ತಾರೆ, ಸಭಾನಾಯಕರು ಕೇವಲ ಅವರಿಗೆ ಮಾತ್ರ ನಾಯಕರಲ್ಲ, ಇಡೀ ಸದನಕ್ಕೇ ಅವರು ನಾಯಕರು. ನಾಯಕರು ಮಾತನಾಡುವಾಗ ಅವರಿಗೆ ಗೌರವ ಸೂಚಿಸಬೇಕು, ನಮಗೆ ಎಷ್ಟೇ ಕೆಲಸ ಇದ್ದರೂ ಕೂಡ ನಾವು ಮಾತನಾಡಿದ್ದೇವೆ ಹೋಗಿಬಿಡೋಣ ಎಂದು ಯಾರು ಹೋಗುವುದಿಲ್ಲ. ಕೇಳಬೇಕು ಎಂದು ನಾವು ಯಾವರೀತಿ ಬರುತ್ತೇವೆ, ಅದೇ ರೀತಿ ಕೊನೆಯ ಪಕ್ಷ ತಮಗೆ ಸಪೋರ್ಟ್ ಆಗಿ ಅಥವಾ ಯಾವುದಾದರೂ ಇನ್‌ಫ್ರಮೇಷನ್ ಬೇಕಾದರೂ ಕೂಡ ಸಂಬಂಧಪಟ್ಟ ಇಲಾಖೆಯವರಿಂದ ಫೀಡ್

ಮಾಡಲಿಕ್ಕೆ ಕೂಡ ಆಗುತ್ತದೆ. ಆ ದೃಷ್ಟಿಯಿಂದ ಅವರ ಮಂತ್ರಿಗಳೇ ಆಗಲಿ ಅಲ್ಲಿ ಕೇಳಲಿಕ್ಕೆ ಇಲ್ಲ ಅಂದರೆ ಇದು ಅಭ್ಯಾಸವಾಗುತ್ತದೆ.

ಅಧ್ಯಕ್ಷರು : ಅಲ್ಲೆಲ್ಲಾ ನೀವೇ ಸ್ವಲ್ಪ ಸಪೋರ್ಟ್ ಮಾಡಿಬಿಡಿ ಇನ್ನೇನು ಮಾಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರೂ ಇಲ್ಲ ಎಂದರೆ ನೋಡೋಣ.

ಶ್ರೀ ಹೆಚ್.ಡಿ.ದೇವೇಗೌಡ : ನಾನು ಎಲ್ಲಾ ವಿರೋಧ ಪಕ್ಷದ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಇದು ಒಂದು ಮಹತ್ವದ, ಈ ವಿಷಯದ ವಿಷಯ ಬಗ್ಗೆ ಸರ್ಕಾರ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಲಿಕ್ಕೆ ಸಿದ್ಧವಿದೆ. ಈಗತಾನೆ ನಮ್ಮ ಮುಖ್ಯ ಕಾರ್ಯದರ್ಶಿಯವರು ಹೇಳಿದರು, ಕೆಲವು ಅರ್ಜಿಗಳು ಇನ್ನೂ ಕೋರ್ಟ್ ಮುಂದೆ ಬಿದ್ದಿವೆ ಎಂದು ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ತಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಇದರ ಬಗ್ಗೆ ತಾವು ಸೂಚಿಸಿರುವ ಹಿನ್ನೆಲೆಯಲ್ಲಿ ನಿರ್ಧಾರ ಮಾಡಲಿಕ್ಕೆ ಸಿದ್ಧನಿದ್ದೇನೆ. ಒಂದೆರಡು ಮಾತುಗಳನ್ನು ಮಾತ್ರ ಪ್ಲಾನ್‌ಔಟ್‌ಲೇ ಬಗ್ಗೆ ಹೇಳಬೇಕಾಗುತ್ತದೆ. ಹಿಂದಿನ ಸರ್ಕಾರದ ಮೇಲಿನ ದ್ವೇಷದಿಂದ ದೇವೇಗೌಡರು ಪ್ಲಾನ್ ವರ್ಕ್ಸ್‌ನ್ನೆಲ್ಲಾ ಸ್ಕ್ರಾಪ್ ಮಾಡಿ ಎಂದು ಹೇಳಿದ್ದಾರೆಂದು ಸನ್ಮಾನ್ಯ ಮಾಜಿ ಮುಖ್ಯ ಮಂತ್ರಿಗಳು ಆ ಭಾವನೆಯನ್ನು ದಯಮಾಡಿ ವ್ಯಕ್ತಪಡಿಸಬೇಕಾದ ಅವಶ್ಯಕತೆ ಇಲ್ಲ. ನೀವೇ 1993-94ರಲ್ಲಿ ಆ ವರ್ಷದ ಪ್ಲಾನ್ ಮಾಡಿದ್ದುದು 3,024 ಕೋಟಿ ರೂಪಾಯಿಗಳು ಅಚೀವ್ ಮಾಡಿರತಕ್ಕಂಥದ್ದು 2,796.90 ಕೋಟಿ ರೂಪಾಯಿಗಳು. ಈಗ ನನ್ನ ಮೇಲೆ ಆರೋಪಣೆ ಮಾಡಬಹುದು ಅಥವಾ ನನ್ನ ಹಣಕಾಸಿನ ಮಂತ್ರಿಗಳ ಮೇಲೆ ಆರೋಪಣೆ ಮಾಡಬಹುದು. 1993-94ರಲ್ಲಿ 3,024 ಕೋಟಿ ರೂಪಾಯಿ ಪ್ಲಾನ್ ಮಾಡಿದಿರಿ. ಆದರೆ ಅಂತಿಮವಾಗಿ ಆಗಿರತಕ್ಕದ್ದು 2796 ಕೋಟಿ. ಆದರೆ ನಾನು ಏನು ತಪ್ಪು ಮಾಡಿದೆ? ಮೂರು ತಿಂಗಳ ಮುಂಚೆ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದರಿಂದ ಆ 30 ಕೋಟಿ ರೂಪಾಯಿಗಳ ಏನು ನಷ್ಟ ಆಗುತ್ತಿತ್ತು ಅದನ್ನು ಉಳಿಸಿಕೊಂಡೆ ಅಷ್ಟೆ. ನೀವು ಅದನ್ನು ಹೇಳದೇ ಹೋದ ಪ್ರಯುಕ್ತ ಏನಾಯಿತು ಎಂದರೆ,

"Even till the end of the State Government stuck to the Rs.3024 crores outlay with the Planning Commission, there is an opportunity to reduce it in time and to get Planning Commission for reduction to avoid a cut in central plan assistance." Due to this we are losing Rs.20.68 crores central assistance. ಇದನ್ನು ಮಾಡಲಿಲ್ಲ ಎಂದು ನನ್ನ ಮೇಲೆ ಆರೋಪಣೆ ಮಾಡುತ್ತಾ ಇದ್ದೀರಿ. ವಸ್ತು ಸ್ಥಿತಿಯನ್ನು ಜನತೆಯ ಅಥವಾ ಸದನದ ಗಮನಕ್ಕೆ ತಂದಾಗ ಅದಕ್ಕೆ ಬೇರೆ ಸ್ವರೂಪ ಕೊಟ್ಟು ಬೇರೆ ಲೇಪ ಹಚ್ಚಿ ಮಾತನಾಡತಕ್ಕದ್ದು ಪ್ರಯೋಜನವಾಗುವುದಿಲ್ಲ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. 1994-95ಕ್ಕೆ ಇವರು ಬಜೆಟ್ ಐ.ಇ.ಬಿ.ಆರ್. 74 ಕೋಟಿ ಲೆಕ್ಕ ಇಟ್ಟುಕೊಂಡಿಕ್ಕಾರೆ. ಬಡ್ಜೆಟ್ ಸಪೋರ್ಟ್ 2,950 ಕೋಟಿ

ಒಟ್ಟು 3,024 ಕೋಟಿ ರಿವೈಸ್ಡ್ 449 ಎಂದು ಹಾಕಿಕೊಂಡಿದ್ದಾರೆ ಐ.ಇ.ಬಿ.ಆರ್. ಅಂದರೆ Interest and Extra Budgetary Resources 449.00 ಕೋಟಿ ಬಡ್ಜೆಟ್ ಸಪೋರ್ಟ್ 2,950 ಕೋಟಿಯಿಂದ 2,575ಕ್ಕೆ ಅವರೇ ತಂದಿದ್ದಾರೆ. ಅಚೀವ್‌ಮೆಂಟ್ 295 ಐ.ಇ.ಬಿ.ಆರ್.ನಿಂದ ಬಜ್‌ಟರಿ ಸಪೋರ್ಟ್ 2,501 ಕೋಟಿ ಒಟ್ಟು 2,796 ಕೋಟಿ. ಇನ್ನು ನೀವು ಪೇಪರ್ ಎಂದಾದರೂ ಕರೆದುಕೊಳ್ಳಿ ಅಥವಾ ಕಸದ ಬುಟ್ಟಿಗೆ ಹಾಕುತ್ತೇವೆ ಎಂದಾದರೂ ಹೇಳಿ. ನೀವು ಏನು ಹೇಳುವುದಕ್ಕೂ ಸ್ವಾತಂತ್ರ್ಯ ಇದೆ. ಬೇಡ ಎಂದು ಹೇಳಲಿಕ್ಕೆ ನಾನು ಯಾರು? ನನಗೇನೂ ದೋಷವಿಲ್ಲ. ಇದು ಮಾನ್ಯ ರಾಜಶೇಖರಮೂರ್ತಿಯವರು ಕೊಟ್ಟಿರತಕ್ಕದ್ದು ಎಂದು ನಾನು ಹೇಳುತ್ತಿಲ್ಲ. ಅದು ಅವರ ಸರ್ಕಾರದ ಧೋರಣೆ, ಹಿಂದಿನ ಸರ್ಕಾರ ಹೇಗೆ ಕೆಲಸ ಮಾಡಿತ್ತು ಎನ್ನುವುದನ್ನು ತಿಳಿಸತಕ್ಕಂಥದ್ದನ್ನು ಮಾಡಿದ್ದಾರೆ. ಇದರ ಜೊತೆಗೆ ಒಂದು ಮಾತನ್ನು ಸೂಕ್ಷ್ಮವಾಗಿ ಹೇಳಲು ಇಚ್ಛಿಸುತ್ತೇನೆ. ಇದು ಹೇಗೆ ಬಂತು ಅಂದರೆ ಐ.ಇ.ಬಿ.ಆರ್.ದ್ದು ಹೌಸಿಂಗ್‌ಗೆ ಸಂಬಂಧಪಟ್ಟಂತೆ ಇಲ್ಲಿ ಇರುವ ಫಿಗರ್‌ಗಳನ್ನು ಪ್ರಿಂಟ್ ಮಾಡಿಕೊಟ್ಟಿರುವವರು ನೀವೇ. ಹೌಸಿಂಗ್‌ಗೆ 75 ಕೋಟಿ, ಹುಡ್ಕೋದಿಂದ ಬಂದಿರತಕ್ಕ ಸಾಲ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ 191 ಕೋಟಿ ಸಾಲ. ನಾನು ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಹೋಗುವುದು ಬೇಡ. ಆಮೇಲೆ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಥ ಸ್ಟೋರೇಜ್ ಬೋರ್ಡ್‌ಗೆ 13 ಕೋಟಿ ಸಾಲ, ಒಟ್ಟು 295 ಕೋಟಿ ಐ.ಇ.ಬಿ.ಆರ್.ನಿಂದ ತಂದಿರತಕ್ಕದ್ದು ಇಷ್ಟಾದರೂ ಬಂದಿರತಕ್ಕದ್ದು ಅಂದರೆ 3,025 ಕೋಟಿಗೆ ಬದಲಾಗಿ 2,769 ಕೋಟಿ ರೂಪಾಯಿಗಳು. ಇವೆಲ್ಲವನ್ನೂ ವ್ಯಾಖ್ಯಾನ ಮಾಡಲಿಕ್ಕೆ ನಾನು ಹೋಗುವುದಿಲ್ಲ. ನಾಲ್ಕು ತಿಂಗಳುಗಳಲ್ಲಿ ಈ ರಾಜ್ಯಕ್ಕೆ ನಾವು ಏನೋ ದ್ರೋಹ ಮಾಡಿಬಿಟ್ಟಿದ್ದೇವೆ ಎಂದು ಹೇಳಿದ್ದೀರಿ. ನಾನು ಎಲ್ಲವನ್ನೂ ಓದುವುದಕ್ಕೆ ಹೋಗದೆ ಕೆಲವು ಅಂಶಗಳನ್ನು ಮಾತ್ರ ಓದುತ್ತೇನೆ. Distribution of house sites under Ashraya scheme 1993-94, achievement 45.05%, construction of house under Ashraya Scheme 54.49% construction of houses under Ashraya Scheme (Urban) 29.22%. ನಾನು ಹೇಳುತ್ತಿರುವುದೆಲ್ಲಾ 100% urban development Authorities including construction of houses under PHS (Rural)10.14% Karnataka Housing Board 16.46% Ashraya houses Action programme for development of Karnataka 1993-94, achievements up to 31st March ,1994. ನನ್ನನ್ನು ತುಂಬ ಟೀಕೆ ಮಾಡಿದ್ದಾರೆ, ಅದು ಏನೆಂದರೆ ಶಿಥಿಲತೆ ಇನ್ನೂ ಮುಂತಾದ್ದು, ಆದರೆ ನಾನು ಯಾರ ಮನಸ್ಸನ್ನೂ ನೋಯಿಸುವುದಕ್ಕೆ ಹೋಗುವುದಿಲ್ಲ. ಇವರು ಕೊಟ್ಟಿರತಕ್ಕ ಫಿಗರ್ಸ್ ಹೇಗಿದೆ ಎಂದು ನಾನು ನೋಡಿದೆ, ಇನ್ನೂ ಒಂದು ಸಲ ಹೇಳುತ್ತೇನೆ. ಅದೆಲ್ಲ ನಾನು ಸ್ವಲ್ಪ ತಿಳಿದುಕೊಳ್ಳುವುದಕ್ಕೆ ಅಭ್ಯಾಸ ಮಾಡಿಕೊಳ್ಳಲಿಕ್ಕೆ ಪ್ರಯತ್ನ

ಮಾಡಿದೆ ಅಷ್ಟೆ ಇನ್ನು 200 ದಿನಗಳ ಕಾರ್ಯಕ್ರಮಗಳು ಏನು ಇದೆ, ಅದೇ ಕಾರ್ಯಕ್ರಮಗಳನ್ನೇ ಮತ್ತೆ ಮತ್ತೆ ಸುತ್ತಿ ಬಳಸಿ ತಂದಿದ್ದಾರೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗದೆ ಇಷ್ಟು ಮಾತ್ರ ಹೇಳುತ್ತೇನೆ. ನೀವು ಎಷ್ಟು ದೂರ ವಿಷಯವನ್ನು ಎಳೆದುಕೊಂಡು ಹೋಗುತ್ತೀರಿ ಎಂದು ಮಾನ್ಯ ನಂಜೇಗೌಡರು ಕೇಳಿದರು. ಇನ್ನು ಹಣಕಾಸಿನ ಪರಿಸ್ಥಿತಿಯ ಬಗ್ಗೆ ಹೇಳಲಿಕ್ಕೆ ಹೋಗುವುದಿಲ್ಲ. ಪಿ.ಡಿ. ಅಕೌಂಟ್ಸ್ ಬಗ್ಗೆ ಹೇಳುವುದಕ್ಕೆ ಹೋಗಿ ನಮ್ಮ ರಾಜ್ಯದ ಗೌರವವನ್ನು ನಾವೇ ಹಾಳುಮಾಡಿಕೊಳ್ಳುವುದು ಬೇಡ. 30ನೇ ನವೆಂಬರ್ 1994ರಲ್ಲಿ 532 ಕೋಟಿ ಪಿ.ಡಿ.ಅಕೌಂಟ್ ಇತ್ತು. ಇವತ್ತು ಅದೆಲ್ಲಾ ಬೇಡ. ಜನತಾ ದಳ ಸರ್ಕಾರ ಅಧಿಕಾರ ಬಿಟ್ಟ ಮೇಲೆ ಅಂದರೆ ಮಾನ್ಯ ಬೊಮ್ಮಾಯಿಯವರು ಅಧಿಕಾರವನ್ನು ಬಿಟ್ಟಾಗ 160 ಕೋಟಿ ಇತ್ತು. 30.11.94ರಲ್ಲಿ 532 ಕೋಟಿ ಪಿ.ಡಿ.ಅಕೌಂಟ್ ಇತ್ತು. ಇದನ್ನು ನಾನು ಜನತೆಯ ತೀರ್ಮಾನಕ್ಕೆ ಸದನದ ಮುಖಾಂತರ ಬಿಡುತ್ತೇನೆ. ಅವರ ಭಾಷಣದಲ್ಲಿ ಇಂಡಸ್ಟ್ರೀಸ್ ಬಗ್ಗೆ ಹೇಳುತ್ತಾ, ಕರ್ನಾಟಕ ಇಂಡಸ್ಟ್ರಿನಲ್ಲಿ 8ನೇ ಸ್ಥಾನದಲ್ಲಿತ್ತು ಎಂದು ಹೇಳಿದ್ದಾರೆ ಒಂದು ಕಾಲದಲ್ಲಿ ಪ್ರಮುಖ ಉದ್ಯಮಶೀಲ ರಾಜ್ಯ ಎಂದು ಹೆಸರುವಾಸಿಯಾಗಿದ್ದ ಕರ್ನಾಟಕ ಈಗ ಕೈಗಾರಿಕಾ ಕ್ಷೇತ್ರದಲ್ಲಿ 8ನೇ ಸ್ಥಾನಕ್ಕೆ ಇಳಿದಿರುವುದು ದುರ್ದೈವದ ಸಂಗತಿಯಾಗಿದೆ ಎಂದು ಹೇಳಿದ್ದಾರೆ. ಆಮೇಲೆ ನಾನು ಹಾಗೇ ತಿರುವಿ ಹಾಕಿ ನೋಡಿದೆ.

" As promised last year we have announced a dynamic industrial policy for our state. The policy gives a package of incentive for prospective enterpreneurs."

Except the Bangalore Urban District ಎಂದು ಹೇಳಿ "State has already reached 3rd position. We have promised last year that in the field of industrial development, Karnataka has advanced to No.4 position in India by 1995. In terms of industrial investment sanction by advances, the state has already reached the 3rd place. ಅಂದರೆ 12 ತಿಂಗಳಿನಲ್ಲಿ 8ನೇ ಸ್ಥಾನದಿಂದ 3ನೇ ಸ್ಥಾನಕ್ಕೆ ಜಂಪ್ ಆಗಿದೆ. ಇವತ್ತು ಎನ್.ಜಿ.ಇ.ಎಫ್.ಮಾರಬೇಕೋ? ಅಥವಾ ಇಟ್ಟುಕೊಳ್ಳಬೇಕೋ ಎಂದು ಇವತ್ತು ಚರ್ಚೆ ನಡೆಯುತ್ತಾ ಇದೆ. ನೀವು 200 ಕೋಟಿ ಕೊಟ್ಟರೆ ಉಳಿಕೊಳ್ಳಬಹುದು ಎಂದು ಆಫಿಸರ್ಸ್ ರಿಪೋರ್ಟ್ ಕೊಡುತ್ತಾರೆ. ಅದನ್ನು ಮಾಡಬೇಕು ಎಂದು ಹೇಳುತ್ತಾರೆ, ರೆಜುನುಯೇಟ್ ಮಾಡಬೇಕು ಎಂದು ಇದಕ್ಕೆ ಕಾಯಕಲ್ಪ ಚಿಕಿತ್ಸೆ ಎಂದು ಕನ್ನಡದಲ್ಲಿ ಹೇಳುತ್ತಾರೆ. 1993-94ರಲ್ಲಿ ವಿಕ್ರಾಂತ್ 25ಕೋಟಿ ರೂಪಾಯಿಗಳ ನಷ್ಟ ಹೊಂದಿದೆ ಅದೇರೀತಿ ಎನ್.ಜಿ.ಇ.ಇಫ್. ಮೈಸೂರು ಲ್ಯಾಂಪ್ಸ್, ಮೈಸೂರು ಅಸಿಟೇಟ್,ಕಿವ್ಕೋ, ಕೆ. ಎಸ್.ಡಿ.ಎಲ್.ಇವೆಲ್ಲಾ ನಷ್ಟದ ಕಂಪನಿಗಳು ಒಂದು ಕಡೆ ಇರಲಿ. ರೋಗಗ್ರಸ್ಥ ಕಂಪೆನಿಗಳ ಒಟ್ಟು ನಷ್ಟ 13,950 ಕೋಟಿರೂಪಾಯಿಗಳು. ಇದು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನದು ಇನ್ನು

ಮಿಡಿಯಂ ಸ್ಕೇಲ್ ಮತ್ತೆ ಲಾರ್ಜ್ ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ 746ರಲ್ಲಿ 113, ಇದನ್ನು ಒಂದೆರಡನ್ನು ಹೇಳಿದರೆ ತಾವು ವ್ಯಾಖ್ಯಾನ ಮಾಡುವುದಕ್ಕೆ ಅನುಕೂಲವಾಗುತ್ತದೆ.

'Statewise distribution of IEMs filed during the period August 91 to December 94. Date compiled and diseminated by Industries Division NIC, Karnataka stands 10th place.

This is December,94

'By Industries Division during the period investment i.e., distribution of IEMs filed during the period,Karnatka stands 8th place. Date compiled and disseminated Industries Division. Statewise investment, distribution of EOU-10th place. Statewise distribution of EOU in respect of foreign exchange earnings-6th place. For foreigndirect investment cases approved by all sections for the period Augudst 91 to Novermbor 94, 10th place, Karnataka' ಕೇವಲ 4 ತಿಂಗಳಲ್ಲಿ ಈ ರಾಜ್ಯವನ್ನು ಇವರು ಏನೋ ಮಾಡಿ ಮುಳುಗಿಸಿದರು, ಕ್ಯಾಪಿಟೇಷನ್ ಫೀ ಲಾಬಿ ಒಂದು, ಇನ್ನೊಂದು ಎಕ್ಸೈಜ್ ಲಾಬಿ ಜೊತೆ ಸೇರಿ ಈ ರಾಜ್ಯವನ್ನೇ ಮುಳುಗಿಸಿದರು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್ ವಿಚಾರದಲ್ಲಿ ಎರಡು ಉದಾಹರಣೆಗಳನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಮೈಸೂರು ಸೋಪ್ಸ್ ಅಂಡ್ ಡಿಟರ್ಜಂಟ್ ಕಂಪನಿಯು ನಾವು ಅಧಿಕಾರಕ್ಕೆ ಬರುವ ಹೊತ್ತಿಗೆ ಸುಮಾರು 60-70 ಕೋಟಿ ರೂಪಾಯಿಗಳ ನಷ್ಟದಲ್ಲಿತ್ತು. ಈಗ ಅದು 80 ಅಥವಾ 100 ಕೋಟಿಗೆ ಹೋಗಿದೆಯೇ ಏನೋ ನನಗೆ ಸರಿಯಾಗಿ ಗೊತ್ತಿಲ್ಲ. ಇತ್ತೀಚಿನ ಅಂಕಿ ಅಂಶ ನನಗೆ ಸಿಕ್ಕಿಲ್ಲ. ಒಂದು ಆಶ್ಚರ್ಯಕರವಾದ ಸಂಗತಿ ಏನು ಎಂದರೆ, ಈ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್‌ನ್ನೆಲ್ಲಾ ಪ್ರೈವೆಟೈಸೇಷನ್ ಮಾಡಬೇಕು. ಏಕೆಂದರೆ ನಷ್ಟವನ್ನೆಲ್ಲಾ ತುಂಬಿಕೊಳ್ಳುತ್ತಾ ಕುಳಿತುಕೊಳ್ಳಲು ಆಗುವುದಿಲ್ಲ. ಏಕೆಂದರೆ ಇದು ತೆರಿಗೆದಾರರ ಹಣ ಎನ್ನತಕ್ಕಂತದ್ದು ಒಂದು ವಾದವಾಗಿದೆ. ಆ ವಾದದಲ್ಲಿ ಹುರುಳು ಇಲ್ಲ ಎಂದು ಅಲ್ಲ. ಪ್ರತಿವರ್ಷ ಲಾಸ್ ಆಗುತ್ತಾ ಇರುವುದು, ತುಂಬಿಕೊಳ್ಳುತ್ತಾ ಇರುವುದು ಇದು ಆಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ ಬಗ್ಗೆ ಹೇಳುವುದಾದರೆ, ನನ್ನ ಕಾಲದಲ್ಲಿ ಒಂದು ಟನ್ ಶ್ರೀಗಂಧದ ಮರಕ್ಕೆ 1,44,000 ರೂಪಾಯಿಗಳನ್ನು ನಿಗದಿಮಾಡಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೆ, ಬೇಕಾದರೆ ಇಂಡಸ್ಟ್ರೀಸ್ ಡಿಪಾರ್ಟಮೆಂಟಿನಿಂದ ತಾವು ತರಿಸಿ ನೋಡಿಕೊಳ್ಳಬಹುದು. ಕಾರಣ

ಆ ಕಂಪನಿ ಲಾಸ್ ಆಗುವುದನ್ನು ಏನಾದರೂ ಮಾಡಿತಪ್ಪಿಸಬೇಕೆಂಬ ತೀರ್ಮಾನವನ್ನು ಮಾಡಿದೆ. ನಿಮ್ಮ ಸರ್ಕಾರ ಬಂದಮೇಲೆ ಇತ್ತೀಚೆಗೆ I don't know why that cost of this Srigandha is hiked. It has now reached, according to the latest figure Rs. 2,75,000/- per tonne. ಶ್ರೀ ಗಂಧದ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೆಂದು ನೀವು ಹೇಳಬಹುದು. ತಮಗೆ ಗೊತ್ತಿರುವ ಹಾಗೆ ಆ ಕಾಲದಲ್ಲಿ, ರಾಜ ಮಹಾರಾಜರ ಕಾಲದಿಂದಲೂ ಬಂದಿರತಕ್ಕಂಥದ್ದು ಅದು ಎನ್ನತಕ್ಕಂತಹ ದೃಷ್ಟಿಯಿಂದ ಈ ವರ್ಷ ಅಲ್ಲಿ ಇನ್‌ಷ್ಯೂರೆನ್ಸ್ ತೆಗೆದುಕೊಳ್ಳಿ ಅವಶ್ಯಕವಾಗಿ ನೋಡುವ ಹಾಗಿಲ್ಲ, ಬಿಡುವ ಹಾಗಿಲ್ಲ. ಆಗುತ್ತಿದ್ದ ನಷ್ಟವನ್ನು ಕೆಲವು ಜನ ಆಫೀಸರ್‌ಗಳು ಸೇರಿ plug ಮಾಡತಕ್ಕಂತಹ ನಿಷ್ಠಾವಂತ ಕೆಲಸವನ್ನು ಮಾಡಿದ್ದಾರೆ. ಬಹುಶಃ ದೇಸಾಯಿ ಕಮಿಷನ್ ಯಾವುದೋ ಒಂದು ನೀವು ಮಾಡಿರಬೇಕು, ಎನ್‌ಕ್ವೈರಿ ಮಾಡುವುದಾದರೆ ಮಾಡಿಕೊಳ್ಳಿ. ಮಾಡಿ ಯಾವ ಕ್ಲಾಸ್ ಎಂದು ನೀವು ಮಾಡಿಕೊಳ್ಳಿ. ಹಲವಾರು ವರ್ಷಗಳ ನಂತರ ಈ ಸಾರಿ ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ ಕಂಪನಿ 80-90 ಲಕ್ಷ ರೂಪಾಯಿಗಳನ್ನು ಅದು ನೆಟ್ ಪ್ರಾಫಿಟ್ ಮಾಡಿದೆ. ಇದು ನಮಗೆ ಆಶ್ಚರ್ಯವಾಗಿದೆ. ನಷ್ಟದಲ್ಲಿದ್ದುದು ಈಗ ಲಾಭಕ್ಕೆ ಬಂದಿದೆ. ಅಲ್ಲಿಯ ಅಧಿಕಾರಿಗಳು ಮಾಡಿ ತೋರಿಸಿದ್ದಾರೆ. ಆದುದರಿಂದ ಈ ಶ್ರೀಗಂಧದ ಬೆಲೆಯನ್ನು 2,75,000 ರೂಪಾಯಿಗಳು ಇರುವುದನ್ನು ಮತ್ತೆ 1,44,000 ರೂಪಾಯಿಗಳಿಗೆ ತಂದರೆ....

ಶ್ರೀ ಹೆಚ್.ಡಿ.ದೇವೇಗೌಡ : ತಾವು ಈ ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ನಮ್ಮ ಅಧಿಕಾರಿಗಳು ಈಗತಾನೆ ವರದಿ ಕೊಡುತ್ತಿದ್ದಾರೆ. It is already under consideration to reduce the prise of Sandalwood,. I willget it examined and when I take a decision I will come back to the House. I don't want to allow the industry to suffer because of this. ಇದು ನನ್ನ ಗಮನಕ್ಕೆ ಬರದೇ ಆಗಿರತಕ್ಕದ್ದು.

ಶ್ರೀ ಎಸ್.ಬಂಗಾರಪ್ಪ : ಬಹಳ ಸಂತೋಷ, ತಾವು ಏನಾದರೂ ಮಾಡಿ ಆ ಕಂಪನಿಯನ್ನು ಉಳಿಸಬೇಕು ಎಂದು ತಾವು ಹೇಳಿದ್ದೀರಿ, ಅದಕ್ಕೆ ನಾನು ನಿಮಗೆ ಅಭಿನಂದಿಸುತ್ತೇನೆ. ಆದರೆ ಕೆಲವರನ್ನು ಅಲ್ಲಿ ಡೈರೆಕ್ಟರ್ಸ್ ಆಗಿ ಮಾಡಿದ್ದಾರೆ. ನಮ್ಮ ಸರ್ಕಾರ ಬಂದಮೇಲೆ ಅವರನ್ನು ಡೈರೆಕ್ಟರ್‌ಗಿರಿಯಿಂದ ತೆಗೆದು ಹಾಕಿದ ಮೇಲೆ ಲಾಭ ಬಂದಿತ್ತು. ಆದರೆ ನಿಮ್ಮ ಸರ್ಕಾರ ಬಂದ ಮೇಲೆ ಮತ್ತೆ ಹಳೆಯ ಡೈರಕ್ಟರ್‌ಗಳನ್ನೇ ಡೈರಕ್ಟರ್‌ಗಳನ್ನಾಗಿ ಮಾಡಿದ್ದೀರಿ. ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನೀವು ಪ್ರೈವೇಟಾಗಿ ಬೇಕು ಎಂದರೆ ನಾನು ಬರೆದು ಕಳುಹಿಸಿಕೊಡುತ್ತೇನೆ. ನಾನು ಯಾರ ಮೇಲೂ ಆಪಾದನೆ ಮಾಡಬೇಕು ಎಂದಲ್ಲ. ಮೊದಲು ಅವರನ್ನು ತೆಗೆದು ಹಾಕಿ. ಅವರನ್ನು ದೂರ ಇಡಿ. ಅವರನ್ನು ದೂರ ಇಟ್ಟಮೇಲೆಯೇ ಅದು ಲಾಭಕ್ಕೆ ಬಂದಿರುವುದು. ಇದು ಒಂದನೆಯದು.

ಎರಡನೆಯದಾಗಿ ಎನ್.ಜಿ.ಇ.ಎಫ್. ನನ್ನ ಕಾಲದಿಲ್ಲಿ ಈ ವಿಚಾರ ಬಂತು. ಈಗಿರತಕ್ಕ ಮುಖ್ಯ ಕಾರ್ಯದರ್ಶಿಯವರೇ ಅಲ್ಲಿದ್ದರು. ನನ್ನ ಗಮನಕ್ಕೆ ಬಂದಾಗ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ ಅನ್ನು ಹೇಗೆ ಮಾಡಬೇಕೆಂದು ವಿಚಾರ ಮಾಡಿದೆ. ಬೇರೆ ಮಾರ್ಗ ಮಾಡದೆ ವಿಧಿ ಇರಲಿಲ್ಲ. ಅವರು ಹೇಳಿದರು ಎಂದು ಅಲ್ಲ. ವಿಷಯ ಚರ್ಚೆಗೆ ಬಂತು. ನಾವು ಒಂದು ತೀರ್ಮಾನ ಮಾಡಿ ಮೇಜರ್ ಷೇರ್ಸ್ ಏನು ಇದೆಯಲ್ಲ ಅದನ್ನು ನಾವು ಇಟ್ಟುಕೊಂಡು ಸರ್ಕಾರದವರು ಕಂಟ್ರೋಲ್ ಮಾಡುವುದು. ಎನ್.ಜಿ.ಇ.ಎಫ್ ಉಳಿಸಿಕೊಳ್ಳಬೇಕೆಂದರೆ 200 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಈಗ ತಾವು ಹೇಳಿದಿರಿ. ಅದು ನಿಜ. ಈಗಿರತಕ್ಕ ಲೇಟೆಸ್ಟ್ ಫಿಗರ್ ಪ್ರಕಾರ ಹತ್ತಿರ ಹತ್ತಿರ 200 ಕೋಟಿ ರೂಪಾಯಿ ಇದೆ ಎಂದು ಕೇಳಿದ್ದೇನೆ. ಆದಕಾರಣ, ನಾವು ತೀರ್ಮಾನ ಮಾಡಿದೆವು, ಮೇಜರ್ ಷೇರ್ಸ್ ನಾವು ಇಟ್ಟುಕೊಳ್ಳಬೇಕು, ಬೇರೆ ಷೇರ್ಸ್ ಬೇರೆಯವರಿಗೆ ಕೊಡೋಣ, ಆ ರೀತಿ ಕಂಟ್ರೋಲ್ ಮಾಡಿ ಎನ್.ಜಿ.ಇ.ಎಫ್. ಅನ್ನು ನಾವು ಇಟ್ಟುಕೊಳ್ಳೋಣ ಎಂಬ ತೀರ್ಮಾನವನ್ನು ನಾವು ಮಾಡಿದೆವು. 200ಕೋಟಿ ರೂಪಾಯಿ ಬೇಕು ಎಂದು ದೊಡ್ಡದಾಗಿ ತೋರಿಸುತ್ತಾರೆ. ನಾವು ಆದರಿಂದ ಮಿಸ್‌ಗೈಡ್ ಆಗಬಾರದು. ಬಹಳ ಎಚ್ಚರಿಕೆಯಿಂದ ಇದ್ದರೆ ಒಳ್ಳೆಯದು. ತಾವು ಮಿಸ್‌ಗೈಡ್ ಆಗುತ್ತೀರೆಂದು ನಾನು ಹೇಳುತ್ತಿಲ್ಲ. ಹಾಗೆ ಆದೀತು ಎಂಬ ಅನಿಸಿಕೆಯಿಂದ ನಾನು ಹೇಳುತ್ತಿದ್ದೇನೆ. It is equally a very big prestigeous concern of our state government. ನಾವು ಅದನ್ನು ಕಳೆದುಕೊಳ್ಳಬಾರದು. ಅದಕ್ಕೆ ಮಾನ್ಯ ಸಭಾಧ್ಯಕ್ಷರ ಮೂಲಕ ನಾನು ಏನು ಸಲಹೆ ಕೊಡುತ್ತಿದ್ದೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಏನಾದರೂ ಮಾಡಿ ಅದನ್ನು ಉಳಿಸಿಕೊಳ್ಳಬೇಕು. ಅದು ರಾಜ್ಯ ಸರ್ಕಾರದ ಕೈಯಲ್ಲಿ ಇರಬೇಕು. 200 ಕೋಟಿ ರೂಪಾಯಿ ಅಂದರೆ 200 ಕೋಟಿ ರೂಪಾಯಿ ಅಷ್ಟೇ ಅಲ್ಲ. ಬ್ರೇಕ್‌ಅಫ್ ಫಿಗರ್ಸ್ ತಾವು ತರಿಸಿ ಇನ್ನೊಂದು ಸಾರಿ ನೋಡಿ ತೀರ್ಮಾನ ಮಾಡುವುದು ಒಳ್ಳೆಯದೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಬಂಗಾರಪ್ಪನವರು ಏನು ಹೇಳಿದರು ಎನ್‌ಜಿಇಎಫ್ ಬಗ್ಗೆ ನಾನು ಕೂಲಂಕಷವಾಗಿ ಇದರ ಬಗ್ಗೆ ಎನ್‌ವಕ್ವೈರಿ ಮಾಡಿ ಅಭ್ಯಾಸ ಮಾಡಿ ಒಂದು ನೋಟ್ ಕೂಡ ಆಗಿನ ಮುಖ್ಯ ಮಂತ್ರಿಗಳಿಗೆ ಕಳುಹಿಸಿದ್ದೆ. ಆ ನೋಟ್ ತಮ್ಮಲ್ಲಿ ಇರಬಹುದು. ಮುಖ್ಯ ಕಾರ್ಯದರ್ಶಿಯವರಿಗೆ ಒಂದು ಕಾಪಿ ಮತ್ತು ಮುಖ್ಯ ಮಂತ್ರಿಗಳಿಗೆ ಒಂದು ಕಾಪಿ ಕಳುಹಿಸಿದ್ದೆ. ಎನ್‌ಜಿಇಎಫ್‌ನಲ್ಲಿ ಆಗ ಬಹಳ ಲಾಸ್ ಅಂದರೆ 20 ಕೋಟಿ ರೂಪಾಯಿ ಸಮೀಪ ಇತ್ತು. ಲಾಸ್ ಇದ್ದಾಗ ಕೆಲವು ಜನ ಅಡ್ಡಾಡುತ್ತಿದ್ದರು. ಅಂದರೆ ಅಲ್ಲಿನ ಯೂನಿಯನ್‌ನವರು ಒಂದು ಕಡೆ, ಮ್ಯಾನೇಜ್‌ಮೆಂಟಿನವರು ಒಂದು ಕಡೆ, ಅವರೆಲ್ಲರೂ ಕೂಡಿ ಒಂದು ಲಾಬಿ ಮಾಡಿ, ಕೆಲವು ಜನ ಅದನ್ನು ಎಬಿಬಿಗೆ ಕೊಡಬೇಕು ಎಂದು, ಕೆಲವು ಜನ ಸರ್ಕಾರ ಅದನ್ನು ಪಬ್ಲಿಕ್ ಅಂಡರ್‌ಟೇಕಿಂಗ್ ಆಗಿ ಮುಂದುವರಿಸಬೇಕು ಎಂದು, ಕೆಲವು ಜನ ಅದನ್ನು ಬಿಹೆಚ್‌ಇಎಲ್‌ಗೆ

ಕೊಡಬೇಕು ಎಂದು ಹೇಳುತ್ತಿದ್ದರು. ಅದಕ್ಕಾಗಿ ನಾನು ಆಗ ಏನು ಸಲಹೆ ಮಾಡಿದ್ದೆ ಎಂದರೆ, ಬಿಹೆಚ್‌ಇಎಲ್ ಕೂಡ ಪಬ್ಲಿಕ್ ಅಂಡರ್‌ಟೇಕಿಂಗ್ ಆದಕಾರಣ, ಇದೂ ಕೂಡ ಪಬ್ಲಿಕ್ ಅಂಡರ್‌ಟೇಕಿಂಗ್ ಇರುವ ಕಾರಣ, ಯಾವ ರೀತಿ ನಾವು ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಂಪನಿ, ಭದ್ರಾವತಿ, ಇದನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿಕೊಟ್ಟಿದ್ದೇವೆ ಅದೇ ರೀತಿ ಇದನ್ನು ಕೂಡ ಮಾಡಿ ಮೇಜರ್ ಷೇರ್ಸ್ ಲಸ್ಸು ಬಿಹೆಚ್‌ಇಎಲ್‌ಗೆ ಕೊಟ್ಟರೆ ಅವರು ನಡೆಸುತ್ತಾರೆ. ಆಗಿನ ಎಂ.ಡಿ. ಛೇರ್ಮನ್ನರು ಏನಿದ್ದರು ಅವರು ಸ್ವತಃ ಹೇಳಿದ್ದರು, ನಾನು ಇದರಲ್ಲಿ ಸುಮಾರು ನೂರಿನ್ನೂರು ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡುತ್ತೇನೆಂದು ಹೇಳಿ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಕೂಡ ಸಂಪರ್ಕ ಮಾಡಿ ಮೀಟಿಂಗ್ ಮಾಡಿ ಅವರನ್ನು ಕರೆದುಕೊಂಡು ಬಂದು ಇಲ್ಲಿ ಮುಖ್ಯ ಕಾರ್ಯದರ್ಶಿಯವರ ಜೊತೆಯಲ್ಲಿ ಚರ್ಚೆ ಆಯಿತು. ಕೈಗಾರಿಕಾ ಕಾರ್ಯದರ್ಶಿಯವರ ಜೊತೆ ಚರ್ಚೆ ಮಾಡಿ ಪಾಪ ಅವರು ಸುಸ್ತಾಗಿ ಹೋದರು. ಆದರೆ ಯಾವ ಕಾರಣಕ್ಕಾಗಿ ಅದು ಲ್ಯಾಕ್‌ಔಟ್ ಆಯಿತು ಎಂದು ನನಗೆ ಗೊತ್ತಿಲ್ಲ. ಅವರೇ ಸ್ವತಃ ಮುಂದೆ ಬಂದಿದ್ದರು. ನಾವು ದುಡ್ಡು ಹಾಕುತ್ತೇವೆ, ಅದನ್ನು ನಮಗೆ ವಹಿಸಿಕೊಡಿ, ನಾವು ನಡೆಸಿ ಕೊಡುತ್ತೇವೆ, ಮತ್ತೆ ಯಾವ ಎಂಪ್ಲಾಯಿಸ್ ಅನ್ನು ತೆಗೆಯುವುದಿಲ್ಲ ಮತ್ತು ಅದು ಯಾವ ಸ್ಥಿತಿಯಲ್ಲಿದೆ ಅದಕ್ಕಿಂತ ಇನ್ನೂ ಚೆನ್ನಾಗಿ ನಡೆಸುತ್ತೇವೆ, ಅದನ್ನು ಮಾಡರ್ನೈಸ್ ಮಾಡುವುದಕ್ಕೆ ಏನೇನು ಸಹಾಯ ಬೇಕು ಅದನ್ನು ಕೂಡ ಕೊಡುತ್ತೇವೆಂದು ಹೇಳಿದ್ದರು. ಈ ಪರಿಸ್ಥಿತಿ ಇದ್ದಾಗ ಏತಕ್ಕೆ ಆ್ಯಕ್ಟ್ ಮಾಡಲಿಲ್ಲವೋ ನನಗೆ ಗೊತ್ತಾಗಲಿಲ್ಲ. ನಾನು ಪದೇ ಪದೇ ಹತ್ತು ಸಾರಿ ಫೈಲ್ ಬಂದರೂ ಕೂಡ ಅದರ ಮೇಲೆ ಸ್ಪಷ್ಟವಾಗಿ ಬರೆದಿದ್ದೆ, ಅದೇನೆಂದರೆ ಯಾವ ರೀತಿಯಾಗಿ ನಡೆಸಿಕೊಂಡು ಹೋಗಬೇಕು ಎಂದು. ಸೋಪ್ಸ್ ಅಂಡ್ ಡಿಟರ್ಜೆಟ್ಸ್ ಬಗ್ಗೆ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಅಕ್ಯುಮ್ಯುಲೇಟೆಡ್ ಲಾಸ್ ಸುಮಾರು....

Mr. Speaker : I am Sorry, I have a very bad news before me. ಶ್ರೀ ಮೊರಾರ್ಜಿ ದೇಸಾಯಿಯವರು ತೀರಿಕೊಂಡಿದ್ದಾರೆಂದು ಈಗ ವರ್ತಮಾನ ತಂದು ಕೊಟ್ಟಿದ್ದಾರೆ. "Former Prime Minister Morarji Desai died here this afternoon at the Jaslok hospital where he has admitted on March 20th. ಎಂದು ಹೇಳಿದ್ದಾರೆ.''

ಶ್ರೀ ಬಿ.ಎಸ್.ಯಡಿಯೂರಪ್ಪ : ಇಂಥ ಸಂದರ್ಭದಲ್ಲಿ ಸದನವನ್ನು ನಡೆಸುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ ಇದನ್ನು ಸಂತಾಪ ಸೂಚನಾ ಸಭೆಯಾಗಿ ಪರಿವರ್ತನೆ ಮಾಡಬಹುದು.

ಅಧ್ಯಕ್ಷರು : ಈಗ ಒಂದು ಕೆಲಸಮಾಡೋಣ. ಹತ್ತು ನಿಮಿಷಗಳ ಕಾಲ ಸಭೆಯನ್ನು ಮುಂದೂಡಿ ತಾವು ಎಲ್ಲರೂ ಅಲ್ಲಿ ಬಂದರೆ ನಾವೆಲ್ಲ ಕುಳಿತು we will draft a reslution be fitting his stature. ಆಮೇಲೆ ಇಲ್ಲಿ

ಎಲ್ಲರೂ ಸೇರಿ ಆ ನಿರ್ಣಯವನ್ನು ಮಂಡನೆ ಮಾಡೋಣ. ಈಗ ಕಾಲು ಗಂಟೆ ಸಭೆಯನ್ನು ಮುಂದಕ್ಕೆ ಹಾಕಿದ್ದೇನೆ.

(ಸಭೆಯು ಮತ್ತೆ 6.00 ನಿಮಿಷಕ್ಕೆ ಸಮಾವೇಶಗೊಂಡಿತುಪೀಠದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಉಪಸ್ಥಿತರಿದ್ದರು)

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು : ಮಾನ್ಯ ಸಭಾನಾಯಕರು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಬಹುದು.

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಭಾರತದ ಅದ್ವಿತೀಯ ಸ್ವಾತಂತ್ರ್ಯ ಹೋರಾಟಗಾರ, ಗಾಂಧೀವಾದಿ ಅಪ್ರತಿಮ ಸ್ವಾಭಿಮಾನಿ, ಸ್ವಾತಂತ್ರ್ಯ ಪ್ರೇಮಿ ಹಾಗೂ ಮಾಜಿ ಪ್ರಧಾನಿಯಾಗಿದ್ದ ಶ್ರೀ ಮೊರಾರ್ಜಿ ದೇಸಾಯಿ ಅವರು ಇಂದು ಮಧ್ಯಾಹ್ನ ಮುಂಬಯಿಯಲ್ಲಿ ನಿಧನರಾದ ಸುದ್ದಿಯನ್ನು ಅತೀತ ನೊಂದ ಮನಸ್ಸಿನಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ.

ಭಾರತದ ಮಹಾನ್ ನಾಯಕರಲ್ಲಿ ಒಬ್ಬರಾದ ಮೊರಾರ್ಜಿ ಅವರ ಶತಮಾನೋತ್ಸವ ಮಾರ್ಚ್ 1ರಂದು ಆರಂಭವಾಗಿತ್ತು. ಈ ಉತ್ಸವ ಆಚರಣೆಯ ಕಾಲದಲ್ಲಿ ಸ್ವಲ್ಪ ದಿನಗಳಾದರೂ ಅವರು ನಮ್ಮೊಡನೆ ಇದ್ದರು ಎಂಬುದೇ ನಮಗೆ ಸ್ವಲ್ಪ ಸಮಾಧಾನಕರವಾದ ಸಂಗತಿ. ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಅತ್ಯಂತ ಶ್ರಮದಿಂದ ವಿದ್ಯಾಭ್ಯಾಸ ಮಾಡಿ, ಸ್ವಾತಂತ್ರ್ಯ ಪೂರ್ವದ ಮುಂಬಯಿ ಪ್ರಾಂತ್ಯದಲ್ಲಿ ಸರ್ಕಾರಿ ಸೇವೆಗೆ ಸೇರಿದರು. ಆ ಕಾಲದಲ್ಲಿಯೇ ಅವರು ದಕ್ಷತೆಗೆ ಮತ್ತು ಪ್ರಾಮಾಣಿಕತೆಗೆ ಹೆಸರುವಾಸಿಯಾಗಿದ್ದರು. ಯುವಕರಾಗಿದ್ದಾಗಲೇ ರಾಷ್ಟ್ರದ ಸ್ವಾತಂತ್ರ್ಯ ಗಳಿಕೆಯ ತವಕವಿದ್ದ ಶ್ರೀ ಮೊರಾರ್ಜಿ ದೇಸಾಯಿಯವರು 1930 ರಲ್ಲಿ ತಮ್ಮ ಸರ್ಕಾರಿ ಹುದ್ದೆಗೆ ರಾಜೀನಾಮೆ ನೀಡಿ, ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅನೇಕ ಬಾರಿ ಕಾರಾಗೃಹ ವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಮುಂಬೈ ಪ್ರಾಂತ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದರು. 1952 ರಲ್ಲಿ ಹಿಂದಿನ ಮುಂಬೈ ಪ್ರಾತ್ಯದ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದರು. ಲೋಕಸಭೆ ಸದಸ್ಯರಾಗಿ, ಕೇಂದ್ರದಲ್ಲಿ ಅರ್ಥ ಸಚಿವರಾಗಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ, ಉಪ ಪ್ರಧಾನಿಯಾಗಿ ಹಾಗೂ ಪ್ರಧಾನಿಯಾಗಿ ರಾಷ್ಟ್ರದ ಸೇವೆ ಸಲ್ಲಿಸಿರುವ ಮುರಾರ್ಜಿಯವರು ಶಿಸ್ತು ಹಾಗೂ ಪ್ರಮಾಣಿಕತೆಗೆ ಇತರರಿಗೆ ಮಾದರಿಯಾಗಿದ್ದರು. ಶ್ರೀ ಮುರಾರ್ಜಿಯವರು ಸ್ವಾತಂತ್ರ್ಯ ಹೋರಾಟಗಾರರಾಗಿ ಸಚಿವರಾಗಿ ಹಾಗೂ ಪ್ರಧಾನಿಯಾಗಿ ಸೇವೆ ಸಲ್ಲಿಸುವ ಕಾಲದಲ್ಲೂ ಇತರ ನಾನಾ ಸಾಮಾಜಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಿದ್ದರು. ಗಾಂಧಿ, ಕಸ್ತೂರಿಬಾ, ಜವಹರಲಾನ್ ನೆಹರು, ಲಾಲ್‌ಬಹದ್ದೂರ್ ಶಾಸ್ತ್ರಿ, ಪಂಡಿತ ಪಂಥ್ ಹಾಗೂ ಸೋಮನಾಥ ಸ್ಮಾರಕ ದತ್ತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಶಕ್ತಿ ಇರುವವರೆಗೂ ಚರಕದಿಂದ ನೂಲು ತೆಗೆಯುವುದು ಅವರ ಹವ್ಯಾಸವಾಗಿತ್ತು. ಶ್ರೀ ಮೊರಾರ್ಜಿಯವರು ಶ್ರೇಷ್ಠ ಸಂಸದೀಯ